ಮಂಗಳವಾರ, ನವೆಂಬರ್ 14, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 315 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಕ್ಕಳ ದಿನದ ಶುಭಾಶಯಗಳು



ಕ್ಷೇಮ ಕುಶಲ
ಹೃದ್ರೋಗಗಳ ತೀವ್ರತೆಯನ್ನು ಆಹಾರಸೇವನೆಯ ಶಿಸ್ತಿನಿಂದ ಕಡಿಮೆ ಮಾಡಬಹುದು

ಪಾರದರ್ಶಕ ಪರೀಕ್ಷಾ ವ್ಯವಸ್ಥೆಗೆ ಕ್ರಮ– ಸರ್ಕಾರಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವರದಿ

ಅಕ್ರಮ ತಡೆಗೆ ಕೆಇಎ ಸೂತ್ರ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿವಿಧ ಇಲಾಖೆ, ನಿಗಮ–ಮಂಡಳಿಗಳಲ್ಲಿನ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು, ಕೊಠಡಿಯಲ್ಲಿ ಎಷ್ಟು ಅಭ್ಯರ್ಥಿಗಳು ಇರುತ್ತಾರೋ ಅಷ್ಟು ಆವೃತ್ತಿಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವುದು ಸೂಕ್ತ ಎಂದು ರಾಜ್ಯ ಸರ್ಕಾರಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವರದಿ ಸಲ್ಲಿಸಿದೆ.

ಬ್ಲೂಟೂತ್ ಸಾಧನ ಬಳಸಿ ಕೆಇಎ ನೇಮಕಾತಿ ಪರೀಕ್ಷೆ ಬರೆದ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಆರಂಭಿಸಿದ್ದಾರೆ. ಆ ಬೆನ್ನಲ್ಲೆ, ಇಂತಹ ಅಕ್ರಮಗಳನ್ನು ತಡೆದು ಪಾರದರ್ಶಕವಾಗಿ ಹಾಗೂ ನ್ಯಾಯ ಸಮ್ಮತವಾಗಿ ಪರೀಕ್ಷೆಗಳನ್ನು ನಡೆಸಲು ಸರ್ಕಾರದ ಹಂತದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ವರದಿ ಸಲ್ಲಿಸಿದ್ದಾರೆ.

ವಿವಿಧ ನಿಗಮಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ಕೆಇಎ ಅ. 28ರಂದು ನಡೆಸಿದ್ದ ಪರೀಕ್ಷೆಯಲ್ಲಿ ಕೆಲವು ಅಭ್ಯರ್ಥಿಗಳು ಬ್ಲೂಟೂತ್ ಸಾಧನ ಬಳಸಲು ಯತ್ನಿಸಿ ಸಿಕ್ಕಿಬಿದ್ದಿದ್ದಾರೆ. ಪ್ರಶ್ನೆ ಪತ್ರಿಕೆಗಳ ಆವೃತ್ತಿಗಳ ಸಂಖ್ಯೆ ಕಡಿಮೆ ಇರುವುದರಿಂದ ಬ್ಲೂಟೂತ್ ಮೂಲಕ ಆವೃತ್ತಿ 'ಎ' ಅಥವಾ 'ಬಿ' ಎಂದು ಅಭ್ಯರ್ಥಿಗೆ ಉತ್ತರಗಳನ್ನು ಹೇಳಿಕೊಡಲು ಪ್ರಯತ್ನ ನಡೆದಿತ್ತು. ಆ ರೀತಿ ಉತ್ತರ ಹೇಳುವುದನ್ನು ತಡೆಯಲು ಪ್ರಶ್ನೆಪತ್ರಿಕೆಗಳ ಆವೃತ್ತಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ವರದಿಯಲ್ಲಿ ಅವರು ವಿವರಿಸಿದ್ದಾರೆ.

> **ಸರ್ಕಾರಿ ನೌಕರಿಯ ಬಯಕೆ ವಾಮಮಾರ್ಗಗಳಿಗೆ ಎಡೆ ಮಾಡಿಕೊಡುತ್ತಿದೆ. ಅಕ್ರಮ ತಡೆಯಲು ಪರೀಕ್ಷಾ ವಿಧಾನ ಬದಲಿಸಿಕೊಳ್ಳುವುದು ಸೂಕ್ತವಾಗಿದೆ**
> **ಎಸ್. ರಮ್ಯಾ**
> ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು 04 (ಎಬಿಸಿಡಿ), 08 (ಎಬಿಸಿಡಿಇಎಫ್‌ಜಿ-ಎಚ್), 16ರ ಆವೃತ್ತಿಗಳಲ್ಲಿ ಸಿದ್ಧಪಡಿಸಲಾಗುತ್ತಿದೆ. ಇದರ ಬದಲು, ಎಷ್ಟು ಅಭ್ಯರ್ಥಿಗಳು ಇರುತ್ತಾರೋ ಅಷ್ಟು ಆವೃತ್ತಿಗಳಲ್ಲಿ ಸಿದ್ಧಪಡಿಸಬೇಕು. ಅಂದರೆ, ಒಂದು ಕೊಠಡಿಯಲ್ಲಿರುವ ಎಲ್ಲ ಅಭ್ಯರ್ಥಿಗಳಿಗೆ ಬೇರೆ ಬೇರೆ ಆವೃತ್ತಿಯ ಪ್ರಶ್ನೆಪತ್ರಿಕೆ ಒದಗಿಸಬೇಕು. ಇದರಿಂದಾಗಿ ಆವೃತ್ತಿ 'ಎ' ಅಥವಾ 'ಬಿ' ಎಂದು ಉತ್ತರಗಳನ್ನು ಹೇಳಲು ಕಷ್ಟಸಾಧ್ಯ. ಅಲ್ಲದೆ, ಆವೃತ್ತಿ ಬೇರೆ ಬೇರೆ ಇರುವುದರಿಂದ ಪ್ರಶ್ನೆಗಳನ್ನು ಪೂರ್ಣವಾಗಿ ಓದಿಯೇ ಉತ್ತರಗಳನ್ನು ಹೇಳಬೇಕಾಗಿರುತ್ತದೆ. ಪ್ರಶ್ನೆಗಳನ್ನು ಹುಡುಕಿ ಉತ್ತರ ಹೇಳುವುದು ಕಷ್ಟ. ಈ ವ್ಯವಸ್ಥೆ ಅಳವಡಿಸಿಕೊಂಡರೆ ಬ್ಲೂಟೂತ್ ಮತ್ತಿತರ ಅತ್ಯಾಧುನಿಕ ಸಾಧನಗಳನ್ನು ಬಳಸಿ ಪರೀಕ್ಷಾ ಅಕ್ರಮಕ್ಕೆ ಯತ್ನಿಸುವುದನ್ನು ತಡೆಯಬಹುದಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಭ್ಯರ್ಥಿಗಳಿಗೆ ಎರಡು ಹಂತಗಳಲ್ಲಿ ಬಹು ಆಯ್ಕೆ ಪರೀಕ್ಷೆಗಳನ್ನು ನಡೆಸಬೇಕು. ಮೊದಲ ಹಂತದಲ್ಲಿ ಆಯ್ಕೆಯಾದವರಿಗೆ ಮಾತ್ರ ಎರಡನೇ ಹಂತದಲ್ಲಿ ಪರೀಕ್ಷೆ ನಡೆಸಿ, ತೇರ್ಗಡೆ ಆದವರನ್ನು ಆಯ್ಕೆಗೆ ಪರಿಗಣಿಸಬೇಕು. ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿರುವವರ ಮೇಲೆ, ಪರೀಕ್ಷೆ ನಡೆಯುವ ಒಂದು ತಿಂಗಳ ಮೊದಲೇ ಪೊಲೀಸ್ ಇಲಾಖೆಯಿಂದ ರಚಿಸಲಾಗುವ ವಿಶೇಷ ಕಾರ್ಯಪಡೆ ನಿಗಾ ವಹಿಸಬೇಕು. ಅವಶ್ಯ ಇದ್ದರೆ ಮುಂಜಾಗ್ರತಾ ಕ್ರಮವಾಗಿ ಗಡಿಪಾರು ಮಾಡಬಹುದು. ಪರೀಕ್ಷಾ ಕೇಂದ್ರಗಳ ಸುತ್ತ ಕಟ್ಟೆಚ್ಚರ ವಹಿಸುವ ಜೊತೆಗೆ, ಗುಪ್ತಚರ ಮಾಹಿತಿ ಪಡೆಯಬೇಕು. ಪರೀಕ್ಷಾ ಕೇಂದ್ರಗಳು ಹಾಗೂ ಅಭ್ಯರ್ಥಿಗಳನ್ನು ತಪಾಸಣೆಗೆ ಒಳಪಡಿಸುವ ಜವಾಬ್ದಾರಿಯನ್ನು ಕೂಡಾ ಈ ಕಾರ್ಯಪಡೆಗೆ ವಹಿಸುವುದು ಸೂಕ್ತವಾಗಿದೆ ಎಂದೂ ವರದಿಯಲ್ಲಿದೆ.

ಅಭ್ಯರ್ಥಿಗಳ ಸಂಖ್ಯೆ ಹೆಚ್ಚು, ಹುದ್ದೆಗಳ ಸಂಖ್ಯೆ ಕಡಿಮೆ: ನಿಗಮ– ಮಂಡಳಿಗಳಲ್ಲಿನ ಖಾಲಿ ಹುದ್ದೆಗಳ ನೇರ ನೇಮಕಾತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮತ್ತು ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆಗಳಿಗೆ ಸಾಮಾನ್ಯವಾಗಿ 2 ಲಕ್ಷದಿಂದ 5 ಲಕ್ಷದವರೆಗೆ ಅಭ್ಯರ್ಥಿಗಳು ಭಾಗವಹಿಸುತ್ತಾರೆ. ಇತರ ಎಲ್ಲ ನೇಮಕಾತಿಗಳಿಗೆ ಹೋಲಿಸಿದರೆ ಎಸ್‌ಡಿಎ, ಎಫ್‌ಡಿಎ ನೇಮಕಾತಿಯಲ್ಲಿ ಅತೀ ಹೆಚ್ಚು ಅಭ್ಯರ್ಥಿಗಳು ಭಾಗವಹಿಸುತ್ತಾರೆ. ಪದವಿ ತರಗತಿಯಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳದ ಕಾರಣ ಮತ್ತು ಈ ಪರೀಕ್ಷೆಗಳನ್ನು ಬರೆಯಲು ಯಾವುದೇ ಪದವಿ ಅರ್ಹತೆ ಆಗಿರುವುದರಿಂದ ಲಕ್ಷಾಂತರ ಅಭ್ಯರ್ಥಿಗಳು ಹಾಜರಾಗುತ್ತಾರೆ.

8ನೇ ಪುಟ ನೋಡಿ

ಅಕ್ರಮ ತಡೆ ವಿಧಾನಗಳು

- ಪರೀಕ್ಷಾ ಕೊಠಡಿಯಲ್ಲಿರುವ ಅಭ್ಯರ್ಥಿಗಳ ಸಂಖ್ಯೆಯಷ್ಟೆ ಆವೃತ್ತಿಯ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಬೇಕು
- ಎರಡು ಹಂತಗಳಲ್ಲಿ ಬಹು ಆಯ್ಕೆ ಮಾದರಿಯಲ್ಲಿ ಪರೀಕ್ಷೆ ನಡೆಸಬೇಕು
- ಒಂದೇ ಬಾರಿ ಪರೀಕ್ಷೆ ನಡೆಸಿ, ಆ ಆಯ್ಕೆ ಪಟ್ಟಿಯಿಂದ ಎಲ್ಲ ಇಲಾಖೆ, ನಿಗಮ, ಮಂಡಳಿಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವ್ಯವಸ್ಥೆ ಆಗಬೇಕು
- ಎಫ್‌ಡಿಎ, ಎಸ್‌ಡಿಎ ನೇಮಕಾತಿಗೆ ಏಕರೂಪದ ಪಠ್ಯಕ್ರಮ, ಪರೀಕ್ಷಾ ವಿಧಾನವನ್ನು ಕಾನೂನು ಮೂಲಕ ರೂಪಿಸುವುದು ಸೂಕ್ತ
- ಅಕ್ರಮ ತಡೆಯಲೆಂದೇ ಪೊಲೀಸ್ ಇಲಾಖೆಯಲ್ಲಿ 'ವಿಶೇಷ ಕಾರ್ಯಪಡೆ'



ಬೆಳಕಿನ ಬೆಡಗು ದೀಪಾವಳಿ ಹಬ್ಬದ ಅಂಗವಾಗಿ ಕಲಬುರಗಿ ತಾಲ್ಲೂಕಿನ ಸಣ್ಣೂರ ಗ್ರಾಮದ ಲೋಕು ನಾಯಕ ತಾಂಡಾದಲ್ಲಿ ಬಂಜಾರ ಯುವತಿಯರು ಸೋಮವಾರ ರಾತ್ರಿ ದೀಪಗಳನ್ನು ಬೆಳಗುವ ಮೂಲಕ ದೀಪಾವಳಿ ಆಚರಿಸಿದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಶಾಸಕರಿಗೆ ಗಂಡ ಭೇರುಂಡ ಲಾಂಛನವುಳ್ಳ ಬ್ಯಾಡ್ಜ್: ಖಾದರ್

ಪ್ರಜಾವಾಣಿ ವಾರ್ತೆ



ಯು.ಟಿ. ಖಾದರ್

ಬೆಂಗಳೂರು: ಇದೇ ಮೊದಲ ಬಾರಿಗೆ ರಾಜ್ಯದ ಎಲ್ಲ ಶಾಸಕರಿಗೆ ಗಂಡಭೇರುಂಡ ಲಾಂಛನವಿರುವ ತಲಾ ಮೂರು ಬ್ಯಾಡ್ಜ್‌ಗಳನ್ನು ವಿತರಿಸಲು ವಿಧಾನಸಭೆ ಸಚಿವಾಲಯ ನಿರ್ಧರಿಸಿದೆ.

ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಈ ತೀರ್ಮಾನ ಕೈಗೊಂಡಿದ್ದಾರೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಪ್ರಮುಖರ ಜತೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ. ಒಬ್ಬ ಶಾಸಕರಿಗೆ ಒಂದು ಬ್ಯಾಡ್ಜ್ ವಿತರಿಸುವ ಪ್ರಸ್ತಾವ ಆರಂಭದಲ್ಲಿತ್ತು. ಈಗ ಶಾಸಕರ ಬೇಡಿಕೆಯಂತೆ ತಲಾ ಮೂರು ಬ್ಯಾಡ್ಜ್ ವಿತರಿಸಲು ತೀರ್ಮಾನಿಸಲಾಗಿದೆ.

8ನೇ ಪುಟ ನೋಡಿ

ಬಹುಮಾನವಾಗಿ ಕಪ್, ಸಾಸರ್

ಅಧಿವೇಶನದ ಅವಧಿಯಲ್ಲಿ ದಿನದಲ್ಲಿ ಮೊದಲಿಗರಾಗಿ ಸದನ ಪ್ರವೇಶಿಸುವ ಶಾಸಕರಿಗೆ ಬಹುಮಾನದ ರೂಪದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕೃತ ಲಾಂಛನಗಳನ್ನು ಅಚ್ಚು ಹಾಕಿಸಿದ ಕಪ್ ಮತ್ತು ಸಾಸರ್ ನೀಡಲು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ನಿರ್ಧರಿಸಿದ್ದಾರೆ.

'ವಿಧಾನಸಭೆಯ ಕಳೆದ ಅಧಿವೇಶನದಲ್ಲಿ ಬಹುಮಾನದ ವಿಚಾರ ಪ್ರಕಟಿಸಿದ್ದೆ. ಕೆಲವು ಶಾಸಕರಿಗೆ 15, 12 ಹೀಗೆ ಹಲವು ಬಹುಮಾನ ವಿತರಿಸಬೇಕಿದೆ. ರಾಜಭವನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಲಾಂಛನವನ್ನು ಅಚ್ಚು ಹಾಕಿಸಿರುವ ವಿಶೇಷ ಕಪ್, ಸಾಸರ್‌ಗಳನ್ನು ನೋಡಿದ ಬಳಿಕ ಅದೇ ಮಾದರಿಯ ಬಹುಮಾನ ನೀಡಲು ನಿರ್ಧರಿಸಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಇಂದು ಬಿಡುವು

ಓದುಗರಿಗೆ, ಏಜೆಂಟರಿಗೆ ಮತ್ತು ಜಾಹೀರಾತುದಾರರಿಗೆ **ದೀಪಾವಳಿ ಹಬ್ಬದ ಶುಭಾಶಯಗಳು**

ಬಲಿಪಾಡ್ಯಮಿ ಪ್ರಯುಕ್ತ ಮಂಗಳವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ, ಬುಧವಾರದ ಸಂಚಿಕೆ ಪ್ರಕಟವಾಗುವುದಿಲ್ಲ

ಒಳ ಪುಟಗಳು

ಮಧುಮೇಹಿ ಮಕ್ಕಳಿಗೆ ಉಚಿತ ಇನ್ಸುಲಿನ್

ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳಿಗೆ ಪೂರೈಸಲು ಆರೋಗ್ಯ ಇಲಾಖೆ ಕ್ರಮ

• ವರುಣ ಹೆಗಡೆ



ಡಾ. ಅನಿಲ್ ಕುಮಾರ್ ಆರ್.

ಬೆಂಗಳೂರು: ಮಧುಮೇಹ ಸಮಸ್ಯೆ ಎದುರಿಸುತ್ತಿರುವ ಮಕ್ಕಳಿಗೆ ಸರ್ಕಾರಿ ವ್ಯವಸ್ಥೆಯಡಿಯೇ ಉಚಿತವಾಗಿ ಇನ್ಸುಲಿನ್ ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದೆ. ಜನವರಿ ವೇಳೆಗೆ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಇನ್ಸುಲಿನ್ ಲಭ್ಯವಾಗುವ ಸಾಧ್ಯತೆಯಿದೆ.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳಲ್ಲಿ ಹೆಚ್ಚಾಗಿ ಟೈಪ್ 1 ಮಧುಮೇಹ (ಜುವೆನೈಲ್ ಡಯಾಬಿಟಿಸ್) ಕಾಣಿಸಿಕೊಳ್ಳುತ್ತಿದೆ. ಈ ಸಮಸ್ಯೆಗೆ ಒಳಗಾದವರಿಗೆ ನಿಯಮಿತವಾಗಿ ಇನ್ಸುಲಿನ್ ಅಗತ್ಯ. ಸರ್ಕಾರಿ ವ್ಯವಸ್ಥೆಯಡಿ ಸದ್ಯ ಉಚಿತವಾಗಿ ದೊರೆಯದಿದ್ದರಿಂದ ಇನ್ಸುಲಿನ್‌ಗೆ ಪ್ರತಿ ತಿಂಗಳು ₹5 ಸಾವಿರದಿಂದ ₹6 ಸಾವಿರ ವೆಚ್ಚ ಮಾಡಬೇಕಾಗಿದೆ. ಅತಿಯಾದ ದೇಹದ ತೂಕ, ನಿಯಮಿತ ವ್ಯಾಯಾಮದ ಕೊರತೆ, ಅತಿಯಾದ ಕೊಬ್ಬು ಮಿಶ್ರಿತ ಆಹಾರ ಸೇವನೆ, ಅನಿಯಂತ್ರಿತ ರಕ್ತದೊತ್ತಡ, ಕುಟುಂಬದಲ್ಲಿ ಸಕ್ಕರೆ ಕಾಯಿಲೆ ಇತಿಹಾಸ ಸೇರಿ ವಿವಿಧ ಕಾರಣಗಳಿಂದ ಮಕ್ಕಳಲ್ಲಿಯೂ ಮಧುಮೇಹ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ.

ರಾಜ್ಯದಲ್ಲಿ ಸುಮಾರು ಹತ್ತು ಸಾವಿರ ಮಕ್ಕಳು ಟೈಪ್ 1 ಮಧುಮೇಹದಿಂದ ಬಳಲುತ್ತಿದ್ದಾರೆ ಎಂದು ಆರೋಗ್ಯ ಇಲಾಖೆಯು ಅಂದಾಜಿಸಿದೆ. ಇವರಲ್ಲಿ 5 ಸಾವಿರದಿಂದ 6 ಸಾವಿರ ಮಕ್ಕಳು ಇನ್ಸುಲಿನ್ ಸಂಬಂಧ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಬಹುದು ಎಂದು ಇಲಾಖೆ ಲೆಕ್ಕಾಚಾರ ಹಾಕಿದೆ. ಇಷ್ಟೂ ಮಕ್ಕಳಿಗೆ ಇಲಾಖೆಯು ಸಾಂಕ್ರಾಮಿಕವಲ್ಲದ ರೋಗಗಳ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮದಡಿ ಉಚಿತವಾಗಿಯೇ ನಿಯಮಿತವಾಗಿ ಇನ್ಸುಲಿನ್ ಒದಗಿಸಲು ಕ್ರಮವಹಿಸಿದೆ.

ಖರೀದಿಗೆ ₹25 ಕೋಟಿ : ಬಿಪಿಎಲ್ ಹಾಗೂ ಎಪಿಎಲ್ ಕುಟುಂಬದ ಸದಸ್ಯರೆಂದು ವಿಂಗಡಿಸದೆ, ಎಲ್ಲ ಮಕ್ಕಳನ್ನೂ ಯೋಜನೆಯಡಿ ಪರಿಗಣಿಸಿ, ಇನ್ಸುಲಿನ್ ಒದಗಿಸಲಾಗುವುದು. ₹25 ಕೋಟಿ ವೆಚ್ಚದಲ್ಲಿ ಇನ್ಸುಲಿನ್ ಖರೀದಿ ಪ್ರಕ್ರಿಯೆಯನ್ನು ಇಲಾಖೆ ಪ್ರಾರಂಭಿಸಿದೆ.

'ಮಧುಮೇಹದಿಂದ ಬಳಲುತ್ತಿರುವ ಮಕ್ಕಳಿಗೆ ತಮಿಳುನಾಡು ಹಾಗೂ ಕೇರಳದಲ್ಲಿ ಮಾತ್ರ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಇನ್ಸುಲಿನ್ ಒದಗಿಸಲಾಗುತ್ತಿದೆ. ನವಜಾತ ಶಿಶುಗಳಲ್ಲಿ ಮಧುಮೇಹ ದೃಢಪಟ್ಟರೆ, ಅಗತ್ಯ ಪ್ರಮಾಣದಲ್ಲಿ ಇನ್ಸುಲಿನ್ ಒದಗಿಸಬೇಕಾಗುತ್ತದೆ. ಇಲ್ಲವಾದಲ್ಲಿ ಮಗುವಿನ ಪ್ರಾಣಕ್ಕೆ ಅಪಾಯವಾಗಬಹುದು. ಇಷ್ಟು ದಿನ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ಸುಲಿನ್ ಸಿಗುತ್ತಿರಲಿಲ್ಲ. ಆದ್ದರಿಂದ ಇದನ್ನು ಖರೀದಿಸಿ, ಒದಗಿಸಲು ಕ್ರಮವಹಿಸಲಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ ತಪಾಸಣೆ: 30 ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೂ ಆರೋಗ್ಯ ಇಲಾಖೆಯು ರಾಷ್ಟ್ರೀಯ ಮಧುಮೇಹ ನಿಯಂತ್ರಣ ಕಾರ್ಯಕ್ರಮದಡಿ ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ (ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್) ತಪಾಸಣೆ ನಡೆಸುತ್ತಿದೆ. ರಾಜ್ಯದಲ್ಲಿ ಜಿಲ್ಲಾ ಹಂತದ 30 ಎನ್‌ಸಿಡಿ ಕ್ಲಿನಿಕ್‌ಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 347 ಸಿ.ಎಚ್.ಸಿ–ಎನ್.ಸಿ.ಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ತಪಾಸಣೆಯಲ್ಲಿ ಪ್ರತಿವರ್ಷ 90 ಸಾವಿರಕ್ಕೂ ಅಧಿಕ ಮಂದಿಯಲ್ಲಿ ಹೊಸದಾಗಿ ಮಧುಮೇಹ ಪತ್ತೆಯಾಗುತ್ತಿದೆ.

ಟೈಪ್ 2 ಮಧುಮೇಹವೂ ಹೆಚ್ಚಳ

'ಟೈಪ್ 1 ಮಧುಮೇಹ ಮಕ್ಕಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದು ದೃಢಪಟ್ಟಲ್ಲಿ ನಿರಂತರ ಇನ್ಸುಲಿನ್ ಪಡೆದುಕೊಳ್ಳುತ್ತಲೇ ಇರಬೇಕು. ಇದಕ್ಕೆ ಮಾತ್ರೆಗಳಿಲ್ಲ. ಟೈಪ್ 2 ಮಧುಮೇಹ ಈ ಹಿಂದೆ 40 ವರ್ಷ ಮೇಲ್ಪಟ್ಟವರಲ್ಲಿ ಕಾಣಿಸಿಕೊಳ್ಳುತ್ತಿತ್ತು. ಇತ್ತೀಚೆಗೆ 30 ವರ್ಷದೊಳಗಿನವರಲ್ಲಿಯೂ ಹೆಚ್ಚಾಗಿದೆ. ಪಾಶ್ಚಾತ್ಯ ಆಹಾರ ಪದ್ಧತಿ, ಬದಲಾದ ಜೀವನಶೈಲಿ, ದೈಹಿಕ ಚಟುವಟಿಕೆ ಇಲ್ಲದಿರುವುದು ಸೇರಿ ವಿವಿಧ ಕಾರಣಗಳಿಂದ ಟೈಪ್ 2 ಮಧುಮೇಹಿಗಳ ಸಂಖ್ಯೆ ಏರಿಕೆಯಾಗಿದೆ' ಎಂದು ಕರ್ನಾಟಕ ಎಂಡೊಕ್ರೈನಾಲಜಿ ಮತ್ತು ಸಂಶೋಧನಾ ಸಂಸ್ಥೆ ಹೊರರೋಗಿ ವಿಭಾಗದ ಮುಖ್ಯಸ್ಥ ಡಾ. ಅನಿಲ್ ಕುಮಾರ್ ಆರ್. ತಿಳಿಸಿದರು.

'ಕಂಪ್ಯೂಟರ್, ಟಿ.ವಿ.ಯಂತಹ ಸಾಧನಗಳ ಮುಂದೆ ಅಧಿಕ ಸಮಯ ಕಳೆಯುತ್ತಿರುವುದರಿಂದ 16–17 ವರ್ಷದವರಲ್ಲಿಯೂ ಟೈಪ್ 2 ಮಧುಮೇಹ ಕಾಣಿಸಿಕೊಳ್ಳುತ್ತಿದೆ. ನಮ್ಮ ಸಂಸ್ಥೆಯಲ್ಲಿ 3,600 ಯುವ ಮಧುಮೇಹಿಗಳ ಮೇಲೆ ಸಂಶೋಧನೆ ನಡೆಸಲಾಗಿತ್ತು. ಅವರಲ್ಲಿ ಶೇ 70 ರಷ್ಟು ಮಂದಿಯಲ್ಲಿ ಟೈಪ್ 2 ಹಾಗೂ ಶೇ 30ರಷ್ಟು ಮಂದಿಯಲ್ಲಿ ಟೈಪ್ 1 ಮಧುಮೇಹ ದೃಢಪಟ್ಟಿದೆ' ಎಂದು ಹೇಳಿದರು.

ಕೋವಿಡ್ ಕಾಲದಲ್ಲಿ ಕಡಿಮೆ ಸಾವು: ಆರ್‌ಟಿಐ ಅಡಿ ಸಿಕ್ಕ ಮಾಹಿತಿ

4 ವರ್ಷ: 6,810 ಮಕ್ಕಳ 'ಅಸಹಜ ಸಾವು'

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ (2019–2022) 6,810 ಮಕ್ಕಳು ಅಸಹಜವಾಗಿ ಮೃತಪಟ್ಟಿದ್ದಾರೆ. 2022ರಲ್ಲಿ ಮೃತಪಟ್ಟವರ ಸಂಖ್ಯೆ ಅತಿ ಹೆಚ್ಚಿದೆ.

ಇವುಗಳಲ್ಲಿ ತಾಯಿ–ಮಕ್ಕಳ ಆತ್ಮಹತ್ಯೆ, ಕೃಷಿ ಹೊಂಡದಲ್ಲಿ ಬಿದ್ದು ಸಾವು ಮತ್ತು ಮಕ್ಕಳ ಆತ್ಮಹತ್ಯೆ ಪ್ರಕರಣಗಳೂ ಸೇರಿವೆ.

ಈ ಅವಧಿಯಲ್ಲಿ, ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲೇ ಹೆಚ್ಚು ಮಕ್ಕಳು ಮೃತಪಟ್ಟಿದ್ದಾರೆ. ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳು ಕ್ರಮವಾಗಿ ಎರಡು, ಮೂರನೇ ಸಾಲಿನಲ್ಲಿವೆ. ರಾಜ್ಯದಲ್ಲಿರುವ ಅಷ್ಟೂ ಜಿಲ್ಲೆಗಳ ವ್ಯಾಪ್ತಿಯ, ರೈಲ್ವೆ ಪೊಲೀಸ್ ಠಾಣೆಗಳಲ್ಲಿ 406 ಪ್ರಕರಣಗಳು ದಾಖಲಾಗಿವೆ.

ಮೈಸೂರಿನ ಒಡನಾಡಿ ಸೇವಾ ಸಂಸ್ಥೆಗೆ ಮಾಹಿತಿ ಹಕ್ಕು ಕಾಯ್ದೆಯಡಿ ರಾಜ್ಯ ಅಪರಾಧ ದಾಖಲಾತಿ ವಿಭಾಗವು ಈ ಮಾಹಿತಿ ನೀಡಿದೆ. ಕೋವಿಡ್ ಸಾಂಕ್ರಾಮಿಕ ಇದ್ದ ಎರಡು ವರ್ಷಗಳಲ್ಲಿ ಸಾವಿನ ಪ್ರಮಾಣ ಕಡಿಮೆ ಇತ್ತು. ನಂತರದಲ್ಲಿ ಹೆಚ್ಚಾಗಿದೆ.

ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಬೀದರ್, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು ಗ್ರಾಮಾಂತರ, ರಾಯಚೂರು, ರಾಮನಗರ, ಶಿವಮೊಗ್ಗ, ಉತ್ತರಕನ್ನಡ, ಯಾದಗಿರಿ, ಕಲಬುರಗಿ ಗ್ರಾಮಾಂತರದಲ್ಲಿ ಪ್ರಕರಣಗಳ ಸಂಖ್ಯೆ ಮೂರಂಕಿಯಷ್ಟಿದೆ. ಕೆಲವು ಜಿಲ್ಲೆಗಳಲ್ಲಿ 100 ದಾಟಿದ್ದರೆ, ಇನ್ನೂ ಕೆಲವು ಜಿಲ್ಲೆಗಳಲ್ಲಿ 200 ದಾಟಿದೆ.


ಚಾಮರಾಜನಗರ, ಚಿಕ್ಕಮಗಳೂರು, ಗದಗ, ಕೆಜಿಎಫ್, ಮಂಗಳೂರು ನಗರ, ಮೈಸೂರು ನಗರ, ಉಡುಪಿ, ವಿಜಯನಗರದಲ್ಲಿ ಹಾಗೂ ಬೆಳಗಾವಿ ನಗರ, ಕಲಬುರಗಿ ನಗರ, ಹುಬ್ಬಳ್ಳಿ–ಧಾರವಾಡ ನಗರದಲ್ಲಿ ಸಾವಿನ ಸಂಖ್ಯೆ ಎರಡಂಕಿಯಷ್ಟಿವೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಲ್ಲೊಬ್ಬರಾದ ಎಂ.ಎಲ್. ಪರಶುರಾಂ, 'ಮಕ್ಕಳ ಅಸಹಜ ಸಾವಿನ ಅಂಕಿ ಅಂಶಗಳು ಗಾಬರಿ ಹುಟ್ಟಿಸುವಂತಿವೆ. ಬಡತನ, ಅಪೌಷ್ಟಿಕತೆ, ಗ್ರಾಮೀಣ ಪ್ರದೇಶಗಳಲ್ಲಿ ಮಿತಿ ಮೀರಿದ ಬಡ್ಡಿ ದಂಧೆ, ಮೊಬೈಲ್ ಫೋನ್ ಗೀಳು ಪ್ರಮುಖ ಕಾರಣಗಳು. ಈ ಸಾವುಗಳ ಕುರಿತು ಮಕ್ಕಳ ಹಕ್ಕುಗಳ ಆಯೋಗ, ಮಕ್ಕಳ ಕಲ್ಯಾಣ ಸಮಿತಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಂಭೀರವಾಗಿ ಗಮನಹರಿಸಬೇಕು' ಎಂದು ಒತ್ತಾಯಿಸಿದರು.

'ಸಾವಿನ ಪ್ರಕರಣಗಳ ಕುರಿತು ತಲಸ್ಪರ್ಶಿ ಅಧ್ಯಯನ, ವಿಶ್ಲೇಷಣೆ ಸದ್ಯದ ತುರ್ತಾಗಿದೆ. ಆ ಮೂಲಕವೇ ಮುಂದಿನ ದಿನಗಳಲ್ಲಿ ಇಂಥ ಅಸಹಜ ಸಾವುಗಳನ್ನು ತಡೆಯಲು ಸಾಧ್ಯ. ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳೂ ಈ ಕಾರ್ಯದಲ್ಲಿ ಒಳಗೊಳ್ಳುವಂತಾಗಬೇಕು' ಎಂದು ಪ್ರತಿಪಾದಿಸಿದರು.

ಮುಖ್ಯಾಂಶಗಳು

- ಹೆಚ್ಚುತ್ತಿರುವ ಮಕ್ಕಳ ಸಾವಿನ ಪ್ರಕರಣಗಳು
- ನಡೆಯದ ಅಂಕಿ–ಅಂಶಗಳ ಅಧ್ಯಯನ



ರಾಜ್ಯದಲ್ಲಿ ಮಕ್ಕಳ ಅಸಹಜ ಸಾವು

2019	1,574
2020	1,534
2021	1,728
2022	1,974

ಚಿನಕುರಳಿ

ಪ್ರಕಾಶ್ ಶೆಟ್ಟಿ



ತ್ಯಾಜ್ಯ ವಿಲೇವಾರಿಗೆ ಶುಲ್ಕ ಅನುಮತಿ ಕೋರಿ ಪ್ರಸ್ತಾವ

• ನವೀನ್ ಮಿನೇಜಸ್

ಬೆಂಗಳೂರು: ತ್ಯಾಜ್ಯ ವಿಲೇವಾರಿ ದುಬಾರಿ ಆಗುತ್ತಿದ್ದು ಮನೆ ಹಾಗೂ ವಾಣಿಜ್ಯ ಕಟ್ಟಡಗಳಿಂದ ತ್ಯಾಜ್ಯ ಸಂಗ್ರಹಕ್ಕೆ ಮಾಸಿಕ ಶುಲ್ಕ ವಿಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಂದಾಗಿದೆ.

ಮನೆ ಹಾಗೂ ವಾಣಿಜ್ಯ ಕಟ್ಟಡಗಳಲ್ಲಿ ವಿದ್ಯುತ್ ಬಳಕೆ ಆಧರಿಸಿ, ಶುಲ್ಕ ವಿಧಿಸಲು ಚಿಂತನೆ ನಡೆಸಿದೆ. ಕಳೆದ ವಾರ ಶುಲ್ಕ ರಚನೆ ಅಂತಿಮಗೊಳಿಸಿ ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರವು ಈ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದರೆ ಕಸ ವಿಲೇವಾರಿಗೆ ನಾಗರಿಕರು ಮಾಸಿಕ ಕನಿಷ್ಠ ₹30 ಪಾವತಿಸಬೇಕಾಗಬಹುದು. ಈ ಪ್ರಸ್ತಾವಿತ ಯೋಜನೆ ವ್ಯಾಪ್ತಿಗೆ 46 ಲಕ್ಷ ಮನೆಗಳು ಬರಲಿವೆ. ಅಂದಾಜು 6.32 ಲಕ್ಷ ವಾಣಿಜ್ಯ ಕಟ್ಟಡಗಳು ಶುಲ್ಕದ ವ್ಯಾಪ್ತಿಗೆ ಬರಲಿದ್ದು, ತಿಂಗಳಿಗೆ ₹ 72.39 ಕೋಟಿ ಆದಾಯದ ನಿರೀಕ್ಷೆಯಲ್ಲಿ ಬಿಬಿಎಂಪಿ ಇದೆ.

ಆಸ್ತಿಗೆ ತೆರಿಗೆ ಆಧರಿಸಿ ಶುಲ್ಕ ಸಂಗ್ರಹಿಸುವ ಬದಲಿಗೆ, ವಿದ್ಯುತ್ ಬಳಕೆ ಪ್ರಮಾಣ ಆಧರಿಸಿಯೇ ಶುಲ್ಕ ನಿಗದಿಗೆ ಬಿಬಿಎಂಪಿ ಮುಂದಾಗಿದೆ. ಬೆಸ್ಕಾಂ ಸಿಬ್ಬಂದಿ ನೆರವು ಪಡೆಯುತ್ತಿರುವುದರಿಂದ ಬೆಸ್ಕಾಂಗೆ ನಿರ್ದಿಷ್ಟ ಶುಲ್ಕ ಪಾವತಿಸಲಾಗುವುದು ಎಂದು ಮೂಲಗಳು ಹೇಳಿವೆ.

ದೀರ್ಘಕಾಲದಿಂದ ಬಾಕಿ ಉಳಿದಿದ್ದ ಪ್ರಸ್ತಾವ ಇದಾಗಿದೆ. ಶುಲ್ಕ ನಿಗದಿ ಸಂಬಂಧ ಕಳೆದ ವಾರ ಬಿಬಿಎಂಪಿಯ ಘನತ್ಯಾಜ್ಯ ವಿಲೇವಾರಿ ಘಟಕದ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆದಿತ್ತು. ಬೆಸ್ಕಾಂ ಮೀಟರ್ ರೀಡರ್‌ಗಳನ್ನು ಬಳಸಿಕೊಂಡು ಶುಲ್ಕ ಸಂಗ್ರಹಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತ್ಯಾಜ್ಯ ಉತ್ಪಾದನೆ ಆಧರಿಸಿ ಪ್ರತಿ ಮನೆಗೆ ತಿಂಗಳಿಗೆ ₹30 ರಿಂದ ₹500ರವರೆಗೆ ಹಾಗೂ ವಾಣಿಜ್ಯ ಕಟ್ಟಡಗಳಿಗೆ ₹75 ರಿಂದ ₹1,200ರ ಶುಲ್ಕ ನಿಗದಿಪಡಿಸುವುದಾಗಿ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿದೆ.

ದೆಹಲಿ, ಚೆನ್ನೈ, ಮುಂಬೈ, ಪುಣೆ, ತಿರುಪತಿಯಲ್ಲಿ ಸ್ಥಳೀಯ ಸಂಸ್ಥೆಗಳು ಈಗಾಗಲೇ ಮನೆ ಹಾಗೂ ವಾಣಿಜ್ಯ ಕಟ್ಟಡಗಳಿಂದ ತ್ಯಾಜ್ಯ ಸಂಗ್ರಹಕ್ಕೆ ಶುಲ್ಕ ಸಂಗ್ರಹಿಸುತ್ತಿವೆ. ಅದನ್ನು ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

‘ನಗರದಲ್ಲಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಮೂಲದಲ್ಲಿಯೇ ಹಸಿ ಹಾಗೂ ಒಣ ಕಸವನ್ನು ಬೇರ್ಪಡಿಸುವ ಕೆಲಸ ಆಗಬೇಕಿದೆ. ಎಷ್ಟು ಬಾರಿ ಮನವಿ ಮಾಡಿದ್ದರೂ ಕಸ ಬೇರ್ಪಡಿಸಿ ಹಾಕುತ್ತಿಲ್ಲ. ಕಸ ಸಂಗ್ರಹಣೆಯಲ್ಲಿ ಪ್ರತಿ ಪ್ರದೇಶಕ್ಕೂ ವಿಭಿನ್ನ ಸಮಸ್ಯೆಗಳಿವೆ’ ಎಂದು ಘನತ್ಯಾಜ್ಯ ನಿರ್ವಹಣಾ ತಜ್ಞರಾದ ಪಿಂಕಿ ಚಂದ್ರನ್ ಹೇಳುತ್ತಾರೆ.

ಮಯೂರ ಓದಿರಿ

ಪ್ರಧಾನ ವಿಜ್ಞಾನಿ ಧನಂಜಯಗೆ ಮರಿಗೌಡ ದತ್ತಿ ಪ್ರಶಸ್ತಿ



ಹೆಸರಘಟ್ಟ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ‘ಎಂ.ಹೆಚ್. ಮರಿಗೌಡ ರಾಷ್ಟ್ರೀಯ ದತ್ತಿ ಪ್ರಶಸ್ತಿ’ಗೆ ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಪ್ರಧಾನ ವಿಜ್ಞಾನಿ ಡಾ.ಎಂ.ವಿ. ಧನಂಜಯ ಅವರನ್ನು ಆಯ್ಕೆ ಮಾಡಲಾಗಿದೆ.

ಧನಂಜಯ ಅವರು ತೋಟಗಾರಿಕಾ ವಿಷಯಗಳ ಸಂಶೋಧನೆ, ಸೋರೆಕಾಯಿಯಲ್ಲಿ ಕಂಡುಬರುವ ‘ಅಂಟುಕಾಂಡ ಸೊರಗು ರೋಗ ನಿರೋಧಕ ತಳಿಗಳ’ ಅಭಿವೃದ್ಧಿಗೆ ನಡೆಸಿರುವ ಸಂಶೋಧನೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದೇ 17ರಂದು ವಿಶ್ವವಿದ್ಯಾಲಯದಲ್ಲಿ ನಡೆಯುವ ಕೃಷಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು

ವಿಶ್ವ ಮಧುಮೇಹ ದಿನಾಚರಣೆ: ಅತಿಥಿಗಳು: ದಿನೇಶ್ ಗುಂಡೂರಾವ್, ಬಿ.ಎಸ್. ನಾಗರಾಜ್, ಬಿ.ಎಸ್. ರಾಜಶೇಖರಯ್ಯ, ಅಮೂಲ್ಯ ಗೌಡ, ಐಶ್ವರ್ಯ ವಾಸುದೇವನ್, ಸಿ.ಎಂ. ನಾರಾಯಣಸ್ವಾಮಿ, ಆಕಾಶ್ ಎ ಸುವರ್ಣ, ಆಯೋಜನೆ: ಲಯನ್ಸ್ ಡಿಸ್ಟ್ರಿಕ್ಟ್ 317ಎಫ್, ಸ್ಥಳ: ಕಬ್ಬನ್ ಉದ್ಯಾನ, ಎಂ.ಜಿ. ರಸ್ತೆ, ಬೆಳಿಗ್ಗೆ 8

ಕರ್ನಾಟಕ ರಾಜ್ಯೋತ್ಸವ ಆಚರಣೆ, ಪೊಲೀಸ್‌ರಿಂದ ಕರೋಕೆ ಗಾಯನ: ಆಯೋಜನೆ: ಕರ್ನಾಟಕ ಕಲಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9ರಿಂದ

ರಾಷ್ಟ್ರೀಯ ಪುಸ್ತಕ ಸಪ್ತಾಹ: ಉದ್ಘಾಟನೆ: ರಜನಿ ಜಯರಾಂ, ಅತಿಥಿ: ಬಸವರಾಜ ಕಲ್ಗುಡಿ, ಆಯೋಜನೆ: ಸಾಹಿತ್ಯ ಅಕಾಡೆಮಿ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಮಧುಮೇಹ ರಿವರ್ಸಲ್ ಉದ್ಘಾಟನೆ: ಅತಿಥಿಗಳು: ಸಿ.ಕೆ. ರಾಮಮೂರ್ತಿ, ಎಂ. ಕೃಷ್ಣಪ್ಪ, ಎಸ್.ಕೆ. ನಟರಾಜ್, ಬಿ. ಸೋಮಶೇಖರ್, ಆರ್. ಬಾಲಾಜಿ ಸಿಂಗ್, ಆಯೋಜನೆ: ಶುಗರ್ ಫಿಟ್, ಸ್ಥಳ: ಶುಗರ್ ಫಿಟ್ ಸಂಶೋಧನಾ ಕೇಂದ್ರ, ಜಯನಗರ, ಬೆಳಿಗ್ಗೆ 11

‘ಗಂಗಿ ಮನ್ಯಾಗ ಗೌರಿ ಹೊಲ್ದಾಗ’ ನಾಟಕ ಪ್ರದರ್ಶನ: ರಚನೆ: ಮಹಾದೇವ ಹೊಸೂರು, ನಿರ್ದೇಶನ: ಜೇವರ್ಗಿ ರಾಜಣ್ಣ, ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಜೆ. ಲೋಕೇಶ್, ಆಯೋಜನೆ: ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘ ಜೇವರ್ಗಿ, ಸ್ಥಳ: ಗುಬ್ಬಿ ವೀರಣ್ಣ ರಂಗಮಂದಿರ, ಗಾಂಧಿನಗರ, ಮಧ್ಯಾಹ್ನ 3

ನಗರದಲ್ಲಿ ನಾಳೆ



ಮರುಳಸಿದ್ದಪ್ಪ

‘ಕೆ.ಎಂ.ಎಸ್’ ಅವರಿಗೆ ಗೌರವ ಗ್ರಂಥ ಸಮರ್ಪಣೆ, ಅಭಿನಂದನಾ ಸಮಾರಂಭ: ಸಿದ್ದರಾಮಯ್ಯ, ಗೌರವ ಸಮರ್ಪಣೆ: ಕೆ. ಮರುಳಸಿದ್ದಪ್ಪ, ಜಯಂತಿ ಮರುಳಸಿದ್ದಪ್ಪ ಉಪಸ್ಥಿತಿ: ಅಗ್ರಹಾರ ಕೃಷ್ಣಮೂರ್ತಿ, ಜಿ. ರಾಮಕೃಷ್ಣ, ಎಸ್.ಜಿ. ಸಿದ್ಧರಾಮಯ್ಯ, ಎಚ್. ದಂಡಪ್ಪ, ನಿತಿನ್ ಷಾ, ಆಯೋಜನೆ: ಕೆ.ಎಂ.ಎಸ್. ಅಭಿಮಾನಿಗಳ ಬಳಗ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಸಂಜೆ 5

‘ವಿಜ್ಞಾನ ಶಿಕ್ಷಣ ಹೆಚ್ಚಿಸುವ’ ಕುರಿತು ಕಾರ್ಯಾಗಾರ: ಅತಿಥಿಗಳು: ಎ.ಎಸ್. ಕಿರಣ ಕುಮಾರ್, ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ್ ಪೈ, ಅವಿರಾಮ್ ಶರ್ಮ, ರವಿ ವೆಂಕಟೇಸಂ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಪದವಿ ಪೂರ್ವ ಮಹಿಳಾ ಕಾಲೇಜು, ಬಸವನಗುಡಿ, ಬೆಳಿಗ್ಗೆ 10ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಗುರುಪ್ರಸಾದ್ ತಾರಾಲಯ ನಿರ್ದೇಶಕ



ಬೆಂಗಳೂರು: ಇಸ್ರೊದ ನಿವೃತ್ತ ವಿಜ್ಞಾನಿ ಡಾ. ಬಿ.ಆರ್. ಗುರುಪ್ರಸಾದ್ ಅವರು ನಗರದ ಜವಾಹರ್ ಲಾಲ್ ನೆಹರೂ ತಾರಾಲಯದ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ.

ಸುಮಾರು ಮೂರು ದಶಕ ಇಸ್ರೊದಲ್ಲಿ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸಿದ್ದರು. ‘ಪ್ರಜಾವಾಣಿ’ ಸೇರಿ ಕನ್ನಡದ ಹಲವು ಪತ್ರಿಕೆಗಳಿಗೆ ಬಾಹ್ಯಾಕಾಶ ವಿಜ್ಞಾನದ ಕುರಿತು ಲೇಖನಗಳನ್ನು ಬರೆದಿದ್ದಾರೆ.

ವ್ಯಕ್ತಿ ಕೊಲೆ

ಆನೇಕಲ್: ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿ ಸಮಂದೂರು ಗ್ರಾಮದಲ್ಲಿ ಹಳೆ ದ್ವೇಷದ ಹಿನ್ನೆಲೆಯಲ್ಲಿ ನಾರಾಯಣಪ್ಪ (52) ಎಂಬುವರ ತಲೆ ಮೇಲೆ ಕಲ್ಲು ಹಾಕಿ ಸೋಮವಾರ ರಾತ್ರಿ ಹತ್ಯೆ ಮಾಡಲಾಗಿದೆ.

ನಾರಾಯಣಪ್ಪ ಅದೇ ಗ್ರಾಮದ ಮಧು ಅವರ ಮನೆ ಬಳಿ ಅವಾಚ್ಯವಾಗಿ ನಿಂದಿಸಿದ್ದ ಎನ್ನಲಾಗಿದೆ. ಇದು ಜಗಳಕ್ಕೆ ಕಾರಣವಾಗಿದ್ದು, ಕುಪಿತಗೊಂಡ ಆರೋಪಿ ಕೃತ್ಯ ಎಸಗಿದ್ದ. ಚಿಕಿತ್ಸೆಗೆ ಸ್ಪಂದಿಸದೆ ನಾರಾಯಣಪ್ಪ ಆಸ್ಪತ್ರೆಯಲ್ಲೇ ಮೃತಪಟ್ಟಿದ್ದಾರೆ.





ನಗರದ ಜವಳಿ ಅಂಗಡಿಯೊಂದರಲ್ಲಿ ಸೋಮವಾರ ಮಹಿಳೆಯರು ದೀಪಗಳನ್ನು ಬೆಳಗಿದರು (ಮೊದಲ ಚಿತ್ರ) ಉಲ್ಲಾಳದಲ್ಲಿ ಕುಟುಂಬ ಸದಸ್ಯರು ಒಟ್ಟಾಗಿ ಪಟಾಕಿ ಹಚ್ಚಿ ಹಬ್ಬ ಆಚರಿಸಿದರು –ಪ್ರಜಾವಾಣಿ ಚಿತ್ರಗಳು

ದೀಪಾವಳಿ ಸಡಗರ: ಬೆಳಕಿನ ಲೋಕ

ಮನೆ, ಅಂಗಡಿಗಳಲ್ಲಿ ಲಕ್ಷ್ಮಿಪೂಜೆ • ಮಾರುಕಟ್ಟೆಗಳಲ್ಲಿ ಖರೀದಿ ಭರಾಟೆ • ದೇಗುಲಗಳಲ್ಲಿ ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿಯ ನಿಮಿತ್ತ ಮನೆ ಹಾಗೂ ಅಂಗಡಿಗಳಲ್ಲಿ ಲಕ್ಷ್ಮಿ ಪೂಜೆ ನೆರವೇರಿಸಿದರು.

ಸಿಲಿಕಾನ್ ಸಿಟಿಯ ಜನರಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ನಗರದ ಅಂಗಡಿಗಳಲ್ಲಿ ಬೆಳಿಗ್ಗೆಯೇ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು. ವರ್ಷವಿಡೀ ವ್ಯಾಪಾರ, ವಹಿವಾಟು ಚೆನ್ನಾಗಿ ನಡೆಯಲಿ ಎಂದು ವ್ಯಾಪಾರಿಗಳು ಲಕ್ಷ್ಮೀದೇವಿಗೆ ಪ್ರಾರ್ಥಿಸಿದರು. ಸಂಜೆ ಮನೆ–ದೇಗುಲಗಳ ಮುಂದೆ ಸಾಲು ದೀಪಗಳು ಬೆಳಗಿದವು.

ಖರೀದಿ ಭರಾಟೆ: ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ದಿನಸಿ, ತರಕಾರಿ, ಕಬ್ಬು, ಹೂವು– ಹಣ್ಣುಗಳ, ಬಟ್ಟೆ ಖರೀದಿಯ ಭರಾಟೆ ಜೋರಾಗಿತ್ತು. ಆಲಂಕಾರಿಕ ವಸ್ತುಗಳು, ಹಣತೆ ಮತ್ತು ಆಕಾಶಬುಟ್ಟಿಗಳ ಖರೀದಿ ಸಾಮಾನ್ಯವಾಗಿತ್ತು. ಜನ ಪಟಾಕಿ ಖರೀದಿಸಿದರು.

ಹಬ್ಬದ ಅಂಗವಾಗಿ ಪ್ರಮುಖ ಅಂಗಡಿಗಳು ಗ್ರಾಹಕರನ್ನು ಸೆಳೆಯಲು ಹಲವು ರಿಯಾಯಿತಿಗಳನ್ನು ಘೋಷಿಸಿದ್ದವು. ಬಂಗಾರದ ಅಂಗಡಿ, ಬಟ್ಟೆ ಅಂಗಡಿ, ಎಲೆಕ್ಟ್ರಾನಿಕ್ ಉಪಕರಣಗಳ ಮಳಿಗೆಗಳು ಹಾಗೂ ಸಿಹಿ ತಿನಿಸುಗಳ ಮಳಿಗೆಗಳು ಗ್ರಾಹಕರಿಂದ ತುಂಬಿದ್ದವು.

ಸಂಜೆ ನಂತರ ಮನೆ, ಮನೆಗಳಲ್ಲಿ ಕಂಗೊಳಿಸಿದ ದೀಪಗಳು ಬೆಳಕಿನ ರಂಗಿನ ಲೋಕವನ್ನು ಸೃಷ್ಟಿಸಿದವು. ಹೊಸ್ತಿಲು, ಕಿಟಕಿ, ಕಾಂಪೌಂಡ್ ಮೇಲೆಯೂ ವಿವಿಧ ವಿನ್ಯಾಸದ ದೀಪಗಳನ್ನು ಹಚ್ಚಿ, ಅವುಗಳಿಗೆ ಹೂವಿನ ಅಲಂಕಾರ ಮಾಡಿ ಸಂಭ್ರಮಿಸಿದರು.

ದೇಗುಲಗಳಲ್ಲಿ ವಿಶೇಷಪೂಜೆ ನಡೆದವು. ಸೋಮವಾರ ಸಂಜೆ ಪಟಾಕಿ ಸದ್ದು ಜೋರಾಗಿತ್ತು.

‘ಬ್ರ್ಯಾಂಡ್ ಬೆಂಗಳೂರು’ಗಾಗಿ ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯಾ ಪರಿಕಲ್ಪನೆ

‘ಅಂತರ ಶಾಲಾ ಐಡಿಯಾಥಾನ್ ಸ್ಪರ್ಧೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರ್ಯಾಂಡ್ ಬೆಂಗಳೂರಿಗಾಗಿ’ ಹೊಸ ಆಲೋಚನೆಗಳ ಆವಿಷ್ಕಾರ ಉದ್ದೇಶದಿಂದ ‘ಅಂತರ ಶಾಲಾ ಐಡಿಯಾಥಾನ್ ಸ್ಪರ್ಧೆ’ ಆಯೋಜಿಸುವ ಪರಿಕಲ್ಪನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುತ್ರಿ ಐಶ್ವರ್ಯಾ ಡಿಕೆಎಸ್ ಹೆಗ್ಡೆ ರೂಪಿಸಿದ್ದಾರೆ. 2024ರ ಜ.13ರಂದು ‘ಯುವ ನಾಯಕತ್ವ ಸಮ್ಮೇಳನ’ದಲ್ಲಿ ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ಆ ಸಮ್ಮೇಳನದಲ್ಲಿ ವಿದ್ಯಾರ್ಥಿಗಳ ಜೊತೆ ಡಿ.ಕೆ. ಶಿವಕುಮಾರ್ ಸಂವಾದ ನಡೆಸಲಿದ್ದಾರೆ.

‘ನಗರ ಎದುರಿಸುತ್ತಿರುವ ವಿವಿಧ ಸಮಸ್ಯೆ ಮತ್ತು ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಶಾಲಾ ಮಕ್ಕಳಿಗೆ ಅವಕಾಶ ಕಲ್ಪಿಸುವುದು ಐಶ್ವರ್ಯಾ ಅವರ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ಗಣ್ಯರು ತಮ್ಮ ಅನುಭವ ಹಂಚಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಪರಿಣಾಮಕಾರಿ



ಐಶ್ವರ್ಯಾ ಡಿಕೆಎಸ್ ಹೆಗ್ಡೆ

ಪರಿಹಾರ ಕೇಂದ್ರಿತ ಉತ್ತಮ ನಾಗರಿಕರಾಗಲು ಉತ್ತೇಜನ ನೀಡುವಂತೆ ಪ್ರೋತ್ಸಾಹಿಸಲಾಗುವುದು’ ಎಂದು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ ಅವರು ಅಂತಿಮ ಸುತ್ತಿನಲ್ಲಿ ಮುಖ್ಯ ತೀರ್ಪುಗಾರರಾಗಿ ಭಾಗವಹಿಸಲಿದ್ದಾರೆ. ಐಡಿಯಾಥಾನ್ ಹಾಗೂ ಯುವ ನಾಯಕತ್ವ ಸಮ್ಮೇಳನ ಕಾರ್ಯಕ್ರಮಗಳನ್ನು ಕ್ವಿಜ್ ಮಾಸ್ಟರ್ ಹಾಗೂ ಶಿಕ್ಷಣ ತಜ್ಞ ಗಿರಿ ಪಿಕ್ ಬ್ರೈನ್ ಬಾಲಸುಬ್ರಮಣಿಯಂ ನೇತೃತ್ವದ ಗ್ರೇಕ್ಯಾಪ್ಸ್ ನಾಲೆಡ್ಜ್ ಟ್ರೈಬ್ ಸಹಯೋಗದಲ್ಲಿ ನಡೆಯಲಿದೆ.

ಮುಖ್ಯಾಂಶಗಳು

- ಜ.13ರಂದು ‘ಯುವ ನಾಯಕತ್ವ ಸಮ್ಮೇಳನ’
- ಸವಾಲುಗಳಿಗೆ ಪರಿಹಾರಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ
- ಸಾಧಕರು, ಗಣ್ಯರಿಂದ ಅನುಭವಗಳ ವಿನಿಮಯ

‘ಅಂತರ ಶಾಲಾ ಐಡಿಯಾಥಾನ್ ಸ್ಪರ್ಧೆ’: ಅಂತರ ಶಾಲಾ ವಿದ್ಯಾರ್ಥಿಗಳ ‘ಐಡಿಯಾಥಾನ್– 23’ ಕಾರ್ಯಕ್ರಮದಲ್ಲಿ ನಗರದ ಸಮಸ್ಯೆಗಳು ಹಾಗೂ ಸವಾಲುಗಳಿಗೆ ಪರಿಹಾರ ರೂಪಿಸುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಒಳಗೊಳ್ಳುವಂತೆ ಮಾಡುವುದು ಉದ್ದೇಶವಾಗಿದೆ. ಬೆಂಗಳೂರು ನಗರವನ್ನು ಸ್ವಚ್ಛ, ಹಸಿರು ಹಾಗೂ ಸುಸ್ಥಿರ ನಗರವನ್ನಾಗಿಸಲು ರಾಜ್ಯ ಸರ್ಕಾರವು ಹಮ್ಮಿಕೊಂಡಿರುವ ‘ಬ್ರ್ಯಾಂಡ್ ಬೆಂಗಳೂರು’ ಕಾರ್ಯಕ್ರಮದ ಮೂಲ ಉದ್ದೇಶಗಳ ಬಗ್ಗೆ ಮಕ್ಕಳಲ್ಲಿ ಅರಿವು, ಜಾಗೃತಿ ಮೂಡಿಸಲು, ಇದೇ ಮೊದಲ ಬಾರಿಗೆ ಇಂತಹ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದೂ ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರದಲ್ಲಿರುವ ಶಾಲೆಗಳ 10 ರಿಂದ 12 ನೇ ತರಗತಿ (ಪಿಯು)ವರೆಗಿನ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಭಾಗವಹಿಸಲು ಇಚ್ಛಿಸುವ ಶಾಲೆಯು ಇಬ್ಬರು ವಿದ್ಯಾರ್ಥಿಗಳ ಒಂದು ತಂಡ ಕಳುಹಿಸಬಹುದು.

ಭಾಗವಹಿಸುವ ವಿದ್ಯಾರ್ಥಿಗಳು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ವಿಚಾರ ಮಂಡಿಸಲು ಅವಕಾಶವಿದೆ. ಯಾವುದೇ ಪ್ರವೇಶ ಶುಲ್ಕ ಇಲ್ಲ. ಮೊದಲು ನೋಂದಣಿಯಾಗುವ 200 ಶಾಲೆಗಳಿಗೆ ಮಾತ್ರ ಅವಕಾಶ. ಆಸಕ್ತ ಶಾಲೆಗಳು 2023 ಡಿ. 5ರ ಒಳಗೆ https://www.youngleadersofbengaluru.com ನಲ್ಲಿ ನೊಂದಣಿ ಮಾಡಿಕೊಳ್ಳಬಹುದು.

ಧನಸಹಾಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾಮಾನ್ಯ, ಪರಿಶಿಷ್ಟ ಜಾತಿ ಉಪಯೋಜನೆ, ಪರಿಶಿಷ್ಟ ಪಂಗಡಗಳ ಉಪಯೋಜನೆಯಡಿ ಸಂಘಗಳಿಂದ ಧನಸಹಾಯಕ್ಕೆ ಅರ್ಜಿ ಆಹ್ವಾನಿಸಿದೆ.

ಸೇವಾಸಿಂಧು ಪೋರ್ಟಲ್ ಮೂಲಕ ಇದೇ 14ರಿಂದ ಡಿ.13ರ-ವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಸಹಾಯಧನ ನೀಡಲಾಗುತ್ತಿದೆ.

ಧನಸಹಾಯಕ್ಕೆ ಸಂಬಂಧಿಸಿದ ಮಾರ್ಗಸೂಚಿ ಸೇವಾಸಿಂಧು ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಪರ್ಕಕ್ಕೆ: 080 22279954 ಅಥವಾ 9986837037

ಸುಧಾ ಓದಿರಿ

ವಿವಿಧೆಡೆ ಮುಂದುವರಿದ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಗರದ ವಿವಿಧೆಡೆ ಪಟಾಕಿ ಅವಘಡಗಳಲ್ಲಿ 40ಕ್ಕೂ ಅಧಿಕ ಮಂದಿ ಗಾಯಗೊಂಡು, ಚಿಕಿತ್ಸೆ ಪಡೆದಿದ್ದಾರೆ.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಭಾನುವಾರ ನಾಲ್ವರು, ಸೋಮವಾರ ಮೂವರು ಸೇರಿ 8 ಮಂದಿ ಪಟಾಕಿ ಸಿಡಿತದಿಂದ ಗಾಯಗೊಂಡಿದ್ದಾರೆ. ಇವರಲ್ಲಿ ಇಬ್ಬರಿಗೆ ಶಸ್ತ್ರಚಿಕಿತ್ಸೆ ನಡೆದಿದ್ದು, ಇನ್ನಿಬ್ಬರಿಗೆ ಚಿಕಿತ್ಸೆ ಪ್ರಕ್ರಿಯೆ ನಡೆಯುತ್ತಿದೆ. ಹಬ್ಬಕ್ಕೂ ಮುನ್ನವೇ ಗಾಯಗೊಂಡು ದಾಖಲಾಗಿದ್ದ ಬಂಗಾರಪೇಟೆಯ 7 ವರ್ಷದ ಬಾಲಕ, ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾನೆ. ಕಾರ್ನಿಯಾ ಸಮಸ್ಯೆ ಇರುವುದರಿಂದ 2 ವಾರಗಳ ನಂತರ ಶಸ್ತ್ರಚಿಕಿತ್ಸೆ ನಡೆಸಲಾಗುವುದು ಎಂದು ವೈದ್ಯರು ತಿಳಿಸಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ ಒಟ್ಟು 25 ಮಂದಿ ಚಿಕಿತ್ಸೆ ಪಡೆದಿದ್ದು, ಇವರಲ್ಲಿ 13 ಮಂದಿಗೆ ಗಂಭೀರ ಗಾಯಗಳಾಗಿವೆ. ಇವರಲ್ಲಿ ಒಬ್ಬರು ಬಿಹಾರದವರಾಗಿದ್ದು, ಉಳಿದವರೆಲ್ಲ ನಗರದ ನಿವಾಸಿಗಳೇ ಆಗಿದ್ದಾರೆ. ಚಿಕಿತ್ಸೆ ಪಡೆದವರಲ್ಲಿ 13 ಮಂದಿ ಮಕ್ಕಳಿದ್ದು, ಹೊರ ರೋಗಿಗಳ ವಿಭಾಗದಲ್ಲಿಯೇ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ.

ಗಾಯಗೊಂಡವರಲ್ಲಿ ಶೇ 90 ರಷ್ಟು ಮಂದಿ ವೀಕ್ಷಕರು. ಪಟಾಕಿ ಹಚ್ಚದಿದ್ದರೂ, ಪಟಾಕಿ ಮತ್ತು ಲಕ್ಷ್ಮಿ ಬಾಂಬ್ ಕಿಡಿ ಸಿಡಿದು ಹೆಚ್ಚಿನವರು ಗಾಯಗೊಂಡಿದ್ದಾರೆ. ರಾಮಮೂರ್ತಿನಗರದಲ್ಲಿ ಮೂರು ವರ್ಷದ ಬಾಲಕನಿಗೆ ಸುರ್ ಸುರ್ ಕಡ್ಡಿ ಹಚ್ಚುವ ವೇಳೆ ಗಾಯವಾಗಿದೆ. ಈ ಬಾಲಕನಿಗೆ ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಕ್ಷೇಮ ಕುಶಲ



ಹೃದಯಕ್ಕೆ ಒಪ್ಪುವ ಆಹಾರ

ಹಣ್ಣು ಮತ್ತು ತರಕಾರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸುವುದು ಹೃದಯಸ್ನೇಹಿಯಾದ ಪದ್ಧತಿ. ತೀರಾ ಕೆಲವನ್ನು ಹೊರತುಪಡಿಸಿ ಹೃದ್ರೋಗಿಗಳಿಗೆ ವೈವಿಧ್ಯಮಯ ಸಸ್ಯಜನ್ಯ ಆಹಾರಗಳ ಆಯ್ಕೆಯಿದೆ. ಬಿಳಿಯ ಬಣ್ಣದವುಗಳಿಗಿಂತಲೂ ಗಾಢ ಬಣ್ಣದ ಹಣ್ಣುಗಳು ಮತ್ತು ತರಕಾರಿಗಳಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುತ್ತವೆ.



ಡಾ. ಕಿರಣ್ ವಿ. ಎಸ್.

ಹೃದಯದ ಮಿಡಿತ ಜೀವಂತಿಕೆಯ ಸಂಕೇತ. ಭ್ರೂಣಾವಸ್ಥೆಯಲ್ಲಿ ಆರಂಭವಾಗುವ ಹೃದಯದ ಕೆಲಸ ನಮ್ಮ ಜೀವನ ಕೊನೆಗೊಳ್ಳುವವರೆಗೆ ಸಾಗುತ್ತಲೇ ಇರುತ್ತದೆ. ಶರೀರದ ಇತರ ಭಾಗಗಳಂತೆ ಅನಾರೋಗ್ಯಗಳು ಹೃದಯವನ್ನೂ ಕಾಡುತ್ತವೆ. ಅಧಿಕ ರಕ್ತದೊತ್ತಡ, ಹೃದಯಾಘಾತ, ಹೃದಯದ ವೈಫಲ್ಯ, ಹೃದಯ ಮಿಡಿತದ ಲಯಬದ್ಧತೆಯಲ್ಲಿ ಏರುಪೇರು - ಹೀಗೆ ಹೃದಯ ಸಂಬಂಧಿ ಕಾಯಿಲೆಗಳಿವೆ. ಇವುಗಳ ನಿರ್ವಹಣೆಯಲ್ಲಿ ಔಷಧಗಳು ಮತ್ತು ಜೀವನಶೈಲಿ ಎಷ್ಟು ಮುಖ್ಯವೋ, ಆಹಾರ ಕೂಡ ಅಷ್ಟೇ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹೃದ್ರೋಗಗಳನ್ನು ತಡೆಗಟ್ಟುವಲ್ಲಿ ಮತ್ತು ಅವು ಮತ್ತೆ ಮರುಕಳಿಸದಂತೆ ನಿಭಾಯಿಸುವಲ್ಲಿ ಆಹಾರಸೇವನೆಯ ಶಿಸ್ತು ಪರಿಣಾಮಕಾರಿ.

ಆಹಾರಸೇವನೆಯ ಮೊದಲ ನಿಯಮ ಶರೀರದ ತೂಕವನ್ನು ಆರೋಗ್ಯಕರ ಮಿತಿಯಲ್ಲಿ ಇಟ್ಟುಕೊಳ್ಳುವುದು. ಶರೀರದ ತೂಕ ಅಧಿಕವಾದಷ್ಟೂ ರಕ್ತಪೂರೈಕೆಯ ಅಗತ್ಯ ಹೆಚ್ಚುತ್ತದೆ. ಈ ಹೊಣೆ ನಿರ್ವಹಿಸುವುದು ಹೃದಯ. ಹೀಗಾಗಿ, ಹೃದಯದ ಮೇಲೆ ಬೊಜ್ಜು ನೇರವಾಗಿ ಒತ್ತಡವನ್ನು ಬೀರುತ್ತದೆ. ಬೇರೆ ಯಾವುದೇ ಶ್ರಮದ ಕೆಲಸ ಮಾಡದಿದ್ದರೂ, ಕೇವಲ ದೇಹದ ತೂಕ ಹೆಚ್ಚಾಗಿದ್ದರೆ, ಹೃದಯಕ್ಕೆ ಶ್ರಮದಾಯಕ ಕೆಲಸ ಮಾಡಿದಷ್ಟೇ ಅನುಭವವಾಗುತ್ತದೆ. ಹೀಗಾಗಿ, ಹೃದ್ರೋಗಿಗಳು ಶರೀರದ ಅಗತ್ಯಕ್ಕೆ ಬೇಕಾದಷ್ಟು ಆಹಾರವನ್ನು ಮಾತ್ರ ಸೇವಿಸುವುದು ಸೂಕ್ತ. ಅನಗತ್ಯ ಕ್ಯಾಲರಿಗಳಿಂದ ದೂರವಿರುವುದು ಹೃದಯದ ಚೇತರಿಕೆಗೆ ಸಹಕಾರಿ. ಈ ನಿಟ್ಟಿನಲ್ಲಿ ಆಹಾರತಜ್ಞರು ನೆರವಾಗುತ್ತಾರೆ. ಹೃದಯಚಿಕಿತ್ಸೆ ನೀಡಬಲ್ಲ ಪ್ರತಿಯೊಂದು ಆಸ್ಪತ್ರೆಯಲ್ಲೂ ಆಹಾರತಜ್ಞರ ಉಪಸ್ಥಿತಿ ಇರುತ್ತದೆ.

ಹಣ್ಣು ಮತ್ತು ತರಕಾರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸುವುದು ಹೃದಯಸ್ನೇಹಿಯಾದ ಪದ್ಧತಿ. ತೀರಾ ಕೆಲವನ್ನು ಹೊರತುಪಡಿಸಿ ಹೃದ್ರೋಗಿಗಳಿಗೆ ವೈವಿಧ್ಯಮಯ ಸಸ್ಯಜನ್ಯ ಆಹಾರಗಳ ಆಯ್ಕೆಯಿದೆ. ಬಿಳಿಯ ಬಣ್ಣದವುಗಳಿಗಿಂತಲೂ ಗಾಢ ಬಣ್ಣದ ಹಣ್ಣುಗಳು ಮತ್ತು ತರಕಾರಿಗಳಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುತ್ತವೆ. ಹಣ್ಣಿನ ರಸಕ್ಕಿಂತಲೂ ಇಡೀ ಹಣ್ಣುಗಳು ಆರೋಗ್ಯಕರ. ಸಾಧ್ಯವಾದಷ್ಟೂ ಸಕ್ಕರೆ ಅಥವಾ ಉಪ್ಪನ್ನು ಬೆರೆಸದೆ ಹಣ್ಣು, ತರಕಾರಿಗಳನ್ನು ಸೇವಿಸುವುದು ಉತ್ತಮ. 'ರುಚಿಗೆ ತಕ್ಕಷ್ಟು ಉಪ್ಪು' ಎನ್ನುವ ಬದಲಿಗೆ 'ಆರೋಗ್ಯಕ್ಕೆ ತಕ್ಕಷ್ಟು ಉಪ್ಪು' ಎನ್ನುವುದು ಸರಿ!

ಆಹಾರಧಾನ್ಯಗಳ ವಿಷಯದಲ್ಲೂ ಸಂಸ್ಕರಿತ ಧಾನ್ಯಗಳಿಗಿಂತಲೂ ಇಡೀ ಧಾನ್ಯಗಳು ಉಪಯುಕ್ತ. ಸಮಗ್ರ ಧಾನ್ಯಗಳಲ್ಲಿ ನಾರಿನ ಅಂಶ, ವಿಟಮಿನ್ಗಳು, ಪಿಷ್ಟದ ಗುಣಮಟ್ಟ ಅಧಿಕವಾಗಿರುತ್ತದೆ. ಇದರಿಂದ ಹೃದ್ರೋಗ, ಪಾರ್ಶ್ವವಾಯು, ಮಧುಮೇಹ, ಬೊಜ್ಜು, ಮಲಬದ್ಧತೆ ಕಡಿಮೆಯಾಗುತ್ತದೆ. ಕರುಳಿನ ಆರೋಗ್ಯ ಸುಧಾರಿಸುತ್ತದೆ. ಅಂತೆಯೇ, ಒಳ್ಳೆಯ ಗುಣಮಟ್ಟದ ಪ್ರೋಟೀನ್ ಇರುವ ಬೇಳೆಕಾಳುಗಳು ಕೂಡ ಹೃದಯದ ಆರೋಗ್ಯಕ್ಕೆ ಸಹಾಯಕಾರಿ. ಅಧಿಕ ರಕ್ತದೊತ್ತಡಕ್ಕೆ ಸಂಬಂಧಿಸಿದ ಯಾವುದೇ ಕಾಯಿಲೆಯ ನಿಯಂತ್ರಣ ಮತ್ತು ನಿರ್ವಹಣೆಯಲ್ಲಿ ಸಸ್ಯಜನ್ಯ ಪ್ರೋಟೀನ್ ಸೇವನೆಯು ಮಾಂಸಜನ್ಯ ಪ್ರೋಟೀನ್‌ಗಿಂತಲೂ ಉತ್ತಮ ಎಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಪ್ರಾಣಿಜನ್ಯ ಪ್ರೋಟೀನ್‌ನ ಆಯ್ಕೆಗಳಲ್ಲಿ ಮೀನು ಮತ್ತು ಸಮುದ್ರಜೀವಿಗಳು ಹೃದಯದ ಆರೋಗ್ಯಕ್ಕೆ ಒಳಿತು. ಎಣ್ಣೆಯಲ್ಲಿ ಕರಿದ ಮತ್ತು ಸಂಸ್ಕರಿತ ಮಾಂಸವನ್ನು ಹೃದ್ರೋಗಿಗಳು ದೂರವಿಡಬೇಕೆಂದು ತಜ್ಞರ ಅಭಿಮತ. ಕಡಿಮೆ ಜಿಡ್ಡಿನ ಅಂಶದ ಡೇರಿ ಪದಾರ್ಥಗಳು ತೂಕದ ನಿರ್ವಹಣೆಯಲ್ಲೂ ಸಹಕಾರಿ. ಇವು ರಕ್ತದಲ್ಲಿ ಅಪಾಯಕಾರಿ ಕೊಲೆಸ್ಟ್ರಾಲ್ ಅಂಶವನ್ನು ತಗ್ಗಿಸಿ, ಹೃದ್ರೋಗದ ಸಾಧ್ಯತೆಗಳನ್ನು ಇಳಿಸುತ್ತವೆ. ಸಕ್ಕರೆ ಮತ್ತು ಉಪ್ಪುಯುಕ್ತ ಡೇರಿ ಪದಾರ್ಥಗಳ ಬದಲಿಗೆ ಇಂತಹ ಯಾವುದೇ ಬೆರಕೆ ಇಲ್ಲದವುಗಳ ಬಳಕೆ ಉತ್ತಮ. ಸಂಸ್ಕರಿತ ಜಿಡ್ಡು ಅಥವಾ ಬೆಣ್ಣೆಯ ಬದಲಿಗೆ ಸಸ್ಯಜನ್ಯ ಎಣ್ಣೆಯ ಬಳಕೆ ಹೃದಯಕ್ಕೆ ಕ್ಷೇಮಕರ ಎಂದು ಅಧ್ಯಯನಗಳು ತಿಳಿಸಿವೆ.

ಅಧಿಕ ಸಕ್ಕರೆಯ ಬಳಕೆ ಹೃದ್ರೋಗಕ್ಕೆ ನೇರ ದಾರಿ. ಸಕ್ಕರೆ ಎಂದರೆ ಕೇವಲ ಹರಳು ಸಕ್ಕರೆ ಎಂದಷ್ಟೇ ಅಲ್ಲ. ಮೂಲತಃ ಗ್ಲೂಕೋಸ್, ಫ್ರಕ್ಟೋಸ್ ಮೊದಲಾದ ಸರಳ ಸಕ್ಕರೆಯ ಅಂಶವಿರುವ ಯಾವುದೇ ಪದಾರ್ಥವೂ ಸಕ್ಕರೆಯ ಲೆಕ್ಕಕ್ಕೇ ಬರುತ್ತದೆ. ಬೆಲ್ಲ, ಜೇನು, ಮೇಪಲ್ ಸಿರಪ್, ಕಾರ್ನ್ ಸಿರಪ್ ಮೊದಲಾದ ಯಾವುದೇ ಸಿಹಿಕಾರಿ ವಸ್ತುವನ್ನೂ ಸಕ್ಕರೆ ಎಂದೇ ಪರಿಗಣಿಸಬೇಕು. ಆಹಾರದಲ್ಲಿ ಸರಳ ಸಕ್ಕರೆ ಹೆಚ್ಚಾದಷ್ಟೂ ಕಾಯಿಲೆರಹಿತ ಜೀವಿತಾವಧಿ ಕಡಿಮೆಯಾಗುತ್ತದೆ. ಸಕ್ಕರೆಯ ಬದಲಿಗೆ ಕಡಿಮೆ ಕ್ಯಾಲರಿಯುಕ್ತ ಸಿಹಿಕಾರಿ ರಾಸಾಯನಿಕ ಬಳಕೆಯ ಪ್ರತಿಪಾದನೆಯಿದೆ. ಆದರೆ ಇಂತಹ ರಾಸಾಯನಿಕಗಳು ಮಿದುಳಿನ, ಕರುಳಿನ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡಬಹುದು ಎಂದು ತಜ್ಞರು ಸಂಶಯಿಸಿದ್ದಾರೆ. ಅಧಿಕ ಉಪ್ಪಿನ ಬಳಕೆ ಮತ್ತು ಅಧಿಕ ರಕ್ತದೊತ್ತಡಗಳ ಸಂಬಂಧ ಈಗಾಗಲೇ ಸ್ಥಿರವಾಗಿದೆ. ನಲವತ್ತರ ವಯಸ್ಸಿನ ನಂತರ ಉಪ್ಪಿನ ಬಳಕೆಯನ್ನು ಕಡಿತಗೊಳಿಸುತ್ತಾ ಹೋಗುವುದು ಅಧಿಕ ರಕ್ತದೊತ್ತಡದ ಸಮಸ್ಯೆ ಇಲ್ಲದವರಿಗೂ ಉಪಯುಕ್ತ.

ಯಾವುದೇ ವಯಸ್ಸಿನಲ್ಲೂ ಮದ್ಯಪಾನ ಹೃದ್ರೋಗಕ್ಕೆ ದಾರಿ ಮಾಡಬಲ್ಲದು. ಸಣ್ಣ ವಯಸ್ಸಿನಲ್ಲೇ ತೀವ್ರ ಹೃದಯಾಘಾತಕ್ಕೆ ಒಳಗಾಗುವ ಬಹುತೇಕ ಮಂದಿ ಸಾಮಾಜಿಕ ಯಾ ವೈಯಕ್ತಿಕ ಕಾರಣಗಳಿಗಾಗಿ ಕೆಲಕಾಲವಾದರೂ ಮದ್ಯಸೇವನೆ ಮಾಡಿರುತ್ತಾರೆ ಎಂದು ಸಂಶೋಧನೆಗಳು ತಿಳಿಸಿವೆ. ಇದರ ಕಾಲಾವಧಿ ಮತ್ತು ಪ್ರಮಾಣ ಒಬ್ಬೊಬ್ಬರಲ್ಲಿ ಒಂದೊಂದು ರೀತಿ ಇರಬಹುದು. ಹೃದಯ ಮತ್ತು ಮಿದುಳು ಸಂಬಂಧಿ ದೀರ್ಘಾವಧಿ ಕಾಯಿಲೆಗಳಿಗೆ ಮದ್ಯಪಾನ ಕಾರಣವಾಗುತ್ತದೆ. ಮಿತವಾದ ಮದ್ಯಪಾನ ಒಳಿತು ಎಂದು ಹಲವರು ಪ್ರತಿಪಾದಿಸಿದರೂ ಇದಕ್ಕೆ ಪುಷ್ಟಿ ನೀಡುವ ಗಟ್ಟಿಯಾದ ವೈಜ್ಞಾನಿಕ ಆಧಾರ ಇಲ್ಲ.

ಆಹಾರ ನಮ್ಮ ಜೀವನಸಂಗಾತಿಯಷ್ಟೇ ಅಲ್ಲ; ಉತ್ತಮ ಆರೋಗ್ಯವನ್ನು ಪ್ರಸಾದಿಸುವ ಸಂಜೀವಿನಿ ಕೂಡ. ಹೃದಯ, ಮಿದುಳು ಸೇರಿದಂತೆ ಹಲವಾರು ಅಂಗಗಳ ದೀರ್ಘಕಾಲಿಕ ಕಾಯಿಲೆಗಳ ನಿಯಂತ್ರಣ ಮತ್ತು ನಿರ್ವಹಣೆಗೆ ಆರೋಗ್ಯಕರ ಆಹಾರ ರಹದಾರಿ.

❖

ಅರಿವಳಿಕೆಯ ಅರಿವಿರಲಿ

ಡಾ. ಶ್ರೀನಿವಾಸ ಹರಪನಹಳ್ಳಿ

ಇಂದಿನ ಯುಗದಲ್ಲಿ ಎಲ್ಲರಿಗೂ ಆಸ್ಪತ್ರೆಯ ಅನುಭವ ಒಂದಲ್ಲ ಒಂದು ರೀತಿಯಲ್ಲಿ ಆಗೇ ಆಗಿರುತ್ತದೆ. ಆಸ್ಪತ್ರೆಯಲ್ಲಿನ ಚಿಕಿತ್ಸೆ, ಆಪರೇಷನ್, ಔಷಧ, ಚುಚ್ಚುಮದ್ದು ಇತ್ಯಾದಿ ಶಬ್ದಗಳ ಪರಿಚಯವಾಗಿರುತ್ತದೆ. ಅದೇ ರೀತಿ ನಮ್ಮ ಕಿವಿಗೆ ಆಗಾಗ ಬೀಳುವ ಶಬ್ದವೆಂದರೆ ಅನೇಸ್ತೇಶಿಯಾ (ಅರಿವಳಿಕೆ). ಅದರಲ್ಲೂ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿರುವ ರೋಗಿಗಳು ಮತ್ತವರ ಸಂಬಂಧಿಕರು ಈ 'ಅರಿವಳಿಕೆ' ಶಬ್ದವನ್ನು ಕೇಳೇ ಕೇಳಿರುತ್ತಾರೆ.

ಇಂದು ಶಸ್ತ್ರಚಿಕಿತ್ಸೆಗೆ ಒಳಗಾಗುವ ಅನೇಕ ರೋಗಿಗಳು ಕೇಳುವ ಬಹುಮುಖ್ಯ ಪ್ರಶ್ನೆ: 'ಆಪರೇಷನ್ ಸಮಯದಲ್ಲಿ ನೋವಾಗುತ್ತಾ?'. ಇದು ನೂರಾರು ವರ್ಷಗಳಿಂದ ಕೇಳುತ್ತ ಬಂದಿರುವ ಪ್ರಶ್ನೆ. ರೋಗಿಗೆ ನೋವುರಹಿತ ಶಸ್ತ್ರಚಿಕಿತ್ಸೆ ಮಾಡುವ ಬಗ್ಗೆ ಅನೇಕ ಪ್ರಯತ್ನಗಳು ಶತಶತಮಾನಗಳಿಂದ ನಡೆದಿವೆ. ಹಿಂದೆಲ್ಲ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರೋಗಿಗೆ ಸುರಾಪಾನ ಮಾಡಿಸಿ ಮತ್ತೇರಿಸಿ ಅಥವಾ ಮರದ ಕೊರಡಿನಿಂದ ತಲೆಗೆ ಬಲವಾದ ಪೆಟ್ಟು ಕೊಟ್ಟು ಪ್ರಜ್ಞೆತಪ್ಪಿಸಿ ನಂತರ ಶಸ್ತ್ರಕ್ರಿಯೆಗೆ ಮುಂದಾಗುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ರೋಗಿಗೆ ಪ್ರಜ್ಞೆ ಮರಳಿ ಬರುತ್ತಲೇ ಇರಲಿಲ್ಲ! ಡಬ್ಲ್ಯು.ಟಿ.ಜಿ. ಮೋರ್ಟನ್ ಎಂಬ ವೈದ್ಯ 1846ರ ಅಕ್ಟೋಬರ್ 16ರಂದು ಅಮೆರಿಕದ ಮೆಸಾಚುಸೆಟ್ಸ್ ಜನರಲ್ ಆಸ್ಪತ್ರೆಯಲ್ಲಿ ಈಥರ್ ಎಂಬ ರಾಸಾಯನಿಕವನ್ನು ರೋಗಿಯೊಬ್ಬನಿಗೆ ನೀಡಿ ಮಂಪರು ಬರಿಸಿ ಶಸ್ತ್ರಚಿಕಿತ್ಸೆಗೆ ನೆರವಾದ. ಇದು ಜಗತ್ತಿನ ಮೊಟ್ಟಮೊದಲ ಅಧಿಕೃತ ಅರಿವಳಿಕೆಯಾಗಿತ್ತು. ಈ ಘಟನೆಯ ನಂತರ ವೈದ್ಯಕೀಯ ರಂಗದಲ್ಲಿ ಮಹತ್ತರ ಬದಲಾವಣೆಯಾಯಿತು. ಶಸ್ತ್ರಕ್ರಿಯೆ ಒಂದು ನೋವುರಹಿತ ಮತ್ತು ಸುರಕ್ಷಿತವಾದ ಚಿಕಿತ್ಸಾಪದ್ಧತಿಯಾಗಿ ಮಾರ್ಪಟ್ಟಿತು. ವೈದ್ಯಜಗತ್ತು ಮೊದಲಬಾರಿಗೆ ನೋವಿನ ಮೇಲೆ ಹತೋಟಿಯನ್ನು ಸಾಧಿಸಿತು. ತದನಂತರ ಅರಿವಳಿಕೆ ಶಾಸ್ತ್ರದಲ್ಲಿ ಅನೇಕ ಸಂಶೋಧನೆಗಳು ನಡೆದು ಇಂದು ಅರಿವಳಿಕೆ ಶಾಸ್ತ್ರ ಆಧುನಿಕ ವೈದ್ಯಪದ್ಧತಿಯ ಒಂದು ಅವಿಭಾಜ್ಯ ಅಂಗವಾಗಿದೆ.

ಅರಿವಳಿಕೆಯಲ್ಲಿ ಕೂಡ ಹಲವಾರು ವಿಧಗಳಿವೆ. ಚರ್ಮದ ಮೇಲಿನ ಚಿಕ್ಕಪುಟ್ಟ ಗಡ್ಡೆಗಳಿಗೆ 'ಲೋಕಲ್ ಅನೇಸ್ತೇಶಿಯಾ' (ಗಡ್ಡೆಯ ಸುತ್ತ ಇಂಜೆಕ್ಷನ್ ಮೂಲಕ ಕೊಡುವ ಅರಿವಳಿಕೆಯ ಔಷಧ) ಕೊಟ್ಟು ನೋವಿಲ್ಲದಂತೆ ಅವುಗಳನ್ನು ತೆಗೆಯಬಹುದು. ಇನ್ನು ಸೊಂಟ ಅಥವಾ ಕಾಲಿನ ತೊಂದರೆಗಳಿಗೆ 'ಸ್ಪೈನಲ್ ಅನೇಸ್ತೇಸಿಯಾ' (ಬೆನ್ನುಹುರಿಯಲ್ಲಿ ನೀಡುವ ಇಂಜೆಕ್ಷನ್) ಮೂಲಕ ಅರಿವಳಿಕೆ ನೀಡಿ ಶಸ್ತ್ರಚಿಕಿತ್ಸೆ ಮಾಡಬಹುದು. ಮಿದುಳು, ಶ್ವಾಸಕೋಶ, ಹೃದಯಸಂಬಂಧಿ ಕಾಯಿಲೆಗಳಿಗೆ ಶಸ್ತ್ರಚಿಕಿತ್ಸೆ ಬೇಕಾದಾಗ ಸಂಪೂರ್ಣ ಪ್ರಜ್ಞೆ ತಪ್ಪಿಸಬೇಕಾಗಿ ('ಜನರಲ್ ಅನೇಸ್ತೇಸಿಯಾ') ಬರಬಹುದು. ಇದಲ್ಲದೇ ಅರಿವಳಿಕೆಯ ಔಷಧವನ್ನು ನೀಡಿ. ಕೆಲವೇ ಕೆಲವು ನರಗಳನ್ನು ಮಾತ್ರವೇ ನಿಶ್ಚೇತನಗೊಳಿಸಿ ಕೆಲವೊಂದು ಶಸ್ತ್ರಚಿಕಿತ್ಸೆಗಳನ್ನು ಮಾಡಬಹುದು.

ವಿಶೇಷ ಸಂದರ್ಭಗಳಲ್ಲಿ...

ಅನೇಕ ಬಾರಿ ಗರ್ಭಿಣಿಯರಲ್ಲಿ ಸ್ಕ್ಯಾನ್ ಮಾಡಿದಾಗ, ಬೆಳೆಯುತ್ತಿರುವ ಮಗುವಿನಲ್ಲಿ ತೊಂದರೆಗಳು ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಶಸ್ತ್ರಕ್ರಿಯೆಯ ಮೂಲಕ ಅವುಗಳನ್ನು ಸರಿಪಡಿಸಬೇಕಾಗುತ್ತದೆ. ಇಂತಹ ಸಮಯದಲ್ಲಿ ಭ್ರೂಣಕ್ಕೆ ತಾಯಿಯ ಮೂಲಕ ಅರಿವಳಿಕೆ ನೀಡಬೇಕಾಗುತ್ತದೆ.

'ಸಿಟಿ ಸ್ಕ್ಯಾನ್' ಮತ್ತು 'ಎಂ. ಆರ್. ಐ. ಸ್ಕ್ಯಾನ್' ಮಾಡಿಸುವ ಸಮಯದಲ್ಲಿ ಕೂಡ ಕೆಲವೊಮ್ಮೆ ಅರಿವಳಿಕೆ ನೀಡಬೇಕಾಗುತ್ತದೆ. ವಿಶೇಷವಾಗಿ ಚಿಕ್ಕಮಕ್ಕಳಿಗೆ ಸ್ಕ್ಯಾನ್ ಬೇಕಾದಾಗ ಇದು ಅವಶ್ಯ. ಸ್ಕ್ಯಾನಿಂಗ್ ಕೋಣೆಯಲ್ಲೇ ಇಡುವಂತಹ ಅರಿವಳಿಕೆ ಯಂತ್ರಗಳು ಈಗ ಲಭ್ಯವಿದ್ದು, ಅವುಗಳ ಮೂಲಕ ಅರಿವಳಿಕೆಯನ್ನು ಸುರಕ್ಷಿತವಾಗಿ ನೀಡಬಹುದಾಗಿದೆ.

ಕೆಲವೊಂದು ಮಿದುಳಿನ ಶಸ್ತ್ರಕ್ರಿಯೆಗಳನ್ನು ರೋಗಿಯು ಎಚ್ಚರವಿದ್ದಾಗಲೇ ಮಾಡಬಹುದು. ತಲೆಯ ಸುತ್ತಲೂ 2-4 ಅರಿವಳಿಕೆ ಇಂಜೆಕ್ಷನ್ ನೀಡುವುದರ ಮೂಲಕ ಇದು ಸಾಧ್ಯವಾಗುತ್ತದೆ. ಆಪರೇಷನ್ ನಡೆಯುತ್ತಿರುವಾಗಲೇ ರೋಗಿಯ ಕೈ-ಕಾಲುಗಳ ಚಲನೆ ಪರೀಕ್ಷಿಸಲು ಇದು ಸಹಕಾರಿ.

ಅರಿವಳಿಕೆಯ ಶಾಸ್ತ್ರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿದ್ದು ಅನೇಕ ಔಷಧಗಳು, ಪದ್ಧತಿಗಳು ಈಗ ನೇಪಥ್ಯಕ್ಕೆ ಸರಿದಿವೆ. ಈಥರ್ ಅಥವಾ ಕ್ಲೋರೊಫಾರ್ಮ್‌ನಂತಹ ಔಷಧಗಳನ್ನು ಈಗ ಅರಿವಳಿಕೆ ನೀಡಲು ಬಳಸುವುದಿಲ್ಲ. ಬದಲಾಗಿ ಅವಕ್ಕಿಂತ ಹೆಚ್ಚು ಶಕ್ತಿಶಾಲಿಯಾದ ಮತ್ತು ಸುರಕ್ಷಿತವಾದ ಹಲವಾರು ಔಷಧಗಳು ಈಗ ಬಳಕೆಯಲ್ಲಿವೆ. ರೋಗಿಯ ಹೃದಯಬಡಿತ, ಉಸಿರಾಟ, ಆಮ್ಲಜನಕದ ಪ್ರಮಾಣವನ್ನು ತೋರಿಸುವ ಮಾನಿಟರ್‌ಗಳು ಮತ್ತು ಸುಧಾರಿತ ಅರಿವಳಿಕೆ ಯಂತ್ರಗಳು ಲಭ್ಯವಿವೆ. ಇವೆಲ್ಲವೂ ಅರಿವಳಿಕೆಯ ಬಳಕೆಯನ್ನು ಸುರಕ್ಷಿತವಾಗಿರಿಸಿವೆ. ಅಲ್ಲದೇ, ಅಲ್ಟ್ರಾಸೌಂಡ್, ಫೈಬರ್ ಆಪ್ಟಿಕ್ ಸ್ಕೋಪಿನಂತಹ ಆಧುನಿಕ ಉಪಕರಣಗಳ ಸಹಾಯದಿಂದ ಅರಿವಳಿಕೆಯ ತಜ್ಞರು ಈಗ ಕ್ಲಿಷ್ಟಕರ ಸಂದರ್ಭಗಳಲ್ಲೂ ನಿಖರವಾಗಿ ಅರಿವಳಿಕೆಯನ್ನು ನೀಡಬಲ್ಲರು.

ಸುಮಾರು ಒಂದೂಮುಕ್ಕಾಲು ಶತಮಾನದಷ್ಟೇ ಇತಿಹಾಸವಿರುವ ಆಧುನಿಕ ಅರಿವಳಿಕೆಯ ಶಾಸ್ತ್ರ ಇಂದು ಸಾಮಾನ್ಯ, ಚಿಕ್ಕಪುಟ್ಟ ಶಸ್ತ್ರಚಿಕಿತ್ಸೆಯಿಂದ ಹಿಡಿದು ಅತ್ಯಂತ ಕ್ಲಿಷ್ಟಕರ, ಸೂಕ್ಷ್ಮ ಶಸ್ತ್ರಚಿಕಿತ್ಸೆಗಳಿಗೂ ತನ್ನ ನೆರವನ್ನು ನೀಡಿ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಲು ಕಾರಣವಾಗಿದೆ. ಅಷ್ಟೇ ಅಲ್ಲ, ಅರಿವಳಿಕೆಯ ತಜ್ಞರು ಇಂದು ಶಸ್ತ್ರಚಿಕಿತ್ಸೆ ಕೋಣೆಯಲ್ಲಷ್ಟೇ ಅಲ್ಲದೇ ತೀವ್ರ ನಿಗಾ ಘಟಕ ('ಐಸಿಯು'), ತುರ್ತುಚಿಕಿತ್ಸಾ ಘಟಕ ಮತ್ತು ನೋವುನಿವಾರಣಾ ಕೇಂದ್ರಗಳ ಮೇಲ್ವಿಚಾರಣೆಯನ್ನೂ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಇಂದು 'ಎಪಿಡ್ಯೂರಲ್ ಅರಿವಳಿಕೆ' ಮೂಲಕ ನೋವುರಹಿತ ಹೆರಿಗೆ ಕೂಡ ಸಾಧ್ಯವಿದೆ.

ಜಗತ್ತಿನಾದ್ಯಂತ ಇಂದು ಪ್ರತಿದಿನ ಲಕ್ಷಗಟ್ಟಲೇ ಶಸ್ತ್ರ ಚಿಕಿತ್ಸೆಗಳು ಸುರಕ್ಷಿತವಾಗಿ ನಡೆಯಲು ಅರಿವಳಿಕೆಯೇ ಪ್ರಮುಖ ಕಾರಣವೆಂದರೆ ತಪ್ಪಿಲ್ಲ.ಅಂದು, 1846ರ ಅಕ್ಟೋಬರ್ 16ರಂದು ಅರಿವಳಿಕೆಯ ಪ್ರಾತ್ಯಕ್ಷಿಕೆಗೆ ಸಾಕ್ಷಿಯಾದ ಮೆಸಾಚುಸೆಟ್ಸ್ ಜನರಲ್ ಆಸ್ಪತ್ರೆಯ ಕೊಠಡಿಯನ್ನು 'ಈಥರ್ ಡೋಮ್' ಎಂದೇ ನಾಮಕರಣ ಮಾಡಲಾಗಿದೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

20) ಉಭಯವಾಸಿಗಳು ಮತ್ತು ಬಹುತೇಕ ಸರೀಸೃಪಗಳಂಥ ಪ್ರಾಣಿಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ ?

ಉತ್ತರ:– ಮೂರು

21) ಮೀನುಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ?

ಉತ್ತರ:– ಎರಡು

23) ರಕ್ತದೊತ್ತಡದ ಬಗ್ಗೆ ಬರೆಯಿರಿ

ಉತ್ತರ:– ಒಂದು ರಕ್ತನಾಳದ ಗೋಡೆಯ ಮೇಲೆ ರಕ್ತವು ಉಂಟುಮಾಡುವ ಬಲವನ್ನು ರಕ್ತದೊತ್ತಡ ಎನ್ನುವರು. ಈ ಒತ್ತಡವು ಅಭಿಧಮನಿಗಳಿಗಿಂತ ಅಪಧಮನಿಗಳಲ್ಲಿ ಸಾಕಷ್ಟು ಅಧಿಕವಾಗಿರುತ್ತದೆ. ಹೃತ್ಕುಕ್ಷಿಗಳ ಸಂಕುಚನದಿಂದಾದ ಅಪಧಮನಿಗಳಲ್ಲಿನ ರಕ್ತದ ಒತ್ತಡವನ್ನು ಸಂಕುಚನದ (systolic) ಒತ್ತಡ ಎನ್ನುವರು ಮತ್ತು ಹೃತ್ಕುಕ್ಷಿಗಳ ವಿಕಸನದಿಂದ ಉಂಟಾಗುವ ಅಪಧಮನಿಗಳಲ್ಲಿನ ಒತ್ತಡವನ್ನು ವ್ಯಾಕೋಚನದ (diastolic) ಒತ್ತಡ ಎನ್ನುವರು. ಸಾಮಾನ್ಯ ಸಂಕುಚನದ ಒತ್ತಡವು ಸುಮಾರು 120mm ಪಾದರಸ ಮತ್ತು ವ್ಯಾಕೋಚನದ ಒತ್ತಡವು 80mm ಪಾದರಸಗಳಷ್ಟಿರುತ್ತದೆ.

24) ಯಾವುದನ್ನು ಲೋಮನಾಳಗಳು ಎನ್ನುವರು?

ಉತ್ತರ:– ಅಪಧಮನಿಯು ಒಂದು ಅಂಗವನ್ನು ಅಥವಾ ಅಂಗಾಂಶವನ್ನು ತಲುಪಿದ ನಂತರ, ರಕ್ತವನ್ನು ಪ್ರತಿಯೊಂದು ಜೀವಕೋಶದ ಸಂಪರ್ಕಕ್ಕೆ ತರಲು ಸಣ್ಣ ಸಣ್ಣ ನಾಳಗಳಾಗಿ ವಿಭಜಿಸುತ್ತದೆ. ಅತ್ಯಂತ ಸಣ್ಣ ನಾಳಗಳು ಒಂದು ಜೀವಕೋಶದಷ್ಟು ದಪ್ಪ ಭಿತ್ತಿಯನ್ನು ಹೊಂದಿದ್ದು ಅದನ್ನು ಲೋಮನಾಳ ಎಂದು ಕರೆಯುವರು.

25) ಒಂದು ವೇಳೆ ಈ ನಾಳವ್ಯವಸ್ಥೆಯಲ್ಲಿ ಸೋರಿಕೆ ಉಂಟಾದರೆ ಗಾಯಗೊಂಡು ರಕ್ತಸ್ರಾವವಾಗುತ್ತದೆ. ಪರಿಸ್ಥಿತಿ ನಿಯಂತ್ರಿಸಲು ಗಾಯವಾದ ಪ್ರದೇಶಗಳಲ್ಲಿ ರಕ್ತವು ಹೆಪ್ಪುಗಟ್ಟುವಂತೆ ಮಾಡಿ ಈ ಸೋರಿಕೆಗಳನ್ನು ನಿಲ್ಲಿಸಲಾಗುತ್ತದೆ. ಹಾಗಾದರೆ ಈ ಕಾರ್ಯದಲ್ಲಿ ಯಾವುದು ಪ್ರಧಾನ ಪಾತ್ರ ನೀಡುತ್ತದೆ?

ಉತ್ತರ:– ಕಿರುತಟ್ಟೆ

26) ದುಗ್ಧರಸದ ಬಗ್ಗೆ ಬರೆಯಿರಿ


ಉತ್ತರ:– ಮಾನವನ ದೇಹದಲ್ಲಿ ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿರುವ ದ್ರವಗಳಲ್ಲಿ ಒಂದು ದುಗ್ದರಸ (lymph) ಇದನ್ನು ಅಂಗಾಂಶದ್ರವ ಎಂದು ಸಹಾ ಕರೆಯುತ್ತಾರೆ. ಲೋಮನಾಳಗಳ ಭಿತ್ತಿಯಲ್ಲಿ ಕಂಡು ಬರುವ ರಂಧ್ರಗಳ ಮೂಲಕ ಸ್ವಲ್ಪ ಪ್ರಮಾಣದ ಪ್ಲಾಸ್ಮ, ಪ್ರೋಟೀನ್‌ಗಳು ಮತ್ತು ರಕ್ತ ಜೀವಕೋಶಗಳು ಅಂಗಾಂಶಗಳಲ್ಲಿನ ಅಂತರಕೋಶೀಯ ಅವಕಾಶಗಳೊಳಗೆ ಪ್ರವೇಶಿಸಿ ಅಂಗಾಂಶದ್ರವ ಅಥವಾ ದುಗ್ದರಸವನ್ನು ಉಂಟುಮಾಡುತ್ತವೆ. ಇದು ರಕ್ತದಲ್ಲಿನ ಪ್ಲಾಸ್ಮಾದಂತೆಯೇ ಇರುತ್ತದೆ ಆದರೆ ಬಣ್ಣರಹಿತವಾಗಿದ್ದು ಕಡಿಮೆ ಪ್ರೋಟೀನನ್ನು ಹೊಂದಿರುತ್ತದೆ. ಅಂತರಕೋಶೀಯ ಅವಕಾಶಗಳ ಮೂಲಕ ದುಗ್ದರಸವು ದುಗ್ದಲೋಮನಾಳಗಳಲ್ಲಿ ಹರಿಯುತ್ತದೆ, ಅವುಗಳು ಒಂದುಗೂಡಿ ದೊಡ್ಡ ದುಗ್ದನಾಳಗಳನ್ನು ಉಂಟುಮಾಡುತ್ತವೆ. ಅವು ಅಂತಿಮವಾಗಿ ದೊಡ್ಡದಾದ ಅಭಿಧಮನಿಗಳಿಗೆ ತೆರೆಯುತ್ತವೆ.

27) **ದುಗ್ಧರಸದ ಕಾರ್ಯವೇನು?**

ಉತ್ತರ: ದುಗ್ದರಸವು ಜೀರ್ಣವಾದ ಮತ್ತು ಕರುಳಿನಿಂದ ಹೀರಲ್ಪಟ್ಟ ಕೊಬ್ಬನ್ನು ಸಾಗಿಸುತ್ತದೆ ಮತ್ತು ಜೀವಕೋಶದ ಹೊರಗಿರುವ ಅಧಿಕ ದ್ರವ ಪದಾರ್ಥವನ್ನು ಮರಳಿ ರಕ್ತಕ್ಕೆ ಹರಿಯುವಂತೆ ಮಾಡುತ್ತದೆ.

28) 'ಹೃದಯವು ಒಂದು ಪಂಪ್' ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ನಮ್ಮ ಮುಷ್ಟಿಯಷ್ಟು ದೊಡ್ಡದಿದೆ. ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ಎರಡನ್ನೂ ರಕ್ತದ ಮೂಲಕ ಸಾಗಾಣಿಕೆ ಮಾಡಬೇಕಿರುವುದರಿಂದ, ಹೃದಯವು ಆಕ್ಸಿಜನ್‌ಸಮೃದ್ಧ ರಕ್ತವನ್ನು ಕಾರ್ಬನ್ ಡೈಆಕ್ಸೈಡ್‌ಯುಕ್ತ ರಕ್ತದೊಂದಿಗೆ ಮಿಶ್ರಣವಾಗದಂತೆ ತಡೆಯಲು ವಿಭಿನ್ನ ಕೋಣೆಗಳನ್ನು ಹೊಂದಿದೆ.




ಕಾರ್ಬನ್ ಡೈಆಕ್ಸೈಡ್ ಅನ್ನು ತೆಗೆದು ಹಾಕಲು ಕಾರ್ಬನ್ ಡೈಆಕ್ಸೈಡ್‌ಸಮೃದ್ಧ ರಕ್ತವು ಶ್ವಾಸಕೋಶವನ್ನು ತಲುಪಬೇಕು ಮತ್ತು ಆಕ್ಸಿಜನ್‌ಪೂರಿತ ರಕ್ತವನ್ನು ಶ್ವಾಸಕೋಶಗಳಿಂದ ಮರಳಿ ಹೃದಯಕ್ಕೆ ತರಬೇಕು. ಈ ಆಕ್ಸಿಜನ್ ಸಮೃದ್ಧ ರಕ್ತವನ್ನು ನಂತರ ದೇಹದ ಉಳಿದ ಭಾಗಗಳಿಗೆ ಪಂಪ್ ಮಾಡಲಾಗುತ್ತದೆ. (ಅಭಿಧಮನಿ ಅಪಧಮನಿ ಚಿತ್ರ ನೋಡಿ)

ಆಕ್ಸಿಜನ್‌ಸಮೃದ್ಧ ರಕ್ತವು ಶ್ವಾಸಕೋಶಗಳಿಂದ ತೆಳುವಾದ ಭಿತ್ತಿಯಿರುವ ಹೃದಯದ ಮೇಲಿನ ಕೋಣೆ, ಎಡ ಹೃತ್ಕರ್ಣಕ್ಕೆ ಬರುತ್ತದೆ. ಈ ರಕ್ತವನ್ನು ಪಡೆದಾಗ ಎಡ ಹೃತ್ಕರ್ಣವು ಸಡಿಲಗೊಳ್ಳುತ್ತದೆ ನಂತರ ಇದು ಸಂಕುಚಿಸುತ್ತದೆ. ಆಗ ಪಕ್ಕದ ಕೋಣೆ, ಎಡ ಹೃತ್ಕುಕ್ಷಿ ಹಿಗ್ಗುತ್ತದೆ. ಇದರಿಂದಾಗಿ ರಕ್ತವು ಇದಕ್ಕೆ ವರ್ಗಾವಣೆಗೊಳ್ಳುತ್ತದೆ. ಯಾವಾಗ ಸ್ನಾಯುವಿನಿಂದಾದ ಎಡಹೃತ್ಕುಕ್ಷಿಯು ಸಂಕುಚಿಸುತ್ತದೆಯೋ, ರಕ್ತವು ದೇಹದೊಳಗೆ ಪಂಪ್ ಮಾಡಲ್ಪಡುತ್ತದೆ. ಬಲಭಾಗದ ಮೇಲಿನ ಕೋಣೆ, ಬಲಹೃತ್ಕರ್ಣವು ಹಿಗ್ಗಿದಾಗ ಆಕ್ಸಿಜನ್‌ರಹಿತ ರಕ್ತವು ದೇಹದಿಂದ ಅದಕ್ಕೆ ಬರುತ್ತದೆ. ಬಲಹೃತ್ಕರ್ಣವು ಸಂಕುಚಿಸಿದಂತೆ ಅದಕ್ಕನುಗುಣವಾಗಿ ಕೆಳಗಿನ ಕೋಣೆ, ಬಲಹೃತ್ಕುಕ್ಷಿಯು ಹಿಗ್ಗುತ್ತದೆ. ಇದು ಬಲಹೃತ್ಕುಕ್ಷಿಗೆ ರಕ್ತವನ್ನು ವರ್ಗಾಯಿಸುತ್ತದೆ. ಅದು ಈ ರಕ್ತವನ್ನು ಆಕ್ಸಿಜನ್‌ಪೂರಿತಗೊಳಿಸಲು ಶ್ವಾಸಕೋಶಗಳಿಗೆ ಪಂಪ್ ಮಾಡುತ್ತದೆ. ಹೃತ್ಕುಕ್ಷಿಗಳು ರಕ್ತವನ್ನು ಹಲವಾರು ಅಂಗಗಳಿಗೆ ಪಂಪ್ ಮಾಡಬೇಕಿರುವುದರಿಂದ ಅವು ಹೃತ್ಕರ್ಣಗಳಿಗಿಂತ ದಪ್ಪವಾದ ಸ್ನಾಯುವಿನ ಭಿತ್ತಿಗಳನ್ನು ಹೊಂದಿವೆ. ಹೃತ್ಕರ್ಣಗಳು ಅಥವಾ ಹೃತ್ಕುಕ್ಷಿಗಳು ಸಂಕುಚಿಸಿದಾಗ ರಕ್ತವು ಹಿಮ್ಮುಖವಾಗಿ ಹರಿಯದಂತೆ ಕವಾಟಗಳು ನಿಯಂತ್ರಿಸುತ್ತವೆ.

ಹೀಗಾಗಿಯೇ ಹೃದಯ ಒಂದು ಪಂಪ್ ಎಂದು ಹೇಳಬಹುದು

ಮಾನ್ಯ ಸಂಪಾದಕರಲ್ಲಿ ವಿನಂತಿ: ಮೇಲಿನ ಕಲರ್/ಬಣ್ಣದ ಚಿತ್ರ ಸರಿ ಹೊಂದದೇ ಹೋದಲ್ಲಿ ಕೆಳಗಿನ ಕಪ್ಪು ಬಿಳಿಪು/ಬ್ಲಾಕ್ ಎಂಡ್ ವೈಟ್ ಚಿತ್ರ ಬಳಸಿಕೊಳ್ಳಬಹುದು



II PUC PHYSICS

Chapter – 1

ELECTRIC CHARGES AND FIELDS

Problem:-

An infinite line charge produces a field of 9×10 N C^{-1} at a distance of 4 cm. Calculate the linear charge density.

Soln:- $$E = \frac{\lambda}{2\pi \epsilon_0 r} = \frac{2\lambda}{4\pi \epsilon_0 r}$$


$$\therefore \lambda = \frac{4\pi \epsilon_0 r E}{2}$$

$$= \frac{1}{9 \times 10^9} \times \frac{4 \times 10^{-2} \times 9 \times 10^4}{2}$$

$$= 2 \times 10^{-7}\ Cm^{-1}.$$

Electric Field intensity due to uniformly charged infinite plane sheet (flat sheet of charge)

Consider a thin infinite plane sheet having uniform surface charge density (i.e. charged per unit area) σ. To calculate the electric field intensity $\overline{E}$ at a point P distant *r* from the sheet, draw a Gaussian surface in the form of a *closed cylinder (pill box)* of length *r* on each side of sheet with end caps of area S.



Electric field $\overline{E}$ is perpendicular to the sheet and hence it is normal to the end caps I and II also. Charge enclosed by the Gaussian surface,

$$q = \sigma S$$

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\sigma S}{\epsilon_0} \text{.........(i)}$$

Gaussian surface is divided into *3 parts* I, II & III. i.e., end caps and the curved surface of the cylinder is as shown in the figure above.

∴ eqn.(i) becomes,

$$\oint_I \vec{E}.d\vec{S} + \oint_{II} \vec{E}.d\vec{S} + \oint_{III} \vec{E}.d\vec{S} = \frac{\sigma S}{\epsilon_0} \text{......(ii)}$$

Angle between $\vec{E}$ and $\overline{S}$ is 90^0 for the curved surface III.

In this case $\oint_{m} \vec{E}.d\vec{S} = E\,ds\cos 90^0 = 0.$

Hence eqn.(ii) becomes

$$\oint_I \vec{E}.d\vec{S} + \oint_{II} \vec{E}.d\vec{S} = \frac{\sigma S}{\epsilon_0}$$

Since angle between $\vec{E}$ & $d\vec{S}$ for surfaces I & II is zero, so,

$$\oint_I E\,ds\cos 0^0 + \oint_{II} E\,ds\cos 0^0 = \frac{\sigma S}{\epsilon_0} \text{ (or)}$$

$$\oint_I E\ ds + \oint_{II} E\ ds = \frac{\sigma S}{\epsilon_0}$$

Since electric field intensity E is constant at every point of the Gaussian surface so

$$\therefore E_I ds + E \oint_{II} ds = \frac{\sigma S}{\epsilon_0} \text{ (or) } ES + ES = \frac{\sigma S}{\epsilon_0}$$

$$\text{(or) } 2ES = \frac{\sigma S}{\epsilon_0}$$

$$\text{(or) } E = \frac{\sigma}{2\epsilon_0} \text{..........(7)}$$

In vector form, $\overline{E} = \frac{\sigma}{2\epsilon_0} n$, where n is a unit vector prependicular to plane of the sheet pointing away from it.

The electric field is directed away from the sheet if it is positively charged and it is directed towards the sheet if it is negatively charged.

Special Case:

If the plane sheet has a ***finite thickness,*** then charges on both sides of the sheet are to be considered.

Thus, eqn (i) is rewritten as

$$\oint \vec{E}.d\vec{S} = \frac{2\sigma S}{\epsilon_0} \text{(or)} 2ES = \frac{2\sigma S}{\epsilon_0} \text{ i.e., } E = \frac{\sigma}{\epsilon_0}$$

Note: Electric field intensity due to an infinite sheet of charge is independent of the distance of the point of observation. It depends upon surface charge density and acts perpendicular to the sheet i.e. $E \propto \sigma$.

Problem:-

1. Find the surface charge density of a plane sheet of finite thickness having an electric field of 300 Vm^{-1} acting downwards near the surface of the sheet.


Soln:- Here, $E = 300\ Vm^{-1}$

$$E = \frac{\sigma}{\epsilon_0} \Rightarrow \sigma = \epsilon_0 E$$

$$\therefore \sigma = 8.54 \times 10^{-12} \times 300$$

$$= 2.7 \times 10^{-9}\ cm^2$$

Electric Field Intensity due to two infinite plane parallel sheets of charge



Consider two infinite plane parallel sheets A and B with uniform surface charge densities σ_1 and σ_2 respectively.

Let $\sigma_1 > \sigma_2 > 0$.

Electric field pointing from left to right (+ ve *x* direction) is taken as positive, while the electric field pointing from right to left (-ve *x* direction) is taken as negative.

There are three regions I, II and III, where electric field intensity is to be calculated.

We know that electric field intensity due to infinite sheet of charge at a point away from the sheet is given by *(Contd.........)*

ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್ – 2ರ ಎಲಿವೇಟೆಡ್ ಮಾರ್ಗ

ಪಿಲ್ಲರ್ ಅಳವಡಿಕೆ ಕಾರ್ಯ ಆರಂಭ

• ಬಾಲಕೃಷ್ಣ ಪಿ.ಎಚ್.





ಬೆಂಗಳೂರು ಉಪನಗರ ರೈಲು ಯೋಜನೆಯ ಎಲಿವೇಟೆಡ್ ಮಾರ್ಗಕ್ಕಾಗಿ ಹೆಬ್ಬಾಳದಲ್ಲಿ ನಡೆಯುತ್ತಿರುವ ಪಿಲ್ಲರ್ ಅಳವಡಿಕೆ ಕಾಮಗಾರಿ ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ರೈಲ್ವೆಯ ಮಹತ್ವದ ಯೋಜನೆಯಾದ ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್‌–2ರಲ್ಲಿ ಎತ್ತರಿಸಿದ ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ಪಿಯರ್ (ಪಿಲ್ಲರ್) ನಿರ್ಮಾಣ ಕಾರ್ಯ ಆರಂಭವಾಗಿದೆ.

ಕಾರಿಡಾರ್‌–2ರ(ಮಲ್ಲಿಗೆ ಮಾರ್ಗ) ವ್ಯಾಪ್ತಿಗೆ ಸೇರುವ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ಮಾರ್ಗವು 25 ಕಿ.ಮೀ. ದೂರವಿದೆ. ಅದರಲ್ಲಿ 16.5 ಕಿ.ಮೀ. ನೆಲಮಟ್ಟದಲ್ಲಿ ಇರಲಿದೆ. ಹೆಬ್ಬಾಳದಿಂದ ಯಶವಂತಪುರದವರೆಗೆ 8.5 ಕಿ.ಮೀ.ನಷ್ಟು ಎತ್ತರಿಸಿದ (ಎಲಿವೇಟೆಡ್) ಮಾರ್ಗ ನಿರ್ಮಾಣಗೊಳ್ಳಲಿದೆ. ಪ್ರತಿ 31 ಮೀಟರ್‌ಗೆ ಒಂದರಂತೆ 400 ಪಿಲ್ಲರ್ ನಿರ್ಮಿಸಬೇಕಿದ್ದು, ಹೆಬ್ಬಾಳ ಕಡೆಯಿಂದ 30 ಪಿಲ್ಲರ್‌ಗಳ ನಿರ್ಮಾಣ ಕಾರ್ಯ ಶುರುವಾಗಿದೆ.

ರೈಲ್ವೆಯ ಹಳಿಯ ಪಕ್ಕದಲ್ಲಿಯೇ ಇರುವ ರೈಲ್ವೆಯ ಜಮೀನಿನಲ್ಲಿ ಉಪನಗರ ರೈಲು ಹಳಿಯೂ ನಿರ್ಮಾಣವಾಗುವುದರಿಂದ ಕಾರಿಡಾರ್‌–2ಗಾಗಿ ನೈರುತ್ಯ ರೈಲ್ವೆಯು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ (ಕೆ–ರೈಡ್) 157 ಎಕರೆ ಭೂಮಿಯನ್ನು ಹಸ್ತಾಂತರಿಸಿತ್ತು. ಬಳಿಕ ಎಲ್ ಆ್ಯಂಡ್ ಟಿ ಕಾಮಗಾರಿಯನ್ನು ಪ್ರಾರಂಭಿಸಿತ್ತು.

ಸಮೀಕ್ಷೆ, ಸ್ಥಳಾಂತರ, ಜಿಯೋಟೆಕ್ನಿಕಲ್ ಪರೀಕ್ಷೆ, ಸರ್ವೆ, ಜಿಪಿಆರ್, ಮಣ್ಣು ಪರೀಕ್ಷೆ ಸೇರಿದಂತೆ ಹಲವು ಪ್ರಾಥಮಿಕ ಪರಿಶೀಲನೆ ಮುಗಿದ ಬಳಿಕ ಜೋಡಣೆ ವಿನ್ಯಾಸ ಕಾರ್ಯ ಮಾಡಲಾಗಿತ್ತು. ಕಾಸ್ಟಿಂಗ್ ಯಾರ್ಡ್ ಸ್ಥಾಪನೆ, ಬ್ಯಾಚಿಂಗ್ ಪ್ಲಾಂಟ್ ಸ್ಥಾಪಿಸಲಾಗಿದೆ. ನೆಲ ಸಮತಟ್ಟು ಮಾಡುವುದು, ಸೇತುವೆಗಳ ವಿನ್ಯಾಸ, ‘ಯು’ ಗರ್ಡರ್ ಮತ್ತು ‘ಐ’ ಗರ್ಡರ್ (ಪಿಲ್ಲರ್ ಮೇಲೆ ಜೋಡಿಸುವ ಸಿಮೆಂಟ್ ರಚನೆಗಳು) ನಿರ್ಮಾಣ ಕಾರ್ಯ ಒಂದು ಕಡೆಯಿಂದ ನಡೆಯುತ್ತಿದ್ದರೆ, ಪಿಯರ್ ನಿರ್ಮಾಣ ಆರಂಭಿಸುವ ಮೂಲಕ ಕಾಮಗಾರಿಗೆ ವೇಗ ನೀಡಲಾಗಿದೆ.

ಪ್ರತಿ ಪಿಲ್ಲರ್ ಭೂಮಿಯ ಮೇಲ್ಭಾಗದಲ್ಲಿರುವುದಕ್ಕಿಂತ ಮೂರು ಪಟ್ಟು ಭೂಮಿಯ ಆಳಕ್ಕೆ ಇಳಿದಿರುತ್ತದೆ. ಆಯಾ ಪ್ರದೇಶದ ಅಗತ್ಯಕ್ಕೆ ಅನುಗುಣವಾಗಿ ಭೂಮಿ ಮೇಲೆ ಸರಾಸರಿ 30 ಅಡಿ ಎತ್ತರ ಇದ್ದರೆ, ಭೂಮಿ ಒಳಗೆ 90 ಅಡಿ ಇರಲಿದೆ. ಮೇಲೆ ಒಂದು ಪಿಲ್ಲರ್ ಇದ್ದರೆ, ಅದನ್ನು ಹೊತ್ತಿರುವ ನಾಲ್ಕು ಪಿಲ್ಲರ್ ಭೂಮಿಯಡಿ ಇರಲಿದೆ. ಪಿಲ್ಲರ್‌ಗಳ ನಡುವೆ 31 ಮೀಟರ್ ಅಂತರ ಇರಲಿದೆ ಎಂದು ಎಲ್ ಆ್ಯಂಡ್ ಟಿ ಕನ್‌ಸ್ಟ್ರಕ್ಷನ್ ಎಂಜಿನಿಯರ್ ನರೇಶ್ ರೆಡ್ಡಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಪೈಲ್ (ಭೂಮಿಯಡಿಯ ಪಿಲ್ಲರ್) ನಿರ್ಮಿಸಿ, ಅದರ ಮೇಲೆ ಪೈಲ್ ಕ್ಯಾಪ್ ಮಾಡಿ, ಅದರ ಮೇಲೆ ಅಪಘಾತ ತಡೆಯುವ ಕ್ರ್ಯಾಶ್ ಬ್ಯಾರಿಯರ್ ಅಳವಡಿಸಲಾಗುತ್ತದೆ. ಅಲ್ಲಿಂದ ಮೇಲೆ ಆರ್‌ಸಿಸಿ ಪಿಲ್ಲರ್ ನಿರ್ಮಾಣಗೊಳ್ಳುತ್ತದೆ. ಇದಿಷ್ಟು ಆಯಾ ಸ್ಥಳದಲ್ಲೇ ನಡೆಯವ ಕಾರ್ಯಗಳು. ಪಿಯರ್ ಕ್ಯಾಪ್, ‘ಯು’ ಗರ್ಡರ್, ‘ಐ’ ಗರ್ಡರ್‌ಗಳನ್ನು ಗೊಲ್ಲಹಳ್ಳಿಯಲ್ಲಿ ತಯಾರಿಸಲಾಗುತ್ತದೆ. ಅವುಗಳನ್ನು ಅಲ್ಲಿಂದ ತಂದು ಅಳವಡಿಸಲಾಗುತ್ತದೆ ಎಂದು ಕೆ–ರೈಡ್ ಕಾರಿಡಾರ್‌–2 ನಿರ್ವಹಣಾಧಿಕಾರಿ ಮಾಹಿತಿ ನೀಡಿದರು.

1.5 ಕಿ.ಮೀ.ನಿಂದ 2.5 ಕಿ.ಮೀ ಅಂತರದ ಒಳಗೆ ಒಂದರಂತೆ ಒಟ್ಟು 12 ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ, ಮತ್ತಿಕೆರೆ, ಯಶವಂತಪುರ, ಶೆಟ್ಟಿಹಳ್ಳಿ, ಮೈದರಹಳ್ಳಿ, ಚಿಕ್ಕಬಾಣಾವರದಲ್ಲಿ ನಿಲ್ದಾಣಗಳಿರಲಿವೆ. ಅವುಗಳಲ್ಲಿ ಎತ್ತರಿಸಿದ ಎರಡು ನಿಲ್ದಾಣಗಳು, ಎತ್ತರಿಸಿದ ಇಂಟರ್ ಚೇಂಜ್ ಎರಡು ನಿಲ್ದಾಣಗಳು ಸೇರಿವೆ ಎಂದು ಕೆ–ರೈಡ್ ಅಧಿಕಾರಿಗಳು ವಿವರಿಸಿದರು.

ಶೇ 30ರಷ್ಟು ಮಾತ್ರ ಎತ್ತರಿಸಿದ ಮಾರ್ಗ



ಬೆಂಗಳೂರು ಉಪನಗರ ರೈಲು ಯೋಜನೆಯಲ್ಲಿ ಶೇ 70ರಷ್ಟು ಟ್ರ್ಯಾಕ್ ಭೂಮಟ್ಟದಲ್ಲಿ ಹಾಗೂ ಶೇ 30ರಷ್ಟು ಟ್ರ್ಯಾಕ್ ಮಾತ್ರ ಎತ್ತರಿಸಿದ ಮಾರ್ಗವಾಗಿರುತ್ತದೆ. ಈಗಾಗಲೇ ಕಾರಿಡಾರ್‌–2ನಲ್ಲಿ ಭೂಮಟ್ಟದ ಕಾಮಗಾರಿ ಪ್ರಗತಿಯಲ್ಲಿದ್ದು, ಇದೀಗ ಹೆಬ್ಬಾಳದಿಂದ ಎತ್ತರಿಸಿದ (ಎಲಿವೇಟೆಡ್) ಮಾರ್ಗ ನಿರ್ಮಾಣ ಆರಂಭಗೊಂಡಿದೆ.

ರೈಲ್ವೆಯ ಹೊಸ ಉಪನಗರ ರೈಲು ನೀತಿಯಡಿ ಮೊದಲ ಯೋಜನೆ ಇದಾಗಿದ್ದು, ಕಾಮಗಾರಿ ಪೂರ್ಣಗೊಂಡಾಗ ಪ್ರತಿ 5ರಿಂದ 7 ನಿಮಿಷಕ್ಕೊಂದು ರೈಲು ಸಂಚರಿಸಲಿದೆ. ಇದು ರಸ್ತೆ ಮೇಲಿನ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಲಿದೆ. ಜೊತೆಗೆ ಬೆಂಗಳೂರು ನಗರದೊಂದಿಗೆ ಉಪನಗರಗಳನ್ನು ಸಂಪರ್ಕಿಸಲಿದೆ.

ಗೌರವ್ ಗುಪ್ತ, ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ

3 ತಿಂಗಳಿಗೆ ಶೇ 4ರಷ್ಟಾದರೂ ಕಾಮಗಾರಿ ಪೂರ್ಣಗೊಳಿಸಿ



2018ರಲ್ಲಿ ಘೋಷಣೆಯಾಗಿ, 2020ರಲ್ಲಿ ಮಂಜೂರಾಗಿದ್ದರೂ ಕೋವಿಡ್ ಇನ್ನಿತರ ಕಾರಣದಿಂದ ಎರಡು ವರ್ಷ ಕಾಮಗಾರಿ ಆರಂಭವಾಗಿರಲಿಲ್ಲ. 2022ರ ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ ಮೇಲೆ ಡಿಸೆಂಬರ್‌ನಲ್ಲಿ ಕಾಮಗಾರಿ ಆರಂಭವಾಯಿತು. 12 ತಿಂಗಳಲ್ಲಿ ಶೇ 12ರಷ್ಟು ಕಾಮಗಾರಿ ಪೂರ್ಣಗೊಂಡಿದೆ.
ಈಗ ಸ್ವಲ್ಪ ವೇಗ ಪಡೆದುಕೊಂಡಿದೆ. ತಿಂಗಳಿಗೆ ಶೇ 4 ರಿಂದ 5ರಷ್ಟು ಪ್ರಮಾಣದಲ್ಲಿ ಕಾಮಗಾರಿ ಪೂರ್ಣಗೊಳಿಸಿದರಷ್ಟೇ ಎರಡು ವರ್ಷಗಳ ಒಳಗೆ ರೈಲು ಸಂಚರಿಸಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಇದಕ್ಕೆ ಜವಾಬ್ದಾರಿ ಆಗಿರುವುದರಿಂದ ಸಂಸದರು, ಶಾಸಕರು ಮುತುವರ್ಜಿ ವಹಿಸಬೇಕು.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ

ಸುದ್ದಿ 2 ನಿಮಿಷ

ಯುವತಿಯ ಹಿಂಬಾಲಿಸಿ ಬಂದು ಲೈಂಗಿಕ ದೌರ್ಜನ್ಯ: ಪ್ರಕರಣ ದಾಖಲು

ಬೆಂಗಳೂರು: ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಯುವತಿಯನ್ನು ಹಿಂಬಾಲಿಸಿ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಈ ಸಂಬಂಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸೌತ್ ಎಂಡ್ ವೃತ್ತದಲ್ಲಿ ನಡೆದಿರುವ ಘಟನೆ ಸಂಬಂಧ ಯುವತಿ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಕನಕಪುರ ಮುಖ್ಯರಸ್ತೆಯ ನಿವಾಸಿಯಾದ ಯುವತಿ, ಕೂಡ್ಲು ಗೇಟ್ ಬಳಿಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ನ. 6ರಂದು ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿದ್ದ ಯುವತಿ, ತಮ್ಮ ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟಿದ್ದರು.’

‘ಮಾರ್ಗಮಧ್ಯೆ ಯುವತಿಯನ್ನು ನೋಡಿದ್ದ ಆರೋಪಿ, ತನ್ನ ಬೈಕ್‌ನಲ್ಲಿ ಹಿಂಬಾಲಿಸಲಾರಂಭಿಸಿದ್ದ. ಯುವತಿ ಸೌಂತ್ ಎಂಡ್ ವೃತ್ತಕ್ಕೆ ಬಂದಿದ್ದರು. ದಕ್ಷಿಣ ವಿಭಾಗದ ಡಿಸಿಪಿ ಕಚೇರಿ ಎದುರಿನ ರಸ್ತೆಯಲ್ಲಿ ಯುವತಿ ದ್ವಿಚಕ್ರ ವಾಹನವನ್ನು ಆರೋಪಿ ಅಡ್ಡಗಟ್ಟಿದ್ದ. ಯುವತಿ ಕೈ ಹಿಡಿದು ಎಳೆದಾಡಿದ್ದ. ಬಟ್ಟೆಯನ್ನೂ ಎಳೆಯಲು ಯತ್ನಿಸಿದ್ದ. ಜೊತೆಗೆ, ಯುವತಿಯನ್ನು ಅಶ್ಲೀಲವಾಗಿ ನಿಂದಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಯುವತಿ ರಕ್ಷಣೆಗಾಗಿ ಕೂಗಾಡಿದ್ದರು. ಆಗಲೇ ಆರೋಪಿ, ಸ್ಥಳದಿಂದ ಪರಾರಿಯಾಗಿದ್ದಾನೆ. ಆತ ಯಾರು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ತಿಳಿಸಿವೆ.

ಹೊರಗಿನಿಂದ ಬಂದವರೂ ಕನ್ನಡ ಮಾತನಾಡಲಿ: ಬೈರತಿ ಬಸವರಾಜ



ಕೆ.ಆರ್.ಪುರ: ದೇಶ– ವಿದೇಶಗಳಿಂದ ರಾಜ್ಯಕ್ಕೆ ಬರುವವರು ಇಲ್ಲಿ ನೆಮ್ಮದಿಯಾಗಿ ವಾಸಿಸುವ ಉತ್ತಮ ವ್ಯವಸ್ಥೆ ಇದೆ. ಅವರೆಲ್ಲ ಕನ್ನಡವನ್ನು ಕಲಿಯಬೇಕು. ಕರ್ನಾಟಕದ ಸವಲತ್ತುಗಳನ್ನು ಬಳಸಿಕೊಳ್ಳುವವರು ಕನ್ನಡದ ಋಣ ತೀರಿಸಬೇಕು ಎಂದು ಶಾಸಕ ಬೈರತಿ ಬಸವರಾಜ ತಿಳಿಸಿದರು.

ಕೆ.ಆರ್. ಪುರ ಸಮೀಪದ ಬಾಬುಸಪಾಳ್ಯದಲ್ಲಿ ನಡೆದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಆಟೊ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು. ಸಾರ್ವಜನಿಕರಿಗೆ ಅನ್ನದಾನ ಏರ್ಪಡಿಸಲಾಗಿತ್ತು. ಕನ್ನಡ ನಾಡಿನ ಸಾಧಕರ ಭಾವಚಿತ್ರಗಳನ್ನು ಆಟೊದಲ್ಲಿಟ್ಟು ಬಾಬುಸಪಾಳ್ಯ, ಹೊರಮಾವು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮುಖಂಡರಾದ ಗಣೇಶ್, ಮಂಜುನಾಥ್, ಮುನಿರಾಜು, ಮುನಿಸ್ವಾಮಿ, ಜೋಸೆಫ್ ರಾಜ್, ಕೇಶವ, ಕೃಷ್ಣ ಇದ್ದರು.




ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಫೌಜಿಯ ಸಲೀಂ ಅವರಿಗೆ ‘ಶಾ.ಬಾಲುರಾವ್ಯವ ಬರಹಗಾರ ಪ್ರಶಸ್ತಿ’ ಹಾಗೂ ಎಸ್‌. ಗಂಗಾಧರಯ್ಯ ಅವರಿಗೆ ‘ಶಾ. ಬಾಲುರಾವ್ ಅನುವಾದ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕಾರ್ಯಕಾರಿ ಸಮಿತಿ ಸದಸ್ಯ ರವೀಂದ್ರನಾಥ್, ಗೌರವ ಕಾರ್ಯದರ್ಶಿ ಶಾಂತರಾಜು, ಗೌರವಾಧ್ಯಕ್ಷ ಪಿ.ವಿ. ನಾರಾಯಣ ಮತ್ತು ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಇದ್ದಾರೆ. ಪ್ರಶಸ್ತಿ ತಲಾ ₹25 ಸಾವಿರ ನಗದು ಒಳಗೊಂಡಿದೆ ಪ್ರಜಾವಾಣಿ ಚಿತ್ರ

ಲಂಚ: ಬೆಸ್ಕಾಂ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಪರ್ಕದ ಮೀಟರ್ ಸಂಖ್ಯೆಯಲ್ಲಿ ಗ್ರಾಹಕರ ಹೆಸರು ಬದಲಾವಣೆ ಮಾಡಲು ₹ 40 ಸಾವಿರ ಲಂಚ ಪಡೆಯುತ್ತಿದ್ದ ಬೆಸ್ಕಾಂನ ನಾಗವಾರ ಉಪ ವಿಭಾಗದ (ಇ–9) ಕಚೇರಿಯ ಸಹಾಯಕ ಲೆಕ್ಕಾಧಿಕಾರಿ ನವೀನ್ ಕುಮಾರ್ ಎಚ್‌.ಪಿ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.



ನವೀನ್ ಕುಮಾರ್

ವಿದ್ಯುತ್ ಸಂಪರ್ಕವೊಂದರ ಗ್ರಾಹಕರ ಹೆಸರು ಬದಲಾವಣೆಗೆ ಪಿ.ಆರ್. ದೀಪಕ್ ಎಂಬುವವರು ಬೆಸ್ಕಾಂನ ನಾಗವಾರ ಉಪ ವಿಭಾಗ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಪ್ರಕ್ರಿಯೆ ಪೂರ್ಣಗೊಳಿಸಲು ಸಹಾಯಕ ಲೆಕ್ಕಾಧಿಕಾರಿ ₹ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅಂತಿಮವಾಗಿ ₹ 40 ಸಾವಿರ ಕೊಟ್ಟರೆ ಹೆಸರು ಬದಲಾವಣೆ ಮಾಡುವುದಾಗಿ ಒಪ್ಪಿಕೊಂಡಿದ್ದರು.

ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಅರ್ಜಿದಾರರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಆರೋಪಿಯ ಸೂಚನೆಯಂತೆ ದೀಪಕ್ ಅವರು ನಾಗವಾರ ಕಚೇರಿಯಲ್ಲಿ ಸೋಮವಾರ ಭೇಟಿಮಾಡಿ ಹಣ ತಲುಪಿಸಿದರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು. ಲೋಕಾಯುಕ್ತ ಪೊಲೀಸ್ ಘಟಕದ ಎಸ್‌ಪಿ–2 ಕೆ. ವಂಶಿಕೃಷ್ಣ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಕುಮಾರಸ್ವಾಮಿ, ಬಾಲಾಜಿ ಬಾಬು, ಶಂಕರಪ್ಪ ಈ ಕಾರ್ಯಾಚರಣೆ ನಡೆಸಿದ್ದರು.

ಬ್ಲೇಡ್‌ನಿಂದ ಕತ್ತು ಕೊಯ್ದು ಮೃತದೇಹ ಸುಟ್ಟಿದ್ದ ಸ್ನೇಹಿತ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸುಧಾರಣ್ (28) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಸ್ನೇಹಿತ ವಿಜಯ ಕುಮಾರ್‌ನನ್ನು (33) ಬಂಧಿಸಿದ್ದಾರೆ.

‘ಕೆ.ಆರ್. ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಸುಧಾರಣ್ ಅವರ ಮೃತದೇಹ ಅರ್ಧ ಸುಟ್ಟ ಸ್ಥಿತಿಯಲ್ಲಿ ಗೋಣಿ ಚೀಲದಲ್ಲಿ ಪತ್ತೆಯಾಗಿತ್ತು. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ಸ್ನೇಹಿತ ವಿಜಯ್‌ಕುಮಾರನೇ ಆರೋಪಿ ಎಂಬುದು ಗೊತ್ತಾಗಿದೆ.

ಹಣದ ವಿಚಾರಕ್ಕೆ ಗಲಾಟೆ: ‘ಸುಧಾರಣ್ ಹಾಗೂ ವಿಜಯ್‌ಕುಮಾರ್, ಕೆ.ಆರ್. ಮಾರುಕಟ್ಟೆಯ ತರಕಾರಿ ಮಂಡಿಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಜೊತೆಗೆ, ನಿತ್ಯವೂ ರಾತ್ರಿ ಒಟ್ಟಿಗೆ ಪಾರ್ಟಿ ಮಾಡುತ್ತಿದ್ದರು. ನ. 11ರಂದು ಇಬ್ಬರೂ ಒಟ್ಟಿಗೆ ಸೇರಿದ್ದರು. ‘ನನಗೆ ಹಣ ಬೇಕು’ ಎಂದು ಆರೋಪಿ ವಿಜಯ್ ಕುಮಾರ್, ಒತ್ತಾಯದಿಂದ ಸುಧಾರಣ್ ಜೇಬಿನಿಂದ ಹಣ ತೆಗೆದುಕೊಂಡಿದ್ದ. ಅದೇ ಹಣದ ವಿಚಾರವಾಗಿ ಇಬ್ಬರ ನಡುವೆ ಜಗಳ ಶುರುವಾಗಿ, ವಿಕೋಪಕ್ಕೆ ಹೋಗಿತ್ತು’ ಎಂದು ಮೂಲಗಳು ಹೇಳಿವೆ.



ವಿಜಯ್ ಕುಮಾರ್

ಬ್ಲೇಡ್‌ನಿಂದ ಕತ್ತು ಕೊಯ್ದಿದ್ದ: ‘ಸುಧಾರಣ್ ಮೇಲೆ ಹಲ್ಲೆ ಮಾಡಿದ್ದ ವಿಜಯ್‌ಕುಮಾರ್, ಬ್ಲೇಡ್‌ನಿಂದ ಕತ್ತು ಕೊಯ್ದಿದ್ದ. ತೀವ್ರ ರಕ್ತಸ್ರಾವದಿಂದ ಸುಧಾರಣ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮೃತದೇಹವನ್ನು ಗೋಣಿ ಚೀಲದಲ್ಲಿ ತುಂಬಿದ್ದ ಆರೋಪಿ, ಕೆ.ಆರ್. ಮಾರುಕಟ್ಟೆಯ ಎರಡು ಅಂತಸ್ತಿನ ಕಟ್ಟಡವೊಂದರ ಚಾವಣಿಯಲ್ಲಿ ಇರಿಸಿದ್ದ. ನಂತರ, ಗೋಣಿ ಚೀಲಕ್ಕೆ ಬೆಂಕಿ ಹಚ್ಚಿ ಸ್ಥಳದಿಂದ ಪರಾರಿಯಾಗಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಕಿ ಕಂಡು ಆತಂಕಗೊಂಡಿದ್ದ ವ್ಯಾಪಾರಿ: ‘ಚೀಲಕ್ಕೆ ಹೊತ್ತಿಕೊಂಡಿದ್ದ ಬೆಂಕಿ, ಜೋರಾಗಿ ಉರಿಯುತ್ತಿತ್ತು. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡಿರಬಹುದೆಂದು ಆತಂಕಗೊಂಡಿದ್ದ ವ್ಯಾಪಾರಿಯೊಬ್ಬರು, ಎಲೆಕ್ಟ್ರಿಷಿಯನ್ ಅವರನ್ನು ಸ್ಥಳಕ್ಕೆ ಕರೆಸಿ ಪರಿಶೀಲಿಸಲು ಹೇಳಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಎಲೆಕ್ಟ್ರಿಷಿಯನ್ ಚಾವಣಿಗೆ ಹೋಗಿದ್ದಾಗ, ಚೀಲದಲ್ಲಿ ಮೃತದೇಹ ಕಂಡಿತ್ತು. ಅದೇ ವಿಷಯವನ್ನು ವ್ಯಾಪಾರಿ, ಠಾಣೆಗೆ ತಿಳಿಸಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ಕತ್ತಿನ ಭಾಗದಲ್ಲಿ ಕೊಯ್ದ ಗಾಯವಿತ್ತು. ಇದೊಂದು ಕೊಲೆ ಎಂಬುದಾಗಿ ತೀರ್ಮಾನಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆ ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ವಿಜಯ್ ಕುಮಾರ್ ಸಿಕ್ಕಿಬಿದ್ದ ಎನ್ನಲಾಗಿದೆ.

ಅರೆಕಾಲಿಕ ಕೆಲಸದ ಆಮಿಷ: ₹ 23.23 ಲಕ್ಷ ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಅರೆಕಾಲಿಕ ಕೆಲಸದಿಂದ ಹೆಚ್ಚು ಹಣ ಗಳಿಸಬಹುದೆಂದು ಆಮಿಷವೊಡ್ಡಿ ನಗರದ ಮಹಿಳಾ ಸಾಫ್ಟ್‌ವೇರ್ ಎಂಜಿನಿಯರೊಬ್ಬರಿಂದ ₹ 23.23 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ವೈಟ್‌ಫೀಲ್ಡ್ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘28 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಾಟ್ಸ್‌ಆ್ಯಪ್ ಮೂಲಕ ಮಹಿಳೆಗೆ ಕರೆ ಮಾಡಿದ್ದ ಆರೋಪಿ, ‘ನಮ್ಮಲ್ಲಿ ಅರೆಕಾಲಿಕ ಕೆಲಸವಿದೆ. ಹೋಟೆಲ್‌ಗಳ ಬಗ್ಗೆ ಅನಿಸಿಕೆ(ರಿವ್ಯೂ) ಬರೆದರೆ, ಮನೆಯಿಂದ ಹಣ ಸಂಪಾದಿಸಬಹುದು’ ಎಂದಿದ್ದ. ಅದನ್ನು ನಂಬಿದ್ದ ಮಹಿಳೆ, ಕೆಲಸಕ್ಕೆ ಒಪ್ಪಿದ್ದರು. ಆರಂಭದಲ್ಲಿ ಹೋಟೆಲ್ ಬಗ್ಗೆ ಅನಿಸಿಕೆ ಬರೆದಿದ್ದರು. ಅದಕ್ಕೆ ಪ್ರತಿಯಾಗಿ ಆರೋಪಿ, ₹ 200 ಸಂದಾಯ ಮಾಡಿದ್ದ.’ ‘ಮತ್ತಷ್ಟು ಹೋಟೆಲ್‌ಗಳ ಅನಿಸಿಕೆ ಬರೆಯಲು ನೋಂದಣಿ ಮಾಡಿಕೊಳ್ಳಬೇಕು. ಇದಕ್ಕಾಗಿ ಶುಲ್ಕ ಪಾವತಿಸಬೇಕೆಂದು ಆರೋಪಿ ಹೇಳಿದ್ದ. ಅದನ್ನೂ ಮಹಿಳೆ ನಂಬಿದ್ದರು. ನಂತರ, ಆರೋಪಿ ಹಂತ ಹಂತವಾಗಿ ₹ 23.23 ಲಕ್ಷವನ್ನು ಖಾತೆಗೆ ಹಾಕಿಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಾರ್ನ್ ಮಾಡಿದ್ದಕ್ಕೆ ವಿದ್ಯಾರ್ಥಿ ಮೇಲೆ ಹಲ್ಲೆ: ಇಬ್ಬರು ಬಂಧನ

ಬೆಂಗಳೂರು: ರಸ್ತೆಯಲ್ಲಿ ಅಡ್ಡವಾಗಿ ನಿಂತಿದ್ದವರನ್ನು ಪಕ್ಕಕ್ಕೆ ಸರಿಸಲು ಹಾರ್ನ್ ಮಾಡಿದ್ದಕ್ಕೆ ಬಿ.ಕಾಂ ವಿದ್ಯಾರ್ಥಿ ಎಸ್‌. ಪ್ರಜ್ವಲ್ ಮೇಲೆ ಹಲ್ಲೆ ಮಾಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಭೂಪಸಂದ್ರ ನಿವಾಸಿಗಳಾದ ಅಸಾದುಲ್ಲಾ ಖಾನ್ ಮತ್ತು ಸೈಬುಲ್ಲಾ ಖಾನ್ ಬಂಧಿತರು. ಘಟನೆ ಸಂಬಂಧ ಪ್ರಜ್ವಲ್ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಉತ್ತರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಂಜಯನಗರದ ಎಂಎಲ್‌ಎ ಬಡಾವಣೆ ನಿವಾಸಿ ಪ್ರಜ್ವಲ್, ಬಿ.ಕಾಂ ವಿದ್ಯಾರ್ಥಿ. ಸೆಮಿಸ್ಟರ್ ಪರೀಕ್ಷೆ ಬರೆಯಲು ಶುಕ್ರವಾರ (ನ. 10) ಬೆಳಿಗ್ಗೆ ಕಾರಿನಲ್ಲಿ ಕಾಲೇಜಿನತ್ತ ಹೊರಟಿದ್ದರು. ಕಲ್ಪನಾ ಚಾವ್ಲಾ ರಸ್ತೆಗೆ ಹೊಂದಿಕೊಂಡಿರುವ ಭೂಪಸಂದ್ರ ಮುಖ್ಯ ರಸ್ತೆಯಲ್ಲಿ ಕಾರು ತೆರಳುತ್ತಿತ್ತು. ರಸ್ತೆಯಲ್ಲಿ ಬೈಕ್ ಅಡ್ಡ ನಿಲ್ಲಿಸಿದ್ದ ಆರೋಪಿಗಳು, ಸಿಗರೇಟ್ ಸೇದುತ್ತ ನಿಂತಿದ್ದರು.’

‘ದಾರಿ ಬಿಡುವಂತೆ ಪ್ರಜ್ವಲ್ ಹಾರ್ನ್ ಮಾಡಿದ್ದರು. ‘ಸಿಗರೇಟ್ ಸೇದುವವರೆಗೂ ದಾರಿ ಬಿಡುವುದಿಲ್ಲ’ ಎಂದು ಆರೋಪಿಗಳು ಹೇಳಿದ್ದರು. ಪರೀಕ್ಷೆಗೆ ತಡವಾಗುತ್ತಿದ್ದರಿಂದ ಪ್ರಜ್ವಲ್, ಪುನಃ ಹಾರ್ನ್ ಮಾಡಲಾರಂಭಿಸಿದ್ದರು. ಕಾರಿನ ಬಳಿ ಹೋಗಿದ್ದ ಆರೋಪಿಗಳು, ಗಾಜು ಒಡೆದಿದ್ದರು. ಅದನ್ನು ಪ್ರಶ್ನಿಸಿದ್ದ ಪ್ರಜ್ವಲ್ ಅವರ ಮುಖಕ್ಕೆ ಗುದ್ದಿ ಹಲ್ಲೆ ಮಾಡಿದ್ದರು’ ಎಂದು ಅಧಿಕಾರಿ ತಿಳಿಸಿದರು.

‘ಗಾಯಗೊಂಡಿದ್ದ ಪ್ರಜ್ವಲ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿಗಳು ಪರಾರಿಯಾಗಿದ್ದರು. ತನಿಖೆ ಕೈಗೊಂಡು ಇಬ್ಬರನ್ನು ಬಂಧಿಸಲಾಗಿದೆ. ಕೆಲವರು ತಲೆಮರೆಸಿಕೊಂಡಿದ್ದಾರೆ’ ಎಂದರು.

ಮೀಟರ್ ಬಡ್ಡಿ: ಲೇವಾದೇವಿದಾರರ ಕಚೇರಿಗಳ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಮೀಟರ್ ಬಡ್ಡಿ ದಂಧೆ ನಡೆಸುತ್ತಿದ್ದ ನಗರದ ನಾಲ್ವರು ಲೇವಾದೇವಿದಾರರ ಕಚೇರಿ ಹಾಗೂ ಮನೆಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ನಗದು ಸೇರಿದಂತೆ ₹ 42.42 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಬೆಂಗಳೂರು ನಗರ ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಲೇವಾದೇವಿ ನಿಬಂಧಕ ಅಧಿಕಾರಿಗಳ ನೇತೃತ್ವದಲ್ಲಿ ಸಿಸಿಬಿ ಪೊಲೀಸರು ಈ ದಾಳಿ ನಡೆಸಿದ್ದರು.

‘ಬಸವನಗುಡಿ, ಚಾಮರಾಜಪೇಟೆ, ಕಾಮಾಕ್ಷಿಪಾಳ್ಯ ಹಾಗೂ ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಮೀಟರ್ ಬಡ್ಡಿ ದಂಧೆ ನಡೆಯುತ್ತಿತ್ತು ಎಂಬುದಕ್ಕೆ ಸಾಕಷ್ಟು ಪುರಾವೆಗಳು ಸಿಕ್ಕವು’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ಅನಧಿಕೃತವಾಗಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ರೌಡಿಯೊಬ್ಬ ಪರಾರಿಯಾಗಿದ್ದಾನೆ. ಉಳಿದಂತೆ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

‘₹ 23.42 ಲಕ್ಷ ನಗದು, ₹ 7 ಲಕ್ಷ ಮೌಲ್ಯದ ಚಿನ್ನಾಭರಣ, ₹ 9 ಲಕ್ಷ ಮೌಲ್ಯದ ಬೆಳ್ಳಿ ಸಾಮಗ್ರಿ, ₹ 3 ಲಕ್ಷ ಮೌಲ್ಯದ 6 ರೊಲೆಕ್ಸ್ ವಾಚ್‌ಗಳು, 109 ಬ್ಯಾಂಕ್ ಚೆಕ್‌ಗಳು, 42 ಖಾಲಿ ಛಾಪಾ ಕಾಗದ, 85 ಸೇಲ್ ಡೀಡ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಆಸ್ತಿ ವಿವರ ಸಂಗ್ರಹ: ‘ರೌಡಿಗಳು, ಅಪರಾಧ ಹಿನ್ನೆಲೆಯುಳ್ಳವರು ಹಾಗೂ ಪ್ರಭಾವಿಗಳು, ಮೀಟರ್ ಬಡ್ಡಿ ದಂಧೆಯಲ್ಲಿ ತೊಡಗಿದ್ದರು. ಸಾರ್ವಜನಿಕರಿಗೆ ಸಾಲ ನೀಡಿ ಅಧಿಕ ಬಡ್ಡಿ ವಸೂಲಿ ಮಾಡುತ್ತಿದ್ದರು. ಬಡ್ಡಿ ನೀಡದಿದ್ದರೆ, ಚಿತ್ರಹಿಂಸೆ ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಮೀಟರ್ ಬಡ್ಡಿ ದಂಧೆಯಲ್ಲಿ ತೊಡಗಿದ್ದವರ ಆಸ್ತಿ ವಿವರ ಸಂಗ್ರಹಿಸಲಾಗುತ್ತಿದೆ. ಜೊತೆಗೆ, ನೊಂದವರಿಂದ ದೂರು ಪಡೆಯಲಾಗುತ್ತಿದೆ’ ಎಂದು ಹೇಳಿದರು.

‘ಅಲ್ಕಾನ್ ಸಂಸ್ಥೆ’ ವರದಿ ಮರು ಪರಿಶೀಲನೆಯಲ್ಲಿ ಬಿಡಿಎ ವಿಳಂಬ

ಪೂರ್ಣವಾಗದ ತನಿಖೆ: ಅಭಿವೃದ್ಧಿಗೆ ತೊಡಕು

• ಆದಿತ್ಯ ಕೆ.ಎ.

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಕೆಲಸ ಆರಂಭವಾಗಿ ದಶಕ ಕಳೆದಿದ್ದರೂ ಇದು ಸುಸಜ್ಜಿತ ಬಡಾವಣೆಯಾಗಿ ರೂಪುಗೊಂಡಿಲ್ಲ. ಬಡಾವಣೆಯಲ್ಲಿ ನಡೆದಿರುವ ಟೆಂಡರ್‌ಗಳು, ಕಾಮಗಾರಿ ಹಾಗೂ ಗುತ್ತಿಗೆದಾರರಿಗೆ ಹಣ ಪಾವತಿ ಕುರಿತು ಲೆಕ್ಕಪರಿಶೋಧನೆಗೆ ಆದೇಶಿಸಿ ಎರಡೂವರೆ ವರ್ಷ ಕಳೆದಿದ್ದರೂ ಪೂರ್ಣಗೊಂಡಿಲ್ಲ. ಇದು ಅಭಿವೃದ್ಧಿಗೆ ತೊಡಕಾಗಿ ಪರಿಣಮಿಸಿದೆ.

ಕಾಮಗಾರಿಯಲ್ಲಿ ಲೋಪದೋಷಗಳು ಕಂಡುಬಂದ ಕಾರಣಕ್ಕೆ 2021ರ ಫೆಬ್ರುವರಿ 3ರಂದು ಅಂದಿನ ಬಿಡಿಎ ಅಧ್ಯಕ್ಷರು ತನಿಖೆಗೆ ಆದೇಶಿಸಿದ್ದರು.

2014–15ರ ಅವಧಿಯಲ್ಲಿ ನಡೆದಿರುವ ಸಿವಿಲ್ ಕಾಮಗಾರಿಗಳು ಹಾಗೂ 2018–19ರ ನಡುವೆ ನಡೆದಿರುವ ಮೂಲಸೌಕರ್ಯ ಕಾಮಗಾರಿಯ ಲೆಕ್ಕಪರಿಶೋಧನೆ ನಡೆಸಲು ಸೂಚಿಸಲಾಗಿತ್ತು. ಒಂದೇ ತಿಂಗಳಲ್ಲಿ ಕಾಮಗಾರಿ, ದಾಖಲೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಏಜೆನ್ಸಿಗೆ ನಿರ್ದೇಶನ ನೀಡಲಾಗಿತ್ತು. ಆದರೆ, ಇಲ್ಲಿವರೆಗೂ ಲೆಕ್ಕಪರಿಶೋಧನೆ ಪೂರ್ಣಗೊಂಡಿಲ್ಲ ಎಂದು ಮೂಲಗಳು ಹೇಳಿವೆ.

‘ಅಲ್ಕಾನ್ ಸಂಸ್ಥೆಯ ಲೆಕ್ಕಪರಿಶೋಧನಾ ವರದಿ ಮರು ಪರಿಶೀಲನೆಯಲ್ಲಿದೆ. ಪ್ರಾಧಿಕಾರ ವರದಿ ಸ್ವೀಕರಿಸಿ ಅನುಮೋದನೆಗೊಂಡ ನಂತರವಷ್ಟೇ ಮಾಹಿತಿ ನೀಡಲು ಸಾಧ್ಯ’ ಎಂದು ಬಿಡಿಎ (ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗ) ಎಂಜಿನಿಯರ್‌ಗಳು ನಿವೇಶನದಾರರಿಗೆ ಮಾಹಿತಿ ನೀಡುತ್ತಿದ್ದಾರೆ. ಮರು ಪರಿಶೀಲನೆಯಲ್ಲಿ ಬಿಡಿಎ ವಿಳಂಬ ಮಾಡುತ್ತಿದ್ದು ನಿವೇಶನದಾರರಿಗೆ ತೊಂದರೆಯಾಗಿದೆ ಎಂಬ ಆರೋಪ ಕೇಳಿಬಂದಿದೆ.

ತನಿಖೆ ಪೂರ್ಣಗೊಳ್ಳದ ಕಾರಣಕ್ಕೆ ಗುತ್ತಿಗೆದಾರರು ಕಾಮಗಾರಿ ಮುಂದುವರಿಸಲು ಆಸಕ್ತಿ ತೋರುತ್ತಿಲ್ಲ. ನೆಪಮಾತ್ರಕ್ಕೆ ಇಬ್ಬರು ಕಾರ್ಮಿಕರಿಂದ ಕಾಮಗಾರಿ ನಡೆಸಲಾಗುತ್ತಿದೆ. ಲೆಕ್ಕಪರಿಶೋಧನೆ ವೇಳೆ ಲೋಪ ಕಂಡುಬಂದರೆ ತಮಗೆ ಸಮಸ್ಯೆಯಾಗಲಿದೆ ಎಂದು ಭಾವಿಸಿ ಗುತ್ತಿಗೆ ಕಂಪನಿಗಳು ವಿಳಂಬ ಮಾಡುತ್ತಿವೆ. ಜತೆಗೆ, ಕಾಮಗಾರಿ ಗಡುವು ವಿಸ್ತರಣೆ ಆಗುತ್ತಲೇ ಇದೆ ಎಂದು ಬಡಾವಣೆ ಮುಕ್ತ ವೇದಿಕೆ ಪದಾಧಿಕಾರಿಗಳು ದೂರಿದ್ದಾರೆ.

₹2,600 ಕೋಟಿ ವೆಚ್ಚದಲ್ಲಿ ಅಂದಾಜು 4,400 ಎಕರೆ ಪ್ರದೇಶದಲ್ಲಿ ಬಡಾವಣೆ ಅಭಿವೃದ್ಧಿ ಪಡಿಸಲು ಬಿಡಿಎ ನಿರ್ಧರಿಸಿತ್ತು. ಎರಡು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿತ್ತು. ಆದರೆ, 2020ರಲ್ಲಿ ಗುತ್ತಿಗೆ ಪಡೆದ ಕಂಪನಿಗಳು ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸಲು ಹೆಚ್ಚುವರಿಯಾಗಿ ₹650 ಕೋಟಿ ಅಗತ್ಯವಿದೆ ಎಂದು ಬಿಡಿಎಗೆ ಬೇಡಿಕೆ ಸಲ್ಲಿಸಿದ್ದವು. ಪೂರ್ಣಗೊಂಡಿರುವ ಕಾಮಗಾರಿಗೆ ಹೆಚ್ಚುವರಿ ಹಣ ಅಗತ್ಯವಿದೆ ಎಂದು ಬಿಡಿಎ ನಡೆಸಿದ್ದ ಆಂತರಿಕ ಲೆಕ್ಕಪರಿಶೋಧನಾ ವರದಿ ಹೇಳಿತ್ತು.

ಆಂತರಿಕ ತನಿಖಾ ವರದಿ ಬಗ್ಗೆ ತೃಪ್ತರಾಗದ ಹಿಂದಿನ ಅಧ್ಯಕ್ಷರು, ಮೂರನೇ ವ್ಯಕ್ತಿಯಿಂದ ತನಿಖೆಗೆ ಆದೇಶಿಸಿದ್ದರು. 2021ರಲ್ಲಿ ‘ಬ್ಯೂರೊ ವೆರಿಟಾಸ್’ ಎಂಬ ಏಜೆನ್ಸಿಗೆ ಲೆಕ್ಕಪರಿಶೋಧನಾ ಹೊಣೆ ನೀಡಲಾಗಿತ್ತು. ಒಳಚರಂಡಿ ಕಾಮಗಾರಿ ಗುಣಮಟ್ಟ, ವಿದ್ಯುತ್– ಕುಡಿಯುವ ನೀರು ಕಲ್ಪಿಸುವ ಕಾಮಗಾರಿಗೆ ಬಳಸಿದ ಸಾಮಗ್ರಿಗಳ ಗುಣಮಟ್ಟ ಪರಿಶೀಲಿಸುವಂತೆ ಷರತ್ತು ವಿಧಿಸಲಾಗಿತ್ತು. ‘ಬ್ಯೂರೊ ವೆರಿಟಾಸ್’ ಹಾಗೂ ಬಿಡಿಎ ನಡುವೆ ಹಣಕಾಸಿನ ‘ಸಂಘರ್ಷ’ವಾಗಿ ಪರಿಶೀಲನಾ ಕಾರ್ಯ ಸ್ಥಗಿತಗೊಂಡಿತ್ತು. ಕೆಲವು ಭಾಗದ ಕಾಮಗಾರಿ ವರದಿ ಸಿದ್ಧವಾಗಿದ್ದರೂ ಬಿಡಿಎ ಸ್ವೀಕರಿಸಲಿಲ್ಲ.

ನಂತರ ‘ಅಲ್ಕಾನ್ ಸಂಸ್ಥೆ’ಗೆ ತನಿಖೆಯ ಹೊಣೆ ವಹಿಸಲಾಗಿತ್ತು. ಅಲ್ಕಾನ್ ಸಂಸ್ಥೆಯು ಲೆಕ್ಕ ಪರಿಶೋಧನೆಯಲ್ಲಿ ಗುತ್ತಿಗೆದಾರರೊಬ್ಬರಿಗೆ ಹೆಚ್ಚುವರಿಯಾಗಿ ₹40 ಕೋಟಿ ಪಾವತಿಸಿರುವುದನ್ನು ಪತ್ತೆ ಮಾಡಿತ್ತು. ಅದಾದ ಮೇಲೆ ಎಚ್ಚೆತ್ತ ಬಿಡಿಎ ಮರು–ಪರಿಶೀಲನೆಗೆ ಮುಂದಾಯಿತು. ಈ ಮರು ಪರಿಶೀಲನಾ ಕಾರ್ಯವು ಕಳೆದ ಎಂಟು ತಿಂಗಳಿಂದ ನಡೆಯುತ್ತಿದ್ದರೂ ಪೂರ್ಣಗೊಂಡಿಲ್ಲ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಕಾಮಗಾರಿ ಮುಂದುವರಿಸುವುದು, ಕೆಲಸದ ವೇಗ ಹೆಚ್ಚಿಸುವುದು ಲೆಕ್ಕಪರಿಶೋಧನೆ ವರದಿ ಮೇಲೆ ನಿಂತಿದೆ. ಸರ್ಕಾರಕ್ಕೂ ಆ ವರದಿ ಸಲ್ಲಿಕೆಯಾಗುವ ಸಾಧ್ಯತೆಯಿದೆ. ತನಿಖಾ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣಕ್ಕೆ ಗುತ್ತಿಗೆದಾರರು ಕಾಮಗಾರಿ ಮುಂದುವರಿಸಲು ಆಸಕ್ತಿ ತೋರುತ್ತಿಲ್ಲ. ಇದರಿಂದ ಮನೆ ನಿರ್ಮಿಸಲು ಸಮಸ್ಯೆಯಾಗಿದೆ’ ಎಂದು ನಿವೇಶನದಾರರು ಹೇಳಿದ್ದಾರೆ.



ಕೆಂಪೇಗೌಡ ಬಡಾವಣೆಯ ಕಾಮಗಾರಿ ಸ್ಥಿತಿ

ಒಂದು ಹಂತದ ಲೆಕ್ಕಪರಿಶೋಧನೆ ಮುಕ್ತಾಯವಾಗಿದೆ. ಸಿವಿಲ್ ಕಾಮಗಾರಿಯ ಲೆಕ್ಕಪರಿಶೋಧನೆ ಪ್ರಗತಿಯಲ್ಲಿದೆ.
ಶಾಂತರಾಜನ್
ಬಿಡಿಎ ಎಂಜಿನಿಯರ್ ಸದಸ್ಯ

ತನಿಖೆ ಪ್ರಕ್ರಿಯೆ ಪೂರ್ಣಗೊಳ್ಳದ ಪರಿಣಾಮ ರಾಜಕಾಲುವೆಗಳ ನಿರ್ಮಾಣ, ರಸ್ತೆ ಡಾಂಬರೀಕರಣ, ಚರಂಡಿ, 300 ಎಕರೆ ಪ್ರದೇಶದಲ್ಲಿ ನಿವೇಶನ ಅಭಿವೃದ್ಧಿ ಹಾಗೆಯೇ ಉಳಿದಿದೆ.
ಸೂರ್ಯಕಿರಣ್
ವಕ್ತಾರ, ಬಡಾವಣೆ ಮುಕ್ತ ವೇದಿಕೆ

ಅಡ್ಡಾದಿಡ್ಡಿ ಕಾರು ಚಾಲನೆ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಉದ್ಯಮಿಯೊಬ್ಬರು ತಮ್ಮ ಕಾರನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದು, ನಾಲ್ವರು ಗಾಯಗೊಂಡಿದ್ದಾರೆ.

‘ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರ ಬಳಿ ಭಾನುವಾರ ಮಧ್ಯಾಹ್ನ ಸರಣಿ ಅಪಘಾತ ಸಂಭವಿಸಿದೆ. ಸ್ಮಿತಾ, ಕಿರಣ್, ಮೊಯ್ಸಿನ್ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ. ಅಪಘಾತಕ್ಕೆ ಕಾರಣರಾದ ಆರೋಪದಡಿ ಉದ್ಯಮಿ ಅಭಿಷೇಕ್ ಅಗರವಾಲ್ ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬನ್ನೇರುಘಟ್ಟ ರಸ್ತೆಯ ನಿವಾಸಿ ಅಭಿಷೇಕ್, ಜಿಗಣಿಯಲ್ಲಿ ಉದ್ಯಮ ಹೊಂದಿದ್ದಾರೆ. ಅವರು ತಮ್ಮ ಕಾರಿನಲ್ಲಿ ಕಾಳೇನ ಅಗ್ರಹಾರ ಬಳಿ ಹೊರಟಿದ್ದರು. ಇದೇ ಸಂದರ್ಭದಲ್ಲಿ ನಿರ್ಲಕ್ಷ್ಯದಿಂದ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿದ್ದರು. ಎರಡು ದ್ವಿಚಕ್ರ ವಾಹನಗಳು ಸೇರಿ ಐದು ವಾಹನಗಳಿಗೆ ಕಾರು ಡಿಕ್ಕಿ ಹೊಡೆದಿತ್ತು.’

‘ಎರಡೂ ದ್ವಿಚಕ್ರ ವಾಹನಗಳಿಂದ ಹಾರಿ ಬಿದ್ದಿದ್ದ ನಾಲ್ವರು ಗಾಯಗೊಂಡಿದ್ದಾರೆ. ಅವರಲ್ಲಿ ಮೂವರು ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಒಬ್ಬರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಉಳಿದ, ಮೂರು ವಾಹನಗಳು ಜಖಂಗೊಂಡಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಪಘಾತ ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ, ಅಭಿಷೇಕ್‌ನನ್ನು ವಶಕ್ಕೆ ಪಡೆದಿದ್ದರು. ಮದ್ಯ ಕುಡಿದಿದ್ದ ಬಗ್ಗೆ ಅನುಮಾನವಿದ್ದಿದ್ದರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆದರೆ, ಮದ್ಯದ ಅಂಶ ಕಂಡುಬಂದಿಲ್ಲ’ ಎನ್ನಲಾಗಿದೆ.

ಬ್ರೇಕ್ ಬದಲು ಆ್ಯಕ್ಸಲರೇಟರ್: ‘ಉದ್ಯಮಿಯದ್ದು ಸ್ವಯಂಚಾಲಿತ ಕಾರು. ಕಾಳೇನ ಅಗ್ರಹಾರ ಬಳಿ ಭಾನುವಾರ ಮಧ್ಯಾಹ್ನ ವಾಹನ ದಟ್ಟಣೆ ಇತ್ತು. ಇದೇ ರಸ್ತೆಯಲ್ಲಿ ಉದ್ಯಮಿ ಅತೀ ವೇಗವಾಗಿ ಕಾರು ಚಲಾಯಿಸಿದ್ದ. ಎದುರಿಗೆ ವಾಹನಗಳು ನಿಂತಿದ್ದನ್ನು ಕಂಡು ಕಾರು ನಿಲ್ಲಿಸಲು ಬ್ರೇಕ್ ಒತ್ತುವ ಬದಲು ಆ್ಯಕ್ಸಲರೇಟರ್ ಒತ್ತಿದ್ದ. ಹೀಗಾಗಿ, ಕಾರು ಮತ್ತಷ್ಟು ವೇಗದಲ್ಲಿ ಮುಂದಕ್ಕೆ ಹೋಗಿ ಸರಣಿ ಅಪಘಾತವಾಗಿತ್ತು. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಎಸ್‌ಆರ್‌ಟಿಸಿ ಬಸ್– ಕಾರು ಅಪಘಾತ





ಅಪಘಾತಕ್ಕೀಡಾದ ಕಾರು ಮತ್ತು ಬಸ್

ದಾಬಸ್ ಪೇಟೆ: ರಾಷ್ಟ್ರೀಯ ಹೆದ್ದಾರಿಯ ಬೇಗೂರು ಬಳಿ ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರು ನಡುವೆ ಸೋಮವಾರ ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ಬಸ್ ಪ್ರಯಾಣಿಕರು ಹಾಗೂ ಕಾರಿನಲ್ಲಿದ್ದವರು ಪಾರಾಗಿದ್ದಾರೆ.

‘ತುಮಕೂರು ಕಡೆಯಿಂದ ಬೆಂಗಳೂರು ಕಡೆಗೆ ಹೆದ್ದಾರಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಹೊರಟಿತ್ತು. ರಸ್ತೆ ಪಕ್ಕದ ಹೋಟೆಲ್ ಕಡೆಯಿಂದ ಕಾರು ದಿಢೀರ್ ರಾಷ್ಟ್ರೀಯ ಹೆದ್ದಾರಿಗೆ ಸೇರಿತ್ತು. ಇದೇ ಸಂದರ್ಭದಲ್ಲಿ ಬಸ್ ಹಾಗೂ ಕಾರಿನ ನಡುವೆ ಭಾಗಶಃ ಡಿಕ್ಕಿ ಸಂಭವಿಸಿತ್ತು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು. ‘ಕಾರು ಅಡ್ಡ ಬಂದಿದ್ದನ್ನು ಗಮನಿಸಿದ್ದ ಬಸ್ ಚಾಲಕ, ಬಸ್ಸನ್ನು ಬಲಕ್ಕೆ ಚಲಾಯಿಸಿದ್ದರು. ಸ್ವಲ್ಪ ದೂರಕ್ಕೆ ಹೋಗಿ ಬಸ್ ನಿಂತುಕೊಂಡಿತ್ತು. ಇದರಿಂದ ಹೆಚ್ಚು ಅನಾಹುತ ಸಂಭವಿಸಲಿಲ್ಲ.’

‘ಪೀಣ್ಯದ ಕಂಪನಿಯೊಂದರ ಮಾಲೀಕ ಶ್ರೀಧರ್ ಹಾಗೂ ಅವರ ಪತ್ನಿ ಕಾರಿನಲ್ಲಿದ್ದರು. ಹೋಟೆಲ್‌ನಲ್ಲಿ ತಿಂಡಿ ತಿಂದು ಬೆಂಗಳೂರಿನತ್ತ ಹೊರಟಿದ್ದಾಗಲೇ ಅಪಘಾತ ಸಂಭವಿಸಿತ್ತು. ಕಾರಿನ ಏರ್ ಬ್ಯಾಗ್ ತೆರೆದುಕೊಂಡಿದ್ದರಿಂದ ಅವರು ಅಪಾಯದಿಂದ ಪಾರಾಗಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು. ಅಪಘಾತ ಸ್ಥಳಕ್ಕೆ ಡಿವೈಎಸ್ಪಿ ಜಗದೀಶ್ ಭೇಟಿ ನೀಡಿದರು. ಅಪಘಾತ ಸಂಬಂಧ ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಸೇರಿದ ಮಗು, ಬಾಣಂತಿ

15 ದಿನದಿಂದ ಊರಾಚೆ ವಾಸ, ಗೊಲ್ಲರಹಟ್ಟಿಯಲ್ಲಿ ಮೌಢ್ಯ

ಪ್ರಜಾವಾಣಿ ವಾರ್ತೆ



ಕುಣಿಗಲ್ ತಾಲ್ಲೂಕಿನ ನಡೆಮಾವಿನಪುರ ಗೊಲ್ಲರಹಟ್ಟಿಯ ಜಮೀನಿನ ಗುಡಿಸಿಲಿನಲ್ಲಿದ್ದ ಮಗು, ಬಾಣಂತಿಯನ್ನು ಪೊಲೀಸರು ಸೋಮವಾರ ಮನೆಗೆ ಸೇರಿಸಿದರು

ಕುಣಿಗಲ್: ತಾಲ್ಲೂಕಿನ ನಡೆಮಾವಿನಪುರ ಗೊಲ್ಲರಹಟ್ಟಿ ಜಮೀನಿನ ಗುಡಿಸಲಿನಲ್ಲಿದ್ದ ಮಗು ಮತ್ತು ಬಾಣಂತಿಯನ್ನು ಪೊಲೀಸರು ಸೋಮವಾರ ಮನೆಗೆ ಸೇರಿಸಿದ್ದಾರೆ.

ಅ.27ರಂದು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದೆ. ಹೆರಿಗೆಯಾದ ಎರಡು ದಿನಗಳ ನಂತರ ಮಗು ಮತ್ತು ಬಾಣಂತಿಯನ್ನು ಗೊಲ್ಲರಹಟ್ಟಿಯಾಚೆಗೆ ಜಮೀನಿನಲ್ಲಿ ನಿರ್ಮಿಸಿದ್ದ ಗುಡಿಸಲಿನಲ್ಲಿ ವಾಸಕ್ಕೆ ಬಿಡಲಾಗಿತ್ತು.

ಕಳೆದ ಹದಿನೈದು ದಿನಗಳಿಂದ ಮಗು, ಬಾಣಂತಿ ಊರಾಚೆ ಗುಡಿಸಲಿನಲ್ಲಿದ್ದರು. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಮೌಢ್ಯತೆ ತೊರೆದು ಮನೆಗೆ ಸೇರಿಸುವಂತೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು, ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಅರಿವು ಮೂಡಿಸಿದರು.

ಹೆಡ್‌ಕಾನ್‌ಸ್ಟೆಬಲ್ ಬೊಮ್ಮಣ್ಣ ಮತ್ತು ಚಾಲಕ ಲಿಂಗರಾಜು, ಮೌಢ್ಯ ಆಚರಣೆಯಿಂದ ಸಂಭವಿಸುವ ಕಾನೂನು ತೊಡಕು ಮತ್ತು ಆರೋಗ್ಯ ವಿಚಾರ ಕುರಿತು ಮನವರಿಕೆ ಮಾಡಿಕೊಟ್ಟರು. ಮೊದಲಿಗೆ ಪ್ರತಿರೋಧ ವ್ಯಕ್ತವಾಯಿತು. ಪರಿಸ್ಥಿತಿ ಗಂಭೀರತೆ ಬಗ್ಗೆ ವಿವರಿಸಿ ಎಚ್ಚರಿಕೆ ನೀಡಿದ ನಂತರ ಬಾಣಂತಿ ಮತ್ತು ಮಗುವನ್ನು ಮನೆಯೊಳಗೆ ಸೇರಿಸಿಕೊಂಡರು.

ಊರಾಚೆ ಜಮೀನಿನಲ್ಲಿ ನಿರ್ಮಿಸಿದ್ದ ಎರಡು ಗುಡಿಸಲನ್ನು ಪೊಲೀಸರು ತೆರವುಗೊಳಿಸಿದರು. ಮತ್ತೆ ಮೌಢ್ಯಾಚರಣೆ ಮುಂದುವರಿದರೆ ಕಾನೂನು ಕ್ರಮದ ಎಚ್ಚರಿಕೆ ನೀಡಿದರು.

ಪಿಯುಸಿ ಮುಗಿಸಿರುವ ಬಾಣಂತಿ, 'ಹಿರಿಯರ ಅಣತಿ ಮೇರೆಗೆ ಗುಡಿಸಲು ವಾಸಕ್ಕೆ ಒಪ್ಪಬೇಕಾದ ಸ್ಥಿತಿ ಬಂದಿತ್ತು' ಎಂದು ತಿಳಿಸಿದರು.



ಜೆಪಿ ನಗರದ ಪತ್ರಿಕಾ ವಿತರಕರ ಸಂಘದಿಂದ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು

ಕೆ.ಆರ್‌. ಪುರ ರೈಲು, ಮೆಟ್ರೊ ನಿಲ್ದಾಣಕ್ಕೆ ಹೋಗಲು ಪರದಾಡುವ ಪ್ರಯಾಣಿಕರು

ಅರ್ಧಕ್ಕೆ ನಿಂತ ಸ್ಕೈವಾಕ್ ಕಾಮಗಾರಿ!

• ಖಲೀಲಅಹ್ಮದ ಶೇಖ





ಕೆ.ಆರ್ ಪುರ ರೈಲು ನಿಲ್ದಾಣದ ನ್ಯೂ ಲೈಟ್ ಜಂಕ್ಷನ್ ಮುಖ್ಯರಸ್ತೆ ದಾಟುತ್ತಿರುವ ಪ್ರಯಾಣಿಕರು (ಎಡ ಚಿತ್ರ). ಅರ್ಧಕ್ಕೆ ನಿಂತಿರುವ ಸ್ಕೈ ವಾಕ್ ಕಾಮಗಾರಿ ಪ್ರಜಾವಾಣಿ ಚಿತ್ರಗಳು/ರಂಜು ಪಿ

ಬೆಂಗಳೂರು: ಸಂಚಾರ ಸಿಗ್ನಲ್‌ಗಳಿಲ್ಲದ ರಸ್ತೆ, ಅರ್ಧಕ್ಕೆ ನಿಂತ ಸ್ಕೈವಾಕ್ ಕಾಮಗಾರಿ, ಮುಖ್ಯರಸ್ತೆಯಲ್ಲಿ ಗಕ್ಕನೇ ಬರುವ ವಾಹನಗಳ ಮಧ್ಯ ಜೀವಭಯದಲ್ಲೇ ರಸ್ತೆ ದಾಟುವ ಪಾದಚಾರಿಗಳು…

ಇದು ಕೆ.ಆರ್. ಪುರ ರೈಲು ಮತ್ತು ಮೆಟ್ರೊ ನಿಲ್ದಾಣದ ಬಳಿ ನಿತ್ಯ ಕಂಡುಬರುವ ದೃಶ್ಯಗಳು!

ಕೆ.ಆರ್.ಪುರ ರೈಲು ನಿಲ್ದಾಣದ ಮುಂಭಾಗದಲ್ಲೇ 'ನಮ್ಮ ಮೆಟ್ರೊ' ರೈಲು ನಿಲ್ದಾಣವಿದೆ. ಎರಡು ನಿಲ್ದಾಣಗಳ ನಡುವೆ ಸಂಚರಿಸುವ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ 10 ತಿಂಗಳ ಹಿಂದೆ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ನಿರ್ಮಾಣದ ಕಾಮಗಾರಿ ಆರಂಭವಾಯಿತು. ಆದರೆ ಅದು ಈಗ ಅರ್ಧಕ್ಕೆ ನಿಂತಿದೆ. ಹೀಗಾಗಿ ಪ್ರಯಾಣಿಕರು ಐಟಿಪಿಎಲ್ ಮುಖ್ಯರಸ್ತೆಯ ನ್ಯೂಲೈಟ್ ಜಂಕ್ಷನ್ ಮೂಲಕವೇ ಮೆಟ್ರೊ ಮತ್ತು ರೈಲು ನಿಲ್ದಾಣಗಳನ್ನು ತಲುಪಬೇಕು.

ಇಲ್ಲಿ ನಿತ್ಯ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೂ ದಟ್ಟಣೆ ಹೆಚ್ಚಿರುತ್ತದೆ. ಕೆ.ಆರ್. ಪುರ ರೈಲು ನಿಲ್ದಾಣದಲ್ಲಿ 10–15 ನಿಮಿಷಕ್ಕೊಂದು ರೈಲು ಸಂಚರಿಸುತ್ತವೆ. ರೈಲಿನಿಂದ ಇಳಿವ ನೂರಾರು ಪ್ರಯಾಣಿಕರು ಕೆ.ಆರ್. ಪುರ ಮೆಟ್ರೊ ನಿಲ್ದಾಣದ ಮೂಲಕ ಬೆಂಗಳೂರು ನಗರ ಮತ್ತು ಕಚೇರಿಗಳಿಗೆ ಪ್ರಯಾಣಿಸುತ್ತಾರೆ. ನಗರದ ವಿವಿಧ ಭಾಗಗಳಿಂದ ಬರುವ ಐಟಿ–ಬಿಟಿ ಉದ್ಯೋಗಿಗಳೂ ಈ ನಿಲ್ದಾಣಗಳಲ್ಲಿಳಿದು, ನ್ಯೂಲೈಟ್ ಜಂಕ್ಷನ್‌ನ ಐಟಿಪಿಎಲ್ ರಸ್ತೆಯ ಮೂಲಕ ವೈಟ್‌ಫೀಲ್ಡ್, ಮಹದೇವಪುರ, ಸಿಲ್ಕ್‌ಬೋರ್ಡ್ ಮತ್ತು ಮಾರತ್‌ಹಳ್ಳಿಯಲ್ಲಿರುವ ತಮ್ಮ ಕಚೇರಿಗಳಿಗೆ ತೆರಳುತ್ತಾರೆ. ಸ್ಕೈವಾಕ್ ಇಲ್ಲದ ಕಾರಣ ಇವರೆಲ್ಲರಿಗೂ ಇಲ್ಲಿ ರಸ್ತೆ ದಾಟುವುದೇ ದೊಡ್ಡ ಸವಾಲಾಗಿದೆ.

ರಾಜಧಾನಿ ಜನರ ಧ್ವನಿ

ಮೊದಲು ರೈಲು ನಿಲ್ದಾಣವಷ್ಟೇ ಇತ್ತು. ಜನ ಸಂಚಾರ ವಿರಳವಾಗಿತ್ತು. ಈಗ ಮೆಟ್ರೊ ರೈಲು ನಿಲ್ದಾಣವಾದ ಮೇಲೆ ವಾಹನ ಸಂಚಾರ, ಪ್ರಯಾಣಿಕರ ಓಡಾಟ ಎರಡೂ ಹೆಚ್ಚಿದೆ. ಮೂರ್ನಾಲ್ಕು ಸಂಚಾರ ಪೊಲೀಸರು ಸಂಚಾರ ದಟ್ಟಣೆ ನಿರ್ವಹಿಸುತ್ತಿದ್ದಾರೆ. ಎರಡೂ ನಿಲ್ದಾಣ ಬಳಿ ಗೇಟಿಂಗ್ ವ್ಯವಸ್ಥೆ ಮಾಡಿಕೊಂಡು, ಜನರನ್ನು ರಸ್ತೆ ದಾಟಿಸುವ ಸಾಹಸ ಮಾಡುತ್ತಿದ್ದಾರೆ.

'ಕೆ.ಆರ್. ಪುರ ರೈಲು ನಿಲ್ದಾಣಕ್ಕೆ ವಾರಕ್ಕೆ ಮೂರು ಬಾರಿ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ ಮತ್ತು ವಿವಿಧ ರಾಜ್ಯಗಳಿಂದ ಬರುವ ರೈಲುಗಳಲ್ಲಿ ನೂರಾರು ಪ್ರಯಾಣಿಕರು ಬರುತ್ತಾರೆ. ಅವರನ್ನು ಲಗೇಜ್ ಸಹಿತ ರಸ್ತೆ ದಾಟಿಸುವುದು ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ' ಎಂದು ಸ್ಥಳೀಯ ನಿವಾಸಿ ದುರ್ಗೇಶ್ ಹೇಳಿದರು.

'ಮೆಟ್ರೊ ರೈಲು ನಿಲ್ದಾಣ ನಿರ್ಮಾಣ ವೇಳೆಯಲ್ಲಿ ಮೆಟ್ರೊ–ರೈಲು ನಿಲ್ದಾಣಗಳ ನಡುವೆ ಸಂಪರ್ಕ ಕಲ್ಪಿಸಲು ಅಂಡರ್‌ಪಾಸ್ ನಿರ್ಮಿಸಬೇಕಿತ್ತು. ಈಗ ರೈಲು ನಿಲ್ದಾಣದಿಂದ 50 ಮೀಟರ್ ದೂರದಲ್ಲಿ ಸ್ಕೈವಾಕ್ ನಿರ್ಮಾಣ ಮಾಡುತ್ತಿದ್ದಾರೆ. ಅದು ಇನ್ನೂ ಪೂರ್ಣಗೊಂಡಿಲ್ಲ. ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ, ಸ್ಕೈವಾಕ್‌ಗೆ ಎಸ್ಕಲೇಟರ್ ಅಥವಾ ಲಿಫ್ಟ್ ಅಳವಡಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ
9606038256

ಜನ ಏನಂತಾರ?



ರೈಲು ಮತ್ತು ಮೆಟ್ರೊ ಪ್ರಯಾಣಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಅರ್ಧಕ್ಕೆ ನಿಂತಿರುವ ಸ್ಕೈವಾಕ್ ಕಾಮಗಾರಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಬೇಕು. ಇಲ್ಲದಿದ್ದರೆ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ.
ಉಮೇಶ್, ಸ್ಥಳೀಯ ನಿವಾಸಿ



ಕೆ.ಆರ್. ಪುರ ರೈಲು ಮತ್ತು ಮೆಟ್ರೊ ನಿಲ್ದಾಣದ ಮೂಲಕ ವೈಟ್‌ಫೀಲ್ಡ್, ಮಹದೇವಪುರ, ಮಾರತ್‌ಹಳ್ಳಿ ಭಾಗದಲ್ಲಿರುವ ಐಟಿಬಿಟಿ ಕಂಪನಿಗಳಿಗೆ ಹೋಗುವ ಟೆಕ್ಕಿಗಳು ಪ್ರತಿನಿತ್ಯ ಜೀವಭಯದಲ್ಲಿ ಮುಖ್ಯರಸ್ತೆ ದಾಟುತ್ತಾರೆ. ಇದರಿಂದ ಸಂಚಾರ ದಟ್ಟಣೆಯೂ ಹೆಚ್ಚುತ್ತಿದೆ. ಕೂಡಲೇ ಸ್ಕೈವಾಕ್ ಕಾಮಗಾರಿ ಪೂರ್ಣಗೊಳಿಸಿ.
ಚನ್ನಬಸವ, ಖಾಸಗಿ ಉದ್ಯೋಗಿ



ರೈಲು ಮತ್ತು ಮೆಟ್ರೊದಿಂದ ಬರುವ ಪ್ರಯಾಣಿಕರು ಇಲ್ಲಿನ ರಸ್ತೆಗಳನ್ನು ಜೀವಭಯದಲ್ಲಿ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೊಂದು ಶಾಶ್ವತ ಪರಿಹಾರ ಕಲ್ಪಿಸಬೇಕು.
ಮಂಜುನಾಥ್, ಸ್ಥಳೀಯ ನಿವಾಸಿ

ನೋಂದಣಿ ನಿರಂತರ ಪ್ರಕ್ರಿಯೆ

ಬೆಂಗಳೂರು: 'ನಾಮಪತ್ರ ಸಲ್ಲಿಸುವ ಹತ್ತು ದಿನಗಳ ಮೊದಲಿನ ತನಕ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಲು ಅವಕಾಶವಿದೆ' ಎಂದು ರಾಜ್ಯದ ಜಂಟಿ ಮುಖ್ಯ ಚುನಾವಣಾ ಅಧಿಕಾರಿ ಎಸ್. ಯೋಗೇಶ್ವರ ಸ್ಪಷ್ಟಪಡಿಸಿ ದ್ದಾರೆ.

ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಬೇಕಿರುವ ಚುನಾವಣೆಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು 2023ರ ನ.6ನೇ ತಾರೀಖು ಅಂತಿಮ ಎಂದು ಮಾಧ್ಯಮಗಳಲ್ಲಿ ನೀಡಲಾಗಿದ್ದ ಸಾರ್ವಜನಿಕ ತಿಳಿವಳಿಕೆಗೆ ಸ್ಪಷ್ಟನೆ ಕೋರಿ ಹೈಕೋರ್ಟ್ ವಕೀಲ ಎಚ್. ಸುನಿಲ್ ಕುಮಾರ್ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗೆ ಪತ್ರ ಬರೆದಿದ್ದರು.

ಈ ಪತ್ರಕ್ಕೆ ಉತ್ತರಿಸಿರುವ ಎಸ್. ಯೋಗೇಶ್ವರ, 'ಜನಪ್ರತಿನಿಧಿ ಕಾಯ್ದೆ–ಅನುಸಾರ, ಮತದಾರರ ಪಟ್ಟಿಗಳನ್ನು ನಿರಂತರ ನವೀಕರಿಸಬೇಕಾಗುತ್ತದೆ. ಪಟ್ಟಿಯ ನವೀಕರಣದ ಉದ್ದೇಶಕ್ಕಾಗಿ ಅರ್ಹ ಮತದಾರರ ನೋಂದಣಿ ಸದಾ ಮುಂದುವರಿಯುವ ಪ್ರಕ್ರಿಯೆಯಾಗಿರುತ್ತದೆ' ಎಂಬ ಅಂಶವನ್ನು ಮನದಟ್ಟು ಮಾಡಿದ್ದಾರೆ.

ಕೆಎಸ್‌ಆರ್‌ಟಿಸಿ: ಆದಾಯ ವೃದ್ಧಿಸಿಕೊಳ್ಳಲು 20 ಟ್ರಕ್ ಖರೀದಿ

ಮುಂದಿನ ತಿಂಗಳು ಬರಲಿವೆ ಪಾರ್ಸೆಲ್ ಟ್ರಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಆದಾಯ ಹೆಚ್ಚಿಸಲು ಹೊಸ ಹೆಜ್ಜೆ ಇಟ್ಟಿದೆ. ಪಾರ್ಸೆಲ್‌ಗಳನ್ನು ಒಯ್ಯಲು 20 ಲಾರಿ ಟ್ರಕ್‌ಗಳನ್ನು ಖರೀದಿಸಿದ್ದು, ಡಿ.15ರ ಒಳಗೆ ಕಾರ್ಯಾರಂಭ ಮಾಡಲಿವೆ.

ಟಾಟಾ ಕಂಪನಿಯ ಪುಣೆ ಶಾಖೆಯಲ್ಲಿ ಟ್ರಕ್‌ಗಳು ತಯಾರಾಗುತ್ತಿವೆ.


ಬಸ್‌ಗಳಲ್ಲಿ ಲಗೇಜ್ ಒಯ್ಯುವ ಮೂಲಕ ಆದಾಯ ಗಳಿಸಲು ದಶಕಗಳ ಹಿಂದೆ ಕೆಎಸ್‌ಆರ್‌ಟಿಸಿ ನಿರ್ಧರಿಸಿತ್ತು. ಬಸ್ ಡಿಕ್ಕಿಯಲ್ಲಿ ಸಣ್ಣ ಪ್ರಮಾಣದ ಪಾರ್ಸೆಲ್‌ಗಳನ್ನು ಕೊಂಡೊಯ್ಯುವ ಕಾರ್ಯವನ್ನು 109 ನಿಲ್ದಾಣಗಳಲ್ಲಿ ಆರಂಭಿಸಿತ್ತು. ಬಳಿಕ ಎಲ್ಲ ಬಸ್‌ನಿಲ್ದಾಣಗಳಿಗೆ ವಿಸ್ತರಿಸಿತ್ತು. ಇದರಿಂದ ವರ್ಷಕ್ಕೆ ₹ 4 ಕೋಟಿ ಆದಾಯ ಬರತೊಡಗಿತ್ತು.

ಕಾರ್ಗೊ ಸೇವೆ ವಿಸ್ತರಿಸಲು ನಿರ್ಧರಿಸಿ ಖಾಸಗಿ ಏಜೆನ್ಸಿಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡಿತು. ಬರುವ ಆದಾಯದಲ್ಲಿ ಕೆಎಸ್‌ಆರ್‌ಟಿಸಿಗೆ ಶೇ 80, ಖಾಸಗಿ ಏಜೆನ್ಸಿಗೆ ಶೇ 20 ಪಾಲುದಾರಿಕೆ ನಿಗದಿಯಾಯಿತು. ಇದರಿಂದ ಕೆಎಸ್‌ಆರ್‌ಟಿಸಿ ತಿಂಗಳಿಗೆ ₹ 1.10 ಕೋಟಿ (ವಾರ್ಷಿಕ ₹ 13.20 ಕೋಟಿ) ಆದಾಯ ಗಳಿಸುತ್ತಿದೆ.



ವಿಮಾನ ನಿಲ್ದಾಣ, ಬಂದರು ಸೇರಿದಂತೆ ಗ್ರಾಹಕರು ತಿಳಿಸಿದ ಸ್ಥಳದಿಂದ, ತಲುಪಿಸಬೇಕಾದ ಸ್ಥಳಕ್ಕೆ ನಮ್ಮ ಟ್ರಕ್‌ಗಳು ಪಾರ್ಸೆಲ್ ಒಯ್ಯಲಿವೆ
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಮೊದಲ ಪ್ರಯೋಗ: ಎಂ.ಡಿ



ವಿ. ಅನ್ಬು ಕುಮಾರ್

'ಇದೇ ಮೊದಲ ಬಾರಿಗೆ ಟ್ರಕ್‌ಗಳನ್ನು ಖರೀದಿಸಿ ಪಾರ್ಸೆಲ್ ಸಾಗಾಟ ಆರಂಭಿಸಲಾಗುತ್ತಿದೆ. ಕೆಎಸ್‌ಆರ್‌ಟಿಸಿ ಈಗಾಗಲೇ ಜನರ ವಿಶ್ವಾಸ ಮತ್ತು ನಂಬಿಕೆಗೆ ಪಾತ್ರವಾಗಿದೆ. ಹಾಗಾಗಿ ಪಾರ್ಸೆಲ್ ಸಾಗಾಟಕ್ಕೂ ಜನರು ಉತ್ತಮ ಸ್ಪಂದನೆ ನೀಡಲಿದ್ದಾರೆ ಎಂಬ ನಂಬಿಕೆ ನಮಗಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಕೃಷಿ, ಟೆಕ್ಸ್‌ಟೈಲ್ಸ್, ಆಟೊಮೊಬೈಲ್ ಕ್ಷೇತ್ರಗಳಿಂದ ಬೇಡಿಕೆ ಇದೆ. ಅವರಿಗೆ 15–20 ಟನ್ ಒಯ್ಯುವ ಭಾರಿ ವಾಹನ ಬೇಕಾಗಿಲ್ಲ. 5–6 ಟನ್ ಅಷ್ಟೇ ಸಾಗಾಟ ಇರುತ್ತದೆ. ಅವರ ಬೇಡಿಕೆಗೆ ಸೂಕ್ತವಾದ ಟ್ರಕ್ ಖರೀದಿ ಮಾಡುತ್ತಿದ್ದೇವೆ. ರಾಜ್ಯದ ಎಲ್ಲೆಡೆ ನಮ್ಮ ಡಿಪೊ, ನಿಲ್ದಾಣಗಳು ಇವೆ. ಯಾವ ಮಾರ್ಗದಲ್ಲಿ ಹೆಚ್ಚು ಪಾರ್ಸೆಲ್‌ಗಳು ಬರುತ್ತವೆ ಎಂಬುದನ್ನು ನೋಡಿಕೊಂಡು ಟ್ರಕ್ ಬಳಕೆ ಮಾಡಲಾಗುವುದು. ಸ್ಪಂದನೆ ಹೆಚ್ಚಾದರೆ ಮುಂದೆ ಟ್ರಕ್‌ಗಳ ಸಂಖ್ಯೆ ಹೆಚ್ಚಿಸಲಾಗುವುದು' ಎಂದು ವಿವರ ನೀಡಿದರು.

ಟ್ರಕ್ ಸೇವೆಯು ಆರಂಭಗೊಂಡರೆ ನಿಗದಿತ ಸ್ಥಳಕ್ಕೇ ಪಾರ್ಸೆಲ್ ತಲುಪಲಿದೆ.

ಬಸ್‌ಗಳಲ್ಲಿಯೂ ಹೆಚ್ಚಿಸುವ ಗುರಿ: ಸದ್ಯ 800 ಬಸ್‌ಗಳಲ್ಲಿ ಪಾರ್ಸೆಲ್ ಸಾಗಾಟ ಮಾಡಲಾಗುತ್ತಿದೆ. ಮುಂದೆ ಖರೀದಿಸಲಾಗುವ ಎಲ್ಲ ಬಸ್‌ಗಳಲ್ಲಿ ಪಾರ್ಸೆಲ್ ಕೊಂಡೊಯ್ಯುವ ವ್ಯವಸ್ಥೆ ಇರಲಿದೆ. ಇನ್ನು ನಾಲ್ಕು ವರ್ಷಗಳಲ್ಲಿ 4,000 ಬಸ್‌ಗಳಲ್ಲಿ ಈ ಸೇವೆ ವಿಸ್ತರಿಸುವ ಗುರಿಯನ್ನು ಕೆಎಸ್‌ಆರ್‌ಟಿಸಿ ಹೊಂದಿದೆ.

ಅಂಕಿ-ಅಂಶಗಳು

20 ಟ್ರಕ್‌ಗಳ ಸಂಖ್ಯೆ

₹17.03 ಲಕ್ಷ ಪ್ರತಿ ಟ್ರಕ್‌ನ ಬೆಲೆ

₹100 ಕೋಟಿ ವಾರ್ಷಿಕ ಆದಾಯ ಗಳಿಸುವ ಗುರಿ

ಹತ್ತು ಸಾಹಿತಿಗಳಿಗೆ 'ಅಮ್ಮ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಸೇಡಂನ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದಿಂದ ನೀಡುವ 23ನೇ ವರ್ಷದ ರಾಜ್ಯಮಟ್ಟದ 'ಅಮ್ಮ ಪ್ರಶಸ್ತಿ'ಗೆ ಹತ್ತು ಸಾಹಿತಿಗಳ ಕೃತಿಗಳು ಆಯ್ಕೆಯಾಗಿವೆ.



ದಯಾ ಗಂಗನಘಟ್ಟ

ಮಂಡ್ಯದ ಕೆ.ಪಿ.ಮೃತ್ಯುಂಜಯ ಅವರ 'ಉಳಿದುಬಿಡು ಒಂದು ಬಿಂದುವಾಗಿ', ವಿಜಯಪುರದ ಚೈತ್ರಾ ಶಿವಯೋಗಿಮಠ ಅವರ 'ಪೆಟ್ರಿಕೋರ್' (ಕಾವ್ಯ), ಬೆಂಗಳೂರಿನ ದಯಾ ಗಂಗನಘಟ್ಟ ಅವರ 'ಉಪ್ಪುಚ್ಚಿ ಮುಳ್ಳು', ಕಲಬುರಗಿಯ ಕೃಷ್ಣನಾಯಕರ 'ಕಾಂತಾಮಣಿಯ ಕನಸುಗಳು' (ಕಥೆ), ಕಾರವಾರದ ಸಂತೋಷಕುಮಾರ ಮೆಹಂದಳೆ ಅವರ 'ವೈಜಯಂತಿಪುರ', ಕೋಲಾರದ ಸಿ.ಚಂದ್ರಪ್ಪ ಅವರ 'ಅಶೋಕ' (ಕಾದಂಬರಿ), ತುಮಕೂರಿನ ಮಿರ್ಜಾ ಬಷೀರರ 'ಗಂಗೆ ಬಾರೆ ಗೌರಿ ಬಾರೆ', ಉತ್ತರ ಕನ್ನಡದ ಸುಚಿತ್ರಾ ಹೆಗಡೆ ಅವರ 'ಜಗವ ಸುತ್ತುವ ಮಾಯೆ' (ಸಂಕೀರ್ಣ), ಬೆಳಗಾವಿಯ ನಾಗೇಶನಾಯಕ ಅವರ 'ಕಾಡುವ ಕವಿತೆ' (ವಿಮರ್ಶೆ) ಮತ್ತು ಕಲಬುರಗಿಯ ಸ್ವಾಮಿರಾವ ಕುಲಕರ್ಣಿ ಅವರ 'ದಾಸ ಸಾಹಿತ್ಯ: ದೃಷ್ಟಿ–ಸೃಷ್ಟಿ' ಕೃತಿಗಳು ಆಯ್ಕೆಯಾಗಿವೆ ಎಂದು 'ಅಮ್ಮ ಪ್ರಶಸ್ತಿ'ಯ ಸಂಚಾಲಕಿ ರತ್ನಕಲಾ ಮಹಿಪಾಲರೆಡ್ಡಿ ಮುನ್ನೂರ್ ತಿಳಿಸಿದ್ದಾರೆ.

ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಪುರಸ್ಕಾರ, ನೆನಪಿನ ಕಾಣಿಕೆ, ಪ್ರಮಾಣ ಪತ್ರ, ಸತ್ಕಾರ ಮತ್ತು ಈ ನೆಲದ ಸಿರಿಧಾನ್ಯ ತೊಗರಿ ಬೇಳೆ ಒಳಗೊಂಡಿರುತ್ತದೆ.

ಎಲ್ಲ ವಿಭಾಗದಲ್ಲಿ ಲೇಖಕರು ಪ್ರಶಸ್ತಿಯನ್ನು ಹಂಚಿಕೊಂಡಿದ್ದು, ಇದೇ ನ.26ರಂದು ಸೇಡಂನ ಪಂಚಲಿಂಗೇಶ್ವರ ದೇವಾಲಯದ ಶಾಂಭವಿ ರಂಗಮಂಟಪದಲ್ಲಿ ಜರುಗುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೃದಯಾಘಾತ ವೈದ್ಯ ಸಾವು

ದೊಡ್ಡಬಳ್ಳಾಪುರ: ತಾಲ್ಲೂಕಿನ ಮಜರಾಹೊಸಹಳ್ಳಿ ವೈದ್ಯ ಡಾ.ಎಚ್.ಎಸ್. ಪ್ರಭಾಕರ್ (54) ಹೃದಯಾಘಾತದಿಂದ ಸೋಮವಾರ ಬೆಳಿಗ್ಗೆ ನಿಧನ ಹೊಂದಿದರು.



ಡಾ.ಎಚ್.ಎಸ್. ಪ್ರಭಾಕರ್

ಮೃತರಿಗೆ ತಾಯಿ ಹಾಗೂ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಅನಸ್ತೇಸಿಯಾ ತಜ್ಞರಾಗಿದ್ದ ಅವರು, ಬೆಂಗಳೂರಿನ ಆರ್.ಎಂ.ವಿ.ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದರು. ಮೃತರ ಅಂತ್ಯಕ್ರಿಯೆ ಮಜರಾಹೊಸಹಳ್ಳಿ ಜಮೀನಿನಲ್ಲಿ ಸೋಮವಾರ ನಡೆಯಿತು.

ಗುಣಮಟ್ಟಕ್ಕೆ ಆದ್ಯತೆ ನೀಡಿ: ಶಾಸಕ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಗ್ರಾಮಗಳು ಅಭಿವೃದ್ದಿಯಾದರೆ, ಕ್ಷೇತ್ರ ಅಭಿವೃದ್ಧಿಯಾಗುತ್ತದೆ. ಆದ್ದರಿಂದ ಗುಣಮಟ್ಟದ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು ಎಂದು ನೆಲಮಂಗಲ ಶಾಸಕ ಎನ್. ಶ್ರೀನಿವಾಸ ತಿಳಿಸಿದರು.

ಸೋಂಪುರ ಹೋಬಳಿಯ ಅಗಳಕುಪ್ಪೆ ಗ್ರಾಮ ಪಂಚಾಯಿತಿಯ ಅಗಳಕುಪ್ಪೆ ಹಾಗೂ ಸೊಂಪುರ ಗ್ರಾಮ ಪಂಚಾಯಿತಿಯ ಪೆಮ್ಮನಹಳ್ಳಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಕ್ಷೇತ್ರದಲ್ಲಿ ಕೈಗೊಳ್ಳುವ ಎಲ್ಲ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಾನು ಪರಿಶೀಲನೆ ಮಾಡುತ್ತೇನೆ' ಎಂದು ಗುತ್ತಿಗೆದಾರರು, ಎಂಜಿನಿಯರ್‌ಗಳಿಗೆ ಎಚ್ಚರಿಕೆ ನೀಡಿದರು.



ಕಾಂಕ್ರೀಟ್ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗೆ ನೆಲಮಂಗಲ ಶಾಸಕರಾದ ಎನ್. ಶ್ರೀನಿವಾಸ್ ಭೂಮಿಪೂಜೆ ನೆರವೇರಿಸಿದರು

'ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಅನೇಕ ಕೈಗಾರಿಕೆಗಳಿವೆ. ಇವು ಪ್ರತಿಯೊಂದು ಗ್ರಾಮವನ್ನು ದತ್ತು ಪಡೆದು, ಸಾಮಾಜಿಕ ಹೊಣೆಗಾರಿಕೆ ನಿಧಿ(ಸಿಎಸ್‌ಆರ್) ಯಿಂದ ಆ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದರೆ, ಹೋಬಳಿಯ ಗ್ರಾಮಗಳು ಅಭಿವೃದ್ದಿಯಾಗುತ್ತವೆ' ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಕೆ.ಗೋವಿಂದರಾಜು, ಅಗಳಕುಪ್ಪೆ ಗ್ರಾ.ಪಂ. ಅಧ್ಯಕ್ಷೆ ಮುಬಿನ್ ತಾಜ್, ಉಪಾಧ್ಯಕ್ಷೆ ಜಿ.ಲಕ್ಷ್ಮೀದೇವಿ ಇದ್ದರು.

ಉಗ್ರ ಸಾಹಿತ್ಯದ ಕಾಲಘಟ್ಟ; ಸುಚೇಂದ್ರ ಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಗ್ರ ಸಾಹಿತ್ಯ ಬರುವ ಕಾಲಘಟ್ಟದಲ್ಲಿ ಅಗ್ರ ಸಾಹಿತ್ಯ ಬರುವುದು ಕಷ್ಟ' ಎಂದು ಚಲನಚಿತ್ರ ನಟ ಸುಚೇಂದ್ರ ಪ್ರಸಾದ್ ತಿಳಿಸಿದರು.

ಮಂದಾರ ಪುಸ್ತಕ ಭಂಡಾರ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ ಅವರ 'ಕಾವ್ಯಮುಖಿ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಇದು ಸ್ಥಿತ್ಯಂತರದ ಕಾಲಘಟ್ಟ. ಈ ವೇಳೆ ಕಾವ್ಯಮುಖಿ, ಸಮಾಜಮುಖಿ ಕೃತಿಗಳನ್ನು ಲೋಕಕ್ಕೆ ಅರ್ಪಿಸುತ್ತಿರುವುದು ಉತ್ತಮ ಕಾರ್ಯ. ಆದರೆ, ಇದನ್ನು ಸ್ವೀಕರಿಸಲು ಲೋಕ ಎಷ್ಟರ-ಮಟ್ಟಿದೆ ಸನ್ನದ್ಧವಾಗಿದೆ ಎನ್ನುವುದು ಮುಖ್ಯ. ನಮ್ಮಲ್ಲಿ ಮದ್ಯದಂಗಡಿಗಳಿಗೆ ಸಿಕ್ಕ ಆದ್ಯತೆಯಲ್ಲಿ ಶೇ 10ರಷ್ಟೂ ಪುಸ್ತಕ ಮಳಿಗೆಗಳಿಗೆ ದೊರೆತಿಲ್ಲ. ಇದು ನಮ್ಮ ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಸುಚೇಂದ್ರ ಪ್ರಸಾದ್ ಅವರು (ಬಲದಿಂದ ಎರಡನೆಯವರು) ದೊಡ್ಡರಂಗೇಗೌಡ ಅವರ 'ಕಾವ್ಯಮುಖಿ' ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಶಾಂತರಾಜು, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮತ್ತು ರಾಗಂ ಮಠಪತಿ ಇದ್ದಾರೆ ಪ್ರಜಾವಾಣಿ ಚಿತ್ರ

ಕೃತಿ ಬಗ್ಗೆ ಮಾತನಾಡಿದ ವಿಜಯನಗರದ ಸರ್ಕಾರಿ ಕಾಲೇಜಿನ ಆಂಗ್ಲ ಪ್ರಾಧ್ಯಾಪಕ ರಾಗಂ ಮಠಪತಿ, 'ವಿನಯ ಕಾವ್ಯದ ಭಾಷೆಯಾಗಬೇಕು. ನೆಲದ ಹಿತ, ಸಂಸ್ಕೃತಿಯ ಹಿತ ಸಾಹಿತಿಯ ಆದ್ಯತೆಯಾಗಬೇಕು. ಉತ್ತಮ ಕಾವ್ಯ ಯಾವಾಗಲೂ ಧರ್ಮ, ಕಾಲ ಮತ್ತು ಲಿಂಗವನ್ನು ಮರೆಸುತ್ತದೆ' ಎಂದು ಹೇಳಿದರು.

ಕವಿ ದೊಡ್ಡರಂಗೇಗೌಡ, 'ನಾವು ವಾಸಿಸುವ ಜಗತ್ತು ಅತ್ಯಂತ ವಿಶಾಲವಾದದ್ದಾಗಿದ್ದು, ಅದರ ವಿಸ್ತಾರಕ್ಕೆ ಬೆಲೆ ಕಟ್ಟಲಾಗದು. ಇಲ್ಲಿ ಮಾನವ ಬದುಕು ಅಸಂಖ್ಯವಾದರೆ, ಭಾವನೆ ಅಗಣಿತ. ಕವಿಯಾದವನಿಗೆ ಈ ತಿಳಿವಳಿಕೆ ಇದ್ದರೆ ತನ್ನ ಸೃಜನಶೀಲತೆಗೆ ಎಲ್ಲಿಯ ತನಕ ಎಲ್ಲೆಯ ಕಟ್ಟು ಇದೆ ಎಂಬುದು ಅರಿವಿಗೆ ಬರುತ್ತದೆ. ಸ್ವ ಮೌಲ್ಯಮಾಪನವೂ ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಪುಸ್ತಕ ಪರಿಚಯ
ಪುಸ್ತಕ: 'ಕಾವ್ಯಮುಖಿ'
ಲೇಖಕರು: ದೊಡ್ಡರಂಗೇಗೌಡ
ಪುಟಗಳು: 456
ಬೆಲೆ: ₹ 500
ಪ್ರಕಾಶನ: ಮಂದಾರ ಪುಸ್ತಕ

ಅಪಘಾತ: ತಂದೆ- ಮಗ ಸಾವು

ಚನ್ನಪಟ್ಟಣ: ಬೈಕ್ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ತಂದೆ–ಮಗ ಸಾವಿಗೀಡಾಗಿರುವ ಘಟನೆ ಚನ್ನಪಟ್ಟಣ ತಾಲ್ಲೂಕಿನ ತಿಟ್ಟಮಾರನಹಳ್ಳಿ ಕೆರೆ ಏರಿ ರಸ್ತೆಯಲ್ಲಿ ಸೋಮವಾರ ಸಂಭವಿಸಿದೆ.

ಸಿದ್ದಯ್ಯ (65) ಮತ್ತು ಅವರ ಮಗ ಅರುಣ್ (28) ಮೃತರು. ಚನ್ನಪಟ್ಟಣ ತಾಲ್ಲೂಕಿನ ಕೋಟಮಾರನಹಳ್ಳಿಯ ಇವರು ಕೆಲಸದ ನಿಮಿತ್ತ ಚನ್ನಪಟ್ಟಣಕ್ಕೆ ಬೈಕ್‌ನಲ್ಲಿ ಬರುವಾಗ ಎದುರಿನಿಂದ ಬಂದ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ರಭಸಕ್ಕೆ ಅರುಣ್ ಸ್ಥಳದಲ್ಲೇ ಸಾವಿಗೀಡಾದರೆ, ಸಿದ್ದಯ್ಯ ಆಸ್ಪತ್ರೆಗೆ ಕರೆದೊಯ್ಯುವಾಗ ಕೊನೆಯುಸಿರೆಳೆದರು.

ಬೈಕ್‌ಗೆ ಡಿಕ್ಕಿ ಹೊಡೆದ ಬಸ್, ಕೆರೆ ಏರಿ ಬದಿ ಅಳವಡಿಸಿದ್ದ ತಡೆಗೋಡೆಗೆ ಡಿಕ್ಕಿ ಹೊಡೆದು ನಿಂತಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ. ಚನ್ನಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಂಗಳೂರು: ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಎ.ಜೆ. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ವಿದ್ಯಾರ್ಥಿನಿ ನಿಲಯದ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾಲೇಜಿನ ಎಂಬಿಬಿಎಸ್ ವಿದ್ಯಾರ್ಥಿನಿ ಪ್ರಕೃತಿ ಶೆಟ್ಟಿ (20) ಆತ್ಮಹತ್ಯೆ ಮಾಡಿಕೊಂಡವರು. ಸೋಮವಾರ ಮುಂಜಾನೆ 3 ಗಂಟೆ ಸುಮಾರಿಗೆ ಅವರು ಕಟ್ಟಡದ ಆರನೇ ಮಹಡಿಯಿಂದ ಕೆಳಗೆ ಜಿಗಿದಿದ್ದರು. ಅವರು ಪತ್ರವೊಂದನ್ನು ಬರೆದಿಟ್ಟಿದ್ದು, ಜೀವನದಲ್ಲಿ ಜುಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅದರಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರಕೃತಿ ಶೆಟ್ಟಿ ಅವರ ಪೋಷಕರು ಪ್ರಸ್ತುತ ಅಥಣಿಯಲ್ಲಿ ನೆಲೆಸಿದ್ದಾರೆ. ಅವರ ತಾಯಿ ಕಾರ್ಕಳದವರು' ಎಂದು ಅವರು ತಿಳಿಸಿದರು.

ಫೇಸ್‌ಬುಕ್‌ನಲ್ಲಿ ಲೋನ್ ನೀಡುವ ಜಾಹೀರಾತು

ತುಮಕೂರು: ರೈತನಿಗೆ ₹6 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯ ರೈತರೊಬ್ಬರು ಲೋನ್ ಆ್ಯಪ್ ಮೂಲಕ ವಂಚನೆಗೆ ಒಳಗಾಗಿ ₹6 ಲಕ್ಷ ಕಳೆದುಕೊಂಡಿದ್ದಾರೆ.

ಚಿಕ್ಕಪೇಟೆ ರೈತ ನಾಗರಾಜು ಫೇಸ್‌ಬುಕ್‌ನಲ್ಲಿ ಲೋನ್ ನೀಡುವ ಕುರಿತು ಜಾಹೀರಾತು ನೋಡಿದ್ದರು. ಜಾಹೀರಾತಿನಲ್ಲಿರುವ ಲಿಂಕ್ ಸಹಾಯದೊಂದಿಗೆ ಅಗತ್ಯ ದಾಖಲೆ ಸಲ್ಲಿಸಿ, ತಮ್ಮ ಪತ್ನಿ ಹೆಸರಿನಲ್ಲಿ ಲೋನ್ ಪಡೆದಿದ್ದರು. ಈ ವೇಳೆ ಪಾನ್‌ಕಾರ್ಡ್, ಆಧಾರ್‌ಕಾರ್ಡ್ ಸೇರಿದಂತೆ ಇತರ ದಾಖಲೆ ನೀಡಿದ್ದರು.

ಸೈಬರ್ ಕಳ್ಳರು ಜೂನ್ 1ರಂದು ನಾಗರಾಜು ಅವರ ಪತ್ನಿ ಖಾತೆಗೆ ₹22 ಸಾವಿರ ಲೋನ್ ಹಣ ಹಾಕಿದ್ದರು. ನಂತರ ದಿನಗಳಲ್ಲಿ ಬಡ್ಡಿ ಸಮೇತ ₹38 ಸಾವಿರ ಹಣ ಹಿಂದಿರುಗಿಸುವಂತೆ ವಾಟ್ಸ್ ಆ್ಯಪ್ ಮೂಲಕ ತಿಳಿಸಿದ್ದರು. ಇದರಂತೆ ಹಣ ವಾಪಸ್ ನೀಡಲಾಗಿತ್ತು. ಇದರ ಮಧ್ಯೆ ಸೈಬರ್ ಕಳ್ಳರು ನಾಗರಾಜು ಅವರ ಪತ್ನಿ ಮೊಬೈಲ್ ಹ್ಯಾಕ್ ಮಾಡಿ ಗ್ಯಾಲರಿಯಲ್ಲಿನ ಫೋಟೊಗಳನ್ನು ಪಡೆದಿದ್ದಾರೆ.



ಮೊಬೈಲ್‌ನಿಂದ ಫೋಟೊ ಪಡೆದು, ಅವುಗಳನ್ನು ಎಡಿಟ್ ಮಾಡಿ ಸಾಮಾಜಿಕ ಜಾಲ ತಾಣಗಳಲ್ಲಿ ಹರಿ ಬಿಡುವುದಾಗಿ ಭಯ ಹುಟ್ಟಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಹೆದರಿದ ನಾಗರಾಜು, ಜೂನ್ 3ರಿಂದ ನ.7ರವರೆಗೆ ಒಟ್ಟು ₹6,08,196 ಸೈಬರ್ ಕಳ್ಳರು ಹೇಳಿದ ವಿವಿಧ ಯುಪಿಐ ಐಡಿಗಳಿಗೆ ವರ್ಗಾವಣೆ ಮಾಡಿದ್ದಾರೆ. ತಮ್ಮ ಬಳಿ ಇದ್ದ ಎಲ್ಲ ಹಣ ಕಳೆದುಕೊಂಡ ನಂತರ ಠಾಣೆ ಮೆಟ್ಟಿಲು ಹತ್ತಿದ್ದಾರೆ. 'ಮೋಸ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ' ಒತ್ತಾಯಿಸಿ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

ಕೆಲಸದ ಆಮಿಷ: ₹4 ಲಕ್ಷ ವಂಚನೆ

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಪಾರ್ಟ್ ಟೈಮ್ ಕೆಲಸದ ಆಸೆಗೆ ಬಿದ್ದು ಇಬ್ಬರು ಮಹಿಳೆಯರು ₹4,43,300 ಕಳೆದುಕೊಂಡಿದ್ದಾರೆ.

ಮಹಾಲಕ್ಷ್ಮಿ ಬಡಾವಣೆ ನಿವಾಸಿ ಲಲಿತಾ ಎಂಬುವರನ್ನು ವಾಟ್ಸ್ ಆ್ಯಪ್ ಮುಖಾಂತರ ಸಂಪರ್ಕ ಬೆಳೆಸಿದ ಕಳ್ಳರು, ಪಾರ್ಟ್ ಟೈಮ್ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾರೆ. ನಂತರ ಕೆಲವು ಟಾಸ್ಕ್‌ಗಳನ್ನು ನೀಡಿ ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ. ಹೆಚ್ಚಿನ ಬಂಡವಾಳ ಹೂಡಿಕೆ ಮಾಡಿದರೆ ಮತ್ತಷ್ಟು ಹಣ ಗಳಿಸಬಹುದು ಎಂದು ಆಸೆ ಹುಟ್ಟಿಸಿದ್ದಾರೆ. ನಂತರ ಲಲಿತಾ ಅವರು, ಸೆ.13ರಿಂದ 20ರವರೆಗೆ ಹಂತ ಹಂತವಾಗಿ ₹3,44,800 ಹಣ ಸೈಬರ್ ಕಳ್ಳರ ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ. ಇದರಲ್ಲಿ ಕೇವಲ ₹1,500 ಮಾತ್ರ ವಾಪಸ್ ಆಗಿದೆ. ಪೂರ್ತಿ ಹಣ ವಾಪಸ್ ಕೊಡಿಸುವಂತೆ ಒತ್ತಾಯಿಸಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಗರದ ಸಪ್ತಗಿರಿ ಬಡಾವಣೆ ವಿ.ಕಾವ್ಯಾಶ್ರೀ ಎಂಬುವರು ಇದೇ ರೀತಿಯಾಗಿ ನ.7ರಂದು ₹80 ಸಾವಿರ ವಿವಿಧ ಟಾಸ್ಕ್‌ಗಳಿಗೆ ಹೂಡಿಕೆ ಮಾಡಿ ಹಣ ಕಳೆದುಕೊಂಡಿದ್ದಾರೆ.

ಭ್ರೂಣ ಲಿಂಗ ಪತ್ತೆ ಪ್ರಕರಣ: ವೈದ್ಯ ಸೇರಿ ಮೂವರ ಬಂಧನ

ಬೆಂಗಳೂರು: ಭ್ರೂಣ ಲಿಂಗ ಪತ್ತೆ ಪ್ರಕರಣದ ತನಿಖೆ ನಡೆಸುತ್ತಿರುವ ಬೈಯಪ್ಪನಹಳ್ಳಿ ಠಾಣೆ ಪೊಲೀಸರು, ಆರೋಪಿ ವೈದ್ಯ ಹಾಗೂ ಅವರ ಸಹಾಯಕರನ್ನು ಬಂಧಿಸಿದ್ದಾರೆ.

ಚೆನ್ನೈನ ವೈದ್ಯ ಡಾ. ತುಳಸಿರಾಮ್ (41), ಮೈಸೂರು ಉದಯಗಿರಿಯಲ್ಲಿರುವ ಮಾತಾ ಆಸ್ಪತ್ರೆ ವ್ಯವಸ್ಥಾಪಕರಾದ ಸಿ.ಎಂ. ಮೀನಾ (38) ಹಾಗೂ ಆಸ್ಪತ್ರೆಯ ಸ್ವಾಗತಗಾರ್ತಿ ರಿಜ್ಮಾ ಖಾನಂ (38) ಬಂಧಿತರು.

'ಅ. 15ರಂದು ಬೆಂಗಳೂರಿನಿಂದ ಮಂಡ್ಯಕ್ಕೆ ಗರ್ಭಿಣಿಯೊಬ್ಬರನ್ನು ಭ್ರೂಣ ಲಿಂಗ ಪತ್ತೆಗಾಗಿ ಕಾರಿನಲ್ಲಿ ಕರೆದೊಯ್ಯಲಾಗುತ್ತಿತ್ತು. ಕಾರು ನೋಡಿ ಅನುಮಾನಗೊಂಡಿದ್ದ ಪೊಲೀಸರು, ಬೆನ್ನಟ್ಟಿ ಕಾರು ನಿಲ್ಲಿಸಿದ್ದರು. ಕಾರಿನಲ್ಲಿದ್ದವರನ್ನು ವಿಚಾರಣೆ ನಡೆಸಿದಾಗ, ಭ್ರೂಣ ಲಿಂಗ ಪತ್ತೆ ಜಾಲದ ಮಾಹಿತಿ ಲಭ್ಯವಾಗಿತ್ತು' ಎಂದು ಪೊಲೀಸರು ಹೇಳಿದರು.

'ವೈದ್ಯನ ಸಂಬಂಧಿಯೂ ಆಗಿದ್ದ ವೀರೇಶ್, ನವೀನ್‌ಕುಮಾರ್, ಶಿವಲಿಂಗೇಗೌಡ ಹಾಗೂ ನಯನ್ ಕುಮಾರ್‌ನನ್ನು ಆರಂಭದಲ್ಲಿ ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಿ ಇದೀಗ ಮತ್ತೆ ಮೂವರನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

3 ವರ್ಷಗಳಿಂದ ಕೃತ್ಯ: 'ಬಂಧಿತ ವೈದ್ಯ ತುಳಸಿರಾಮ್ ಹಾಗೂ ಇತರರು, ಮೂರು ವರ್ಷಗಳಿಂದ ಭ್ರೂಣ ಲಿಂಗ ಪತ್ತೆ ಮತ್ತು ಗರ್ಭಪಾತ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮೈಸೂರಿನ ಮಾತಾ ಆಸ್ಪತ್ರೆ ಹಾಗೂ ರಾಜ್‌ಕುಮಾರ್ ರಸ್ತೆಯಲ್ಲಿರುವ ಆಯುರ್ವೇದಿಕ್ ಪೈಲ್ ಡೇ ಕೇರ್ ಕೇಂದ್ರದಲ್ಲಿ ಹಲವು ಗರ್ಭಿಣಿಯರಿಗೆ ಆರೋಪಿಗಳು ಗರ್ಭಪಾತ ಮಾಡಿದ್ದರೆಂದು ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದರು.

'ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನೊಬ್ಬ ಆರೋಪಿಯಾದ ಮೈಸೂರಿನ ವೈದ್ಯ ಡಾ. ಚಂದನ್ ಬಲ್ಲಾಳ್ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಹೇಳಿದರು.



ಸುಭಾಷಿತ

ನೀವು ಬೇರೆಯವರಿಗಾಗಿ ಹಚ್ಚುವ ಒಂದು ದೀಪವು ನಿಮ್ಮ ದಾರಿಗೂ ಬೆಳಕಾಗುತ್ತದೆ.

–ಗೌತಮ ಬುದ್ಧ

ಡೀಪ್‌ಫೇಕ್: ಕೃತಕ ಬುದ್ಧಿಮತ್ತೆ ಸೃಷ್ಟಿಸಿರುವ ಹೊಸ ಸವಾಲು

ಕೆಲವು ಖ್ಯಾತನಾಮರ ಡೀಪ್‌ಫೇಕ್ ವಿಡಿಯೊಗಳು ಈಚೆಗೆ ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಹರಿದಾಡಿದ ಸಂಗತಿಯು ಕೃತಕ ಬುದ್ಧಿಮತ್ತೆಯ (ಎ.ಐ) ದುರ್ಬಳಕೆಗೆ ಸಂಬಂಧಿಸಿದ ಕಳವಳ ಮತ್ತಷ್ಟು ಹೆಚ್ಚುವಂತೆ ಮಾಡಿದೆ. ದಕ್ಷಿಣ ಭಾರತದ ಜನಪ್ರಿಯ ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊವೊಂದನ್ನು ಕಳೆದ ವಾರ ಸಾಮಾಜಿಕ ಜಾಲತಾಣಗಳ ಮೂಲಕ ಹರಿಯಬಿಡಲಾಯಿತು. ಇದಾದ ನಂತರದಲ್ಲಿ ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರ ಡೀಪ್‌ಫೇಕ್ ಚಿತ್ರವೊಂದನ್ನು ಹಂಚಿಕೊಳ್ಳಲಾಯಿತು. ಎ.ಐ. ತಂತ್ರಜ್ಞಾನ ಬಳಸಿ ಸೃಷ್ಟಿಸಿದ ಹಾಗೂ ತಿರುಚಿದ ಇತರ ಕೆಲವು ಚಿತ್ರಗಳು ಕೂಡ ಇಂಟರ್ನೆಟ್ ಮೂಲಕ ಹರಿದಾಡಿವೆ. ಇಂತಹ ಚಿತ್ರಗಳು, ವಿಡಿಯೊಗಳನ್ನು ಕೃತಕವಾಗಿ ಸೃಷ್ಟಿಸಲಾಗುತ್ತದೆ. ಮೇಲ್ನೋಟಕ್ಕೆ ಇವು ನಿಜವಾದವು ಎಂದೇ ಅನಿಸುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಬಹಳ ಮುಂದುವರಿದಿರುವ ಎ.ಐ. ತಂತ್ರಜ್ಞಾನವನ್ನು ಬಳಸಿ ಈ ಬಗೆಯ ಚಿತ್ರಗಳು, ವಿಡಿಯೊಗಳನ್ನು ತಿರುಚುವ ಕೆಲಸ ನಡೆದುಬಂದಿದೆ. ತೀರಾ ಸೂಕ್ಷ್ಮವಾಗಿ ಗಮನಿಸಿದಾಗ, ಇವು ಸತ್ಯವಲ್ಲ ಎಂಬುದು ಗೊತ್ತಾಗುತ್ತದೆ. ತಂತ್ರಜ್ಞಾನವು ಇವುಗಳ ನಕಲಿತನವನ್ನು ಖಂಡಿತ ಗುರುತಿಸಬಲ್ಲದು. ಆದರೆ ಕೃತಕ ಬುದ್ಧಿಮತ್ತೆಯನ್ನು ಬಳಸಿ ಸೃಷ್ಟಿಸುವ ಕೆಲವು ಚಿತ್ರ, ವಿಡಿಯೊಗಳನ್ನು ಗುರುತಿಸುವಲ್ಲಿ ಅತ್ಯುತ್ತಮ ತಂತ್ರಜ್ಞಾನ ಕೂಡ ಹಲವು ಸಂದರ್ಭಗಳಲ್ಲಿ ಸೋಲುತ್ತದೆ.



ಸರ್ಕಾರಗಳು ಮಾತ್ರವಲ್ಲದೆ, ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳು ಎ.ಐ. ದುರ್ಬಳಕೆಯನ್ನು ತಡೆಯಲು ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು

ಡೀಪ್‌ಫೇಕ್ ಚಿತ್ರ, ವಿಡಿಯೊ ಸೃಷ್ಟಿಯು ಅತ್ಯಂತ ಅಪಾಯಕಾರಿ ಪರಿಣಾಮಗಳನ್ನು ಹೊಂದಿದೆ. ಇದು ವ್ಯಕ್ತಿಯ ಖಾಸಗಿತನವನ್ನು ಹಾಳುಗೆಡವಬಲ್ಲದು, ಸಮಾಜದಲ್ಲಿ ಸುಳ್ಳುಗಳನ್ನು ಹರಡಬಲ್ಲದು. ವ್ಯಕ್ತಿಯ ಹೆಸರು ಹಾಳುಮಾಡುವುದು ಮಾತ್ರವೇ ಅಲ್ಲದೆ, ಇದು ಸಮಾಜದಲ್ಲಿ ಹಾಗೂ ಕುಟುಂಬಗಳ ಮಟ್ಟದಲ್ಲಿ ಸಂಘರ್ಷ ಸೃಷ್ಟಿಯಾಗುವುದಕ್ಕೆ ಕಾರಣವಾಗಬಹುದು. ರಾಜಕೀಯದ ಮೇಲೆ ಪ್ರಭಾವ ಬೀರಬಹುದು ಹಾಗೂ ಅಪರಾಧಗಳಿಗೆ ದಾರಿ ಮಾಡಿಕೊಡಬಹುದು. ಚುನಾವಣೆಗಳ ಸಂದರ್ಭದಲ್ಲಿ ಇವನ್ನು ಪ್ರಚಾರಾಂದೋಲನದ ಅಸ್ತ್ರವನ್ನಾಗಿ ಬಳಸಿಕೊಳ್ಳಬಹುದು. ದೇಶಗಳ ಪ್ರಜಾತಾಂತ್ರಿಕ ಪ್ರಕ್ರಿಯೆ ಹಾಳುಮಾಡಲು ಇವುಗಳನ್ನು ಬಳಸಿಕೊಳ್ಳಬಹುದು. ಡೀಪ್‌ಫೇಕ್‌ಗಳನ್ನು ಬಹಳ ಸುಲಭವಾಗಿ ಸೃಷ್ಟಿಸುವ ಹಾಗೂ ಅಷ್ಟೇ ಸುಲಭವಾಗಿ ಹರಡುವ ಸಾಧ್ಯತೆಯು ಇವುಗಳಿಂದ ಉಂಟಾಗುವ ಅಪಾಯವನ್ನು ಇನ್ನಷ್ಟು ಹೆಚ್ಚು ಮಾಡುತ್ತದೆ. ಈಗ ಮಹಿಳೆಯರನ್ನು ಗುರಿಯಾಗಿಸಿಕೊಂಡು ಅಸಭ್ಯ ಚಿತ್ರಗಳು, ವಿಡಿಯೊಗಳನ್ನು ಸೃಷ್ಟಿಸುವ ಕೆಲಸ ಹೆಚ್ಚು ನಡೆಯುತ್ತಿದೆಯಾದರೂ ಮುಂದೆ ಡೀಪ್‌ಫೇಕ್ ಎಲ್ಲ ಕ್ಷೇತ್ರಗಳಿಗೂ ಚಾಚಿಕೊಳ್ಳಬಹುದು. ಡೀಪ್‌ಫೇಕ್ ಬಳಕೆಯಲ್ಲಿ ಅಪಾಯಕ್ಕೆ ಈಡಾಗುವ ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ ಆರನೆಯ ಸ್ಥಾನವಿದೆ. ಡೀಪ್‌ಫೇಕ್ ವಸ್ತು–ವಿಷಯಗಳನ್ನು ದೂರು ಸ್ವೀಕರಿಸಿದ 24 ಗಂಟೆಗಳಲ್ಲಿ ತೆಗೆದುಹಾಕಬೇಕು ಎಂದು ಕೇಂದ್ರ ಸರ್ಕಾರವು ಸಾಮಾಜಿಕ ಜಾಲತಾಣ ಕಂಪನಿಗಳಿಗೆ ಸೂಚನೆ ನೀಡಿದೆ. ಇಂತಹ ಚಿತ್ರ, ವಿಡಿಯೊಗಳಿಂದ ತೊಂದರೆಗೆ ಒಳಗಾದವರು ತಕ್ಷಣವೇ ದೂರು ಸಲ್ಲಿಸಬೇಕು ಎಂದು ಕೂಡ ಹೇಳಿದೆ. ಡೀಪ್‌ಫೇಕ್‌ಗಳಿಂದ ಸೃಷ್ಟಿಯಾಗುವ ಸಮಸ್ಯೆಗಳನ್ನು ನಿಭಾಯಿಸಲು ಮಾಹಿತಿ ತಂತ್ರಜ್ಞಾನ ಕಾಯ್ದೆಯಲ್ಲಿ ಅಗತ್ಯ ಸೆಕ್ಷನ್‌ಗಳು ಇವೆ. ಆದರೆ ಲಭ್ಯವಿರುವ ಕಾನೂನು ಕ್ರಮಗಳು ಡೀಪ್‌ಫೇಕ್‌ಗಳಿಂದ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ಇದೆ.

ಬ್ರಿಟನ್ನಿನಲ್ಲಿ ಈಚೆಗೆ ನಡೆದ ಮೊದಲ ಎ.ಐ. ಶೃಂಗದಲ್ಲಿ ಈ ಕಳವಳಗಳನ್ನು ಗುರುತಿಸಲಾಗಿದೆ. ಈ ಶೃಂಗದಲ್ಲಿ ಅಮೆರಿಕ, ಬ್ರಿಟನ್, ಫ್ರಾನ್ಸ್, ಚೀನಾ, ಜಪಾನ್ ಮತ್ತು ಭಾರತ ಸೇರಿದಂತೆ 28 ದೇಶಗಳು ಪಾಲ್ಗೊಂಡಿದ್ದವು. 'ವಸ್ತು–ವಿಷಯಗಳನ್ನು ತಿರುಚುವ ಹಾಗೂ ವಂಚಿಸುವ ಸಾಮರ್ಥ್ಯದ ವಸ್ತು–ವಿಷಯಗಳನ್ನು ಸೃಷ್ಟಿಸುವ ಶಕ್ತಿಯಿಂದ ಉಂಟಾಗುವ ಅಪಾಯ'ಗಳನ್ನು ಈ ಶೃಂಗದ ಘೋಷಣೆಯಲ್ಲಿ ಉಲ್ಲೇಖಿಸಲಾಗಿದೆ. ಎ.ಐ.ನಿಂದ ಎದುರಾಗುವ ಅಪಾಯಗಳನ್ನು ನಿಗ್ರಹಿಸಲು ಜಾಗತಿಕ ಮಟ್ಟದಲ್ಲಿ ಕೆಲಸ ಆಗಬೇಕು ಎಂದು ಕೂಡ ಹೇಳಿದೆ. ಆದರೆ, ಬೇರೆ ಬೇರೆ ದೇಶಗಳು ಬೇರೆ ಬೇರೆ ಕಾರ್ಯತಂತ್ರದ ಮೊರೆ ಹೋಗಿರುವ ಕಾರಣ, ಅಪಾಯವನ್ನು ನಿಭಾಯಿಸುವುದು ಹೇಗೆ ಎಂಬ ವಿಚಾರದಲ್ಲಿ ಒಮ್ಮತ ಮೂಡಿಲ್ಲ. ಸರ್ಕಾರಗಳು ಮಾತ್ರವಲ್ಲದೆ, ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳು ಎ.ಐ. ದುರ್ಬಳಕೆಯನ್ನು ತಡೆಯಲು ಒಂದಿಷ್ಟು ಕ್ರಮಗಳನ್ನು ಕೈಗೊಳ್ಳಬೇಕು.

ದಿನದ ಟ್ವೀಟ್

ಹೀಗಿದೆ ನಮ್ಮ ಆಹಾರಪದ್ಧತಿ!



ನಿಂಬೆಹಣ್ಣಿನ ಕೃತಕ ಪರಿಮಳದ ಪಾನೀಯ ಸಿಕ್ಕಾಗ ಅದನ್ನು ಕುಡಿಯಲು ನಾವು ಇಚ್ಛಿಸುತ್ತೇವೆ, ಅದೇ ನಿಜವಾದ ನಿಂಬೆಹಣ್ಣು ನೀರಿನೊಂದಿಗೆ ಬಂದರೆ, ನಾವು ಅದನ್ನು 'ಫಿಂಗರ್ ಬೌಲ್' ಆಗಿ ಬಳಸುತ್ತೇವೆ. ಅಂತಹ ಕಾಲದಲ್ಲಿ ನಾವಿದ್ದೇವೆ.

ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ



ಗ್ಯಾರಂಟಿ ಯೋಜನೆಯನ್ನು ರಾಜ್ಯದ ಬಡಜನರನ್ನು ಗುರಿಯಾಗಿಸಿಕೊಂಡು ರೂಪಿಸಲಾಗಿದೆ. ಅದು ಶ್ರೀಮಂತರು ಇಲ್ಲವೇ ಉದ್ಯಮಿಗಳಿಗೆ ನೆರವಾಗುವ ತೆರಿಗೆ ವಿನಾಯಿತಿಯೂ ಅಲ್ಲ, ಅವರ ಸಾಲಮನ್ನಾ ಮಾಡುವ ಯೋಜನೆಯೂ ಅಲ್ಲ. ವಂಚಕ ಉದ್ಯಮಿಗಳಿಗೆ ನೆರವಾಗಲು ಜನರ ತೆರಿಗೆ ಹಣವನ್ನು ದುರ್ಬಳಕೆ ಮಾಡುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಸೊಲ್ಲೆತ್ತಲಾಗದ ಎಚ್.ಡಿ.ಕುಮಾರಸ್ವಾಮಿ ಅವರು ಮೂರು ಹೊತ್ತೂ ಗ್ಯಾರಂಟಿ ಯೋಜನೆಗಳ ಚುಂಗು ಹಿಡಿದು ಜಗ್ಗಾಡುತ್ತಿದ್ದಾರೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 14-11-1998

• ಜನತಾದಳ ಬಿಕ್ಕಟ್ಟು ಇತ್ಯರ್ಥಕ್ಕೆ ಶರದ್‌ಗೆ ಸಂಪೂರ್ಣ ಅಧಿಕಾರ

ಬೆಂಗಳೂರು, ನ. 13– ರಾಜ್ಯ ಜನತಾದಳದಲ್ಲಿ ಉದ್ಭವಿಸಿರುವ ಬಿಕ್ಕಟ್ಟನ್ನು ಬಗೆಹರಿಸುವ ಸಂಬಂಧದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರಿಗೆ ನೀಡಲು ಇಂದು ಇಲ್ಲಿ ನಡೆದ ಜನತಾದಳ ಶಾಸಕಾಂಗ ಪಕ್ಷದ ಸಭೆ ಸರ್ವಾನುಮತದಿಂದ ನಿರ್ಧರಿಸಿತು.

ತೆರೆಮರೆ ಸಂಧಾನ: 'ತೆರೆಮರೆಯಲ್ಲಿ ನಡೆದ ಸತತ ಸಂಧಾನದಿಂದಾಗಿ, ಶಾಸಕಾಂಗ ಪಕ್ಷದ ಸಭೆಯಲ್ಲಿ ಯಾವುದೇ ರೀತಿಯ 'ಅಹಿತಕರ' ರಾಜಕೀಯ ಘಟನಾವಳಿಗಳು ಸಂಭವಿಸಲಿಲ್ಲ. ಅಲ್ಲದೆ ಎಲ್ಲರಿಗೂ ಅಚ್ಚರಿ ಮೂಡಿಸುವ ರೀತಿಯಲ್ಲಿ ಕೊನೆಯ ಕ್ಷಣದಲ್ಲಿ ಮೂಡಿ ಬಂದ ರಾಜಿ ಸೂತ್ರ ಎರಡು ಬಣಗಳಿಗೂ ಸ್ವೀಕೃತವಾಯಿತು.

ಪಕ್ಷದ ಹಿರಿಯ ಮುಖಂಡರಾದ ಎಚ್.ಡಿ.ದೇವೇಗೌಡ ಮತ್ತು ಎಸ್.ಆರ್. ಬೊಮ್ಮಾಯಿ ಅವರು ನಗರದ ಹೊರವಲಯದಲ್ಲಿರುವ 'ರೆಸಾರ್ಟ್'ವೊಂದರಲ್ಲಿ ಗುರುವಾರ ಸಂಜೆ ಉಪಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಸಚಿವರಾದ ಎಂ.ಪಿ.ಪ್ರಕಾಶ್, ಸಿ.ಬೈರೇಗೌಡ, ಪಿ.ಜಿ.ಆರ್. ಸಿಂಧ್ಯ, ಡಿ.ಮಂಜುನಾಥ್, ಬಿ.ಎ.ಮೊಯಿದ್ದೀನ್, ಎಂ.ಸಿ.ನಾಣಯ್ಯ, ವಿಧಾನಸಭೆಯ ಅಧ್ಯಕ್ಷ ರಮೇಶ್‌ಕುಮಾರ್ ಮತ್ತು ಪ್ರದೇಶ ಜನತಾದಳದ ಅಧ್ಯಕ್ಷ ಬಿ.ಎಲ್.ಶಂಕರ್ ಅವರೊಂದಿಗೆ ಸುಮಾರು ನಾಲ್ಕು ಗಂಟೆ ಸಮಾಲೋಚಿಸಿ ರಾಜಿಸೂತ್ರ ಒಂದನ್ನು ಕಂಡುಹಿಡಿಯುವ ಮೂಲಕ ಸಂಧಾನಕ್ಕೆ ಸೂಕ್ತವಾದ ಭೂಮಿಕೆಯನ್ನು ಸಿದ್ಧಪಡಿಸಿದ್ದರು.

50 ವರ್ಷಗಳ ಹಿಂದೆ

ಬುಧವಾರ, 14-11-1973

• 74ರ ಅಂತ್ಯದಲ್ಲಿ ಹಾವನೂರ್ ಆಯೋಗ ವರದಿ ಸಲ್ಲಿಕೆ?

ಮದರಾಸ್, ನ. 13 – ಕರ್ನಾಟಕ ಸರ್ಕಾರವು ರಚಿಸಿರುವ ಹಿಂದುಳಿದ ವರ್ಗಗಳ ಆಯೋಗವು ತನ್ನ ವ್ಯಾಪಕ ವರದಿಯನ್ನು ಸರ್ಕಾರಕ್ಕೆ 1974ರ ಕೊನೆಯಲ್ಲಿ ಸಲ್ಲಿಸುವುದೆಂದು ಆಯೋಗದ ಇಬ್ಬರು ಸದಸ್ಯರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಸದಸ್ಯರಾದ ವೈ.ರಾಮಚಂದ್ರ ಮತ್ತು ಕೆ.ಆರ್.ಎಸ್.ನಾಯ್ಡು ಅವರು ತಮಿಳುನಾಡಿನಲ್ಲಿರುವ ಹಿಂದುಳಿದ ವರ್ಗಗಳ ಸ್ಥಿತಿಗತಿ ಹಾಗೂ ಈ ವರ್ಗಗಳ ಅಭಿವೃದ್ಧಿ ಬಗ್ಗೆ ರಾಜ್ಯ ಸರ್ಕಾರದ ಕ್ರಮ ಕುರಿತು ಅಧ್ಯಯನ ಮಾಡಲು ಇಲ್ಲಿಗೆ ಆಗಮಿಸಿದ್ದಾರೆ. ಈ ಸದಸ್ಯರು ರಾಜ್ಯ ಹಿಂದುಳಿದ ವರ್ಗಗಳ ಖಾತೆ ಸಚಿವ ನಟರಾಜನ್ ಅವರನ್ನು ಇಂದು ಭೇಟಿಯಾಗಿದ್ದರು.

• ವ್ಯಕ್ತಿಪೂಜೆಗೆ ಇಂದಿರಾ ವಿರೋಧವಿಲ್ಲ


ನವದೆಹಲಿ, ನ. 13– ದೇಶದಲ್ಲಿ ಹೆಚ್ಚಿನ ಸಮಗ್ರತೆ ಮತ್ತು ಸಂಘಟನೆ ಸಾಧಿಸಲು ಸಹಾಯಕವಾಗುವುದಾದಲ್ಲಿ ಆಡಳಿತ ಪಕ್ಷ ವ್ಯಕ್ತಿಪೂಜೆಯ ಲಾಭ ಪಡೆದುಕೊಳ್ಳಬಹುದು ಎಂಬುದು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ನಂಬಿಕೆ.

ಇಲ್ಲಿನ 'ಪೇಟ್ರಿಯಟ್' ದಿನಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಇಂದಿರಾ ಗಾಂಧಿಯವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ವಿಶ್ವದಲ್ಲಿ ಧ್ರುವ ನಕ್ಷತ್ರವನ್ನು ಹಾಗೂ ಅದರಿಂದ ಈ ರೀತಿಯ ಲಾಭ ಪಡೆದುಕೊಳ್ಳುವುದನ್ನು ತಿರಸ್ಕರಿಸುವಂಥ ಪಕ್ಷ ಯಾವುದೂ ಇಲ್ಲ' ಎಂದು ಅವರು ಹೇಳಿದ್ದಾರೆ.

ಹೊಸ ಅವಕಾಶಗಳು ವಿಪುಲವಾಗಿರುವಂತೆ ಅಸಂಖ್ಯ ಸವಾಲುಗಳೂ ಇವೆ

ಚಿಪ್ ಉದ್ಯಮದತ್ತ ಭಾರತದ ಚಿತ್ತ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ನಾವು ಇಂದು ವ್ಯಾಪಕವಾಗಿ ಬಳಸುತ್ತಿರುವ ಸ್ಮಾರ್ಟ್ ಫೋನ್‌ಗಳಿಂದ ಹಿಡಿದು, ಸರ್ವ ಸಮಸ್ತ ಎಲೆಕ್ಟ್ರಾನಿಕ್ ಉಪಕರಣಗಳು, ಡಿಜಿಟಲ್ ಸಾಧನಗಳು, ವಾಹನಗಳು, ಕೃತಕ ಉಪಗ್ರಹಗಳು, ಅತ್ಯಾಧುನಿಕ ಯುದ್ಧನೌಕೆ, ವಿಮಾನ, ಕ್ಷಿಪಣಿ, ಶಸ್ತ್ರಾಸ್ತ್ರದಂತಹವುಗಳ ಅತಿಮುಖ್ಯ, ಅವಿಭಾಜ್ಯ ಅಂಗವೆಂದರೆ ಅರೆವಾಹಕ ಚಿಪ್‌ಗಳು (ಸೆಮಿಕಂಡಕ್ಟರ್ ಚಿಪ್ಸ್). ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದಷ್ಟೇ ಮಹತ್ವವಿರುವ ಚಿಪ್‌ಗಳು ಅಂತರರಾಷ್ಟ್ರೀಯ ರಾಜಕೀಯ ಪೈಪೋಟಿ, ಸೆಣಸಾಟಗಳ ಅತಿ ಪ್ರಬಲ ಅಸ್ತ್ರವೂ ಹೌದು.

ಜಗತ್ತಿನ ವಿವಿಧ ರಾಷ್ಟ್ರಗಳ ಸೆಮಿಕಂಡಕ್ಟರ್ ಚಿಪ್‌ಗಳ ಬೇಡಿಕೆಯ ಶೇ 60ರಷ್ಟನ್ನು ಮತ್ತು ಅತ್ಯಾಧುನಿಕ ಚಿಪ್‌ಗಳ ಬೇಡಿಕೆಯ ಶೇ 90ರಷ್ಟನ್ನು ತೈವಾನ್ ಪೂರೈಸುತ್ತಿದೆ. ಅಮೆರಿಕದ ಬೇಡಿಕೆಯ ಶೇ 92ರಷ್ಟು, ಚೀನಾದ ಬೇಡಿಕೆಯ ಶೇ 84ರಷ್ಟು ಪೂರೈಕೆಯಾಗುವುದೂ ಅಲ್ಲಿಂದಲೇ. ಇಂತಹ ಪರಿಸ್ಥಿತಿಯಲ್ಲಿ, ತೈವಾನ್ ತನ್ನ ದೇಶದ ಭಾಗವೆಂದು ಮೊದಲಿನಿಂದಲೂ ಸಾರುತ್ತಾ ಬಂದಿರುವ ಚೀನಾ ಅದನ್ನು ವಶಪಡಿಸಿಕೊಂಡರೆ, ಜಾಗತಿಕ ಅರ್ಥವ್ಯವಸ್ಥೆ ಕುಸಿದು, ಭಾರತವೂ ಸೇರಿದಂತೆ ಅರೆವಾಹಕ ಚಿಪ್‌ಗಳಿಗಾಗಿ ತೈವಾನ್ ಮೇಲೆ ಅವಲಂಬಿತವಾಗಿರುವ ಎಲ್ಲ ದೇಶಗಳ ವಿವಿಧ ಉದ್ಯಮಗಳು ಅಕ್ಷರಶಃ ನೆಲ ಕಚ್ಚುತ್ತವೆ. ಇಂತಹ ಸಂಭವನೀಯ ಅಪಾಯದಿಂದ ಪಾರಾಗಲು ಚಿಪ್‌ಗಳ ಉತ್ಪಾದನೆಯನ್ನು ಭಾರತ, ಥಾಯ್ಲೆಂಡ್, ವಿಯೆಟ್ನಾಂ, ಫಿಲಿಪ್ಪೀನ್ಸ್ ಮುಂತಾದ ದೇಶಗಳಿಗೆ ವರ್ಗಾಯಿಸುವ ಪ್ರಯತ್ನ ಪ್ರಾರಂಭವಾಗಿದೆ. ಅದಕ್ಕಿಂತ ಮುಖ್ಯವಾಗಿ, ನಮ್ಮ ದೇಶವನ್ನು ಚಿಪ್‌ಗಳ ಉತ್ಪಾದನೆಯ ಪ್ರಮುಖ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ಪ್ರಯತ್ನಗಳು ಪ್ರಾರಂಭವಾಗಿವೆ.


'ತೈವಾನ್ ಸೆಮಿಕಂಡಕ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ' (ಟಿಎಸ್‌ಎಂಸಿ) ಪ್ರಪಂಚದ ಅತಿದೊಡ್ಡ, ಅತ್ಯಾಧುನಿಕ ಚಿಪ್‌ಗಳನ್ನು ಉತ್ಪಾದಿಸುವ ಪ್ರತಿಷ್ಠಿತ ಸಂಸ್ಥೆ. ಇದು ಅಸ್ತಿತ್ವಕ್ಕೆ ಬಂದದ್ದು 1987ರಲ್ಲಿ. ಆದರೆ ಅದಕ್ಕಿಂತ ಮೂರು ವರ್ಷಗಳ ಮುಂಚೆಯೇ 1984ರಲ್ಲಿ ಪಂಜಾಬಿನ ಮೊಹಾಲಿಯಲ್ಲಿ 51 ಎಕರೆಗಳ ವಿಶಾಲ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ, ಸಾರ್ವಜನಿಕ ವಲಯದ 'ಸೆಮಿಕಂಡಕ್ಟರ್ ಲ್ಯಾಬೊರೇಟರಿ' (ಎಸ್‌ಸಿಎಲ್), ಸೀಮಿತ ಪ್ರಮಾಣದಲ್ಲಿ ಸೆಮಿಕಂಡಕ್ಟರ್ ಚಿಪ್‌ಗಳ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾರಂಭಿಸಿತ್ತು. ಆದರೆ 1989ರಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಈ ಸಂಸ್ಥೆಯ ಎಲ್ಲ ಸೌಲಭ್ಯಗಳೂ ಸಂಪೂರ್ಣವಾಗಿ ನಾಶವಾದವು.

ಬಹಳಷ್ಟು ಪ್ರಯತ್ನಗಳ ನಂತರ 1997ರಲ್ಲಿ ಎಸ್‌ಸಿಎಲ್ ಮತ್ತೊಮ್ಮೆ ಸಕ್ರಿಯವಾಯಿತು. 2010ರಲ್ಲಿ ಇಸ್ರೇಲ್‌ನ 'ಟವರ್ ಸೆಮಿಕಂಡಕ್ಟರ್' ಸಂಸ್ಥೆಯ ನೆರವಿನಿಂದ, 180 ನ್ಯಾನೊ ಮೀಟರ್ ಚಿಪ್‌ಗಳ ಉತ್ಪಾದನೆ ಪ್ರಾರಂಭವಾಯಿತು. ಈ ಚಿಪ್‌ಗಳನ್ನು ನಮ್ಮ ದೇಶದ ರಕ್ಷಣಾ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದ್ದರೂ ಒಟ್ಟಾರೆಯಾಗಿ ಸರ್ಕಾರದ ನಿರಾಸಕ್ತಿ, ಬಂಡವಾಳದ ಕೊರತೆ, ಸ್ಥಾವರ ಸಾಮರ್ಥ್ಯದ ಅತಿ ಕಡಿಮೆ ಬಳಕೆಯಂತಹ ಕಾರಣಗಳಿಂದಾಗಿ ಉತ್ಪಾದನೆ ಕುಂಟುತ್ತಾ ನಡೆದು, 2021– 22ರ ಸಾಲಿನಲ್ಲಿ ₹ 318 ಕೋಟಿ ನಷ್ಟ ಅನುಭವಿಸಿತು.

2020ಕ್ಕೆ ಮುಂಚೆ, ಸೆಮಿಕಂಡಕ್ಟರ್ ಚಿಪ್‌ಗಳ ಉತ್ಪಾದನಾ ವಲಯಕ್ಕೆ ನಮ್ಮ ದೇಶದಲ್ಲಿ ಅತಿ ಹೆಚ್ಚಿನ ಮಹತ್ವ ಇರಲಿಲ್ಲವೆಂಬುದು ತಜ್ಞರ ಅಭಿಪ್ರಾಯ. ಕೋವಿಡ್ ನಂತರ ಕಂಡುಬಂದ ಸೆಮಿಕಂಡಕ್ಟರ್ ಚಿಪ್‌ಗಳ ತೀವ್ರ ಕೊರತೆ ಮತ್ತು ಅವುಗಳ ಪೂರೈಕೆಗಾಗಿ ಸೀಮಿತ ಮೂಲಗಳ ಮೇಲಿನ ಅವಲಂಬನೆ ತರುವ ಅಪಾಯಗಳು ಸರ್ಕಾರವನ್ನು ಎಚ್ಚರಿಸಿದವು. 2021ರಲ್ಲಿ ಕೇಂದ್ರ ಸರ್ಕಾರವು ₹ 76,000 ಕೋಟಿ ಬಂಡವಾಳದ ವಿಶೇಷ 'ಸೆಮಿಕಂಡಕ್ಟರ್ ಮಿಷನ್' ಯೋಜನೆಯನ್ನು ಪ್ರಾರಂಭಿಸಿತು. ಅದರ ಮೊದಲ ಭಾಗವಾಗಿ, ₹ 16,500 ಕೋಟಿ ವೆಚ್ಚದಲ್ಲಿ ಮೊಹಾಲಿ ಲ್ಯಾಬೊರೇಟರಿಯ ಎಲ್ಲ ಸೌಲಭ್ಯಗಳನ್ನೂ ಉನ್ನತೀಕರಣಗೊಳಿಸಲಾಗುತ್ತಿದೆ.

ನಮ್ಮ ದೇಶದ ರಕ್ಷಣಾ ಮತ್ತು ಬಾಹ್ಯಾಕಾಶ ವಲಯಗಳಲ್ಲಿರುವ ಚಿಪ್‌ಗಳ ಒಟ್ಟು ಬೇಡಿಕೆಯಲ್ಲಿ ಶೇ 60ರಷ್ಟು, 180 ನ್ಯಾನೊ ಮೀಟರ್ ಚಿಪ್‌ಗಳಿಗಿದೆ. ಈ ಎಲ್ಲ ಬೇಡಿಕೆಯನ್ನೂ ಪೂರೈಸುವುದರ ಜೊತೆಗೆ ಹಂತ ಹಂತವಾಗಿ ಉತ್ಪಾದನಾ ಸಾಮರ್ಥ್ಯ ಮತ್ತು ಕೌಶಲಗಳನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ. ಈ ಯೋಜನೆಯ ಎರಡನೆಯ ಭಾಗವಾಗಿ, ಅಹಮದಾಬಾದ್ ಜಿಲ್ಲೆಯ ಸನಂದ್ ನಗರದ ಕೈಗಾರಿಕಾ ವಲಯದಲ್ಲಿ ಅಮೆರಿಕದ 'ಮೈಕ್ರಾನ್ ಟೆಕ್ನಾಲಜಿ' ಸಂಸ್ಥೆ ₹ 22,000 ಕೋಟಿ ಬಂಡವಾಳ ಹೂಡಿ, ಮೊಬೈಲ್, ಲ್ಯಾಪ್‌ಟಾಪ್, ಸರ್ವರ್ಸ್, ವಿದ್ಯುತ್ ವಾಹನಗಳು, ದೂರಸಂಪರ್ಕ ಮತ್ತು ರಕ್ಷಣಾ ಉಪಕರಣಗಳಿಗೆ ಬೇಕಾದ ಅತ್ಯಾಧುನಿಕ ಚಿಪ್‌ಗಳನ್ನು ಉತ್ಪಾದಿಸಲಿದೆ. ಈ ಬಂಡವಾಳದ ಶೇ 50ರಷ್ಟು ಕೇಂದ್ರ ಸರ್ಕಾರ ಮತ್ತು ಶೇ 20ರಷ್ಟು ಗುಜರಾತ್ ಸರ್ಕಾರದಿಂದ ವಿಶೇಷ ಸಬ್ಸಿಡಿಯ ರೂಪದಲ್ಲಿ ದೊರೆಯಲಿದ್ದು, 2024ರ ಡಿಸೆಂಬರ್ ವೇಳೆಗೆ ಉತ್ಪಾದನೆ ಪ್ರಾರಂಭವಾಗಲಿದೆ.

ಗಾಂಧಿನಗರದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ 'ಸೆಮಿಕಾನ್- 2023' ಸಮಾವೇಶದಲ್ಲಿ ಭಾಗವಹಿಸಿದ ಅಮೆರಿಕದ 'ಅಡ್ವಾನ್ಸ್ಡ್ ಮೈಕ್ರೊ ಡಿವೈಸಸ್' ಸಂಸ್ಥೆಯು ಮುಂದಿನ ಐದು ವರ್ಷಗಳಲ್ಲಿ 400 ದಶಲಕ್ಷ ಡಾಲರ್‌ಗಳ (ಅಂದಾಜು ₹ 3,329 ಕೋಟಿ) ಹೂಡಿಕೆ ಮಾಡಿ, ಬೆಂಗಳೂರಿನಲ್ಲಿ ಅತಿ ದೊಡ್ಡ ಸೆಮಿಕಂಡಕ್ಟರ್ ಚಿಪ್‌ಗಳ ವಿನ್ಯಾಸ, ಅಭಿವೃದ್ಧಿ ಮತ್ತು ಇನೊವೇಷನ್ ಕೇಂದ್ರವನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಇದರೊಂದಿಗೆ ರಾಜ್ಯ ಸರ್ಕಾರದ ಪ್ರಯತ್ನದ ಫಲವಾಗಿ ಅಮೆರಿಕದ 'ಅಪ್ಲೈಡ್ ಮೆಟೀರಿಯಲ್ಸ್' ಕಂಪನಿಯು ಮುಂದಿನ ನಾಲ್ಕು ವರ್ಷಗಳಲ್ಲಿ, ಬೆಂಗಳೂರಿನಲ್ಲಿ ಚಿಪ್‌ಗಳ ಉತ್ಪಾದನೆಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿಯ ಎಂಜಿನಿಯರಿಂಗ್ ಕೇಂದ್ರವನ್ನು ಪ್ರಾರಂಭಿಸುವುದಾಗಿ ಪ್ರಕಟಿಸಿದೆ.



ನಮ್ಮ ದೇಶದ ಮೊದಲ 'ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಸ್ಥಾವರ'ವು ಗುಜರಾತ್‌ನ ಧೊಲೇರಾ ವಿಶೇಷ ಹೂಡಿಕೆಯ ವಲಯದಲ್ಲಿ ಬರಲಿದೆ. ವೇದಾಂತ ಲಿಮಿಟೆಡ್ ಸ್ಥಾಪಿಸುತ್ತಿರುವ ಈ ಸ್ಥಾವರವು ಮುಂದಿನ ಎರಡೂವರೆ ವರ್ಷಗಳ ಒಳಗಾಗಿ, ಭಾರತದಲ್ಲಿಯೇ ವಿನ್ಯಾಸಗೊಂಡು ಉತ್ಪಾದನೆಯಾದ ಚಿಪ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ಸಂಸ್ಥೆ ತಿಳಿಸಿದೆ. ಚಿಪ್‌ಗಳ ವಿನ್ಯಾಸ ಮತ್ತು ಉತ್ಪಾದನೆ ಅತ್ಯಂತ ಸಂಕೀರ್ಣವಾದ, ಅಣುಗಳ ಮಟ್ಟದ ನಿಖರತೆ ಅಗತ್ಯವಿರುವ ಬಹು ಸವಾಲಿನ ಕೆಲಸ. ಅದಕ್ಕೆ ಬೇಕಾದ ಅತಿ ವಿಶಿಷ್ಟ ಕೌಶಲದ ಪರಿಣತರಾಗಲೀ ಅತ್ಯಾಧುನಿಕ ಯಂತ್ರೋಪಕರಣಗಳಾಗಲೀ ಸದ್ಯದಲ್ಲಿ ನಮ್ಮಲ್ಲಿ ಇಲ್ಲ. ತೈವಾನ್‌ನ ಟಿಎಸ್‌ಎಂಸಿ ಸಂಸ್ಥೆಯ ಸಂಸ್ಥಾಪಕ ಮಾರಿಸ್‌ಚಾಂಗ್, ಅಮೆರಿಕದ ಅರಿಜೋನಾದಲ್ಲಿ ಚಿಪ್ ಫ್ಯಾಬ್ರಿಕೇಷನ್ ಸ್ಥಾವರವನ್ನು ಸ್ಥಾಪಿಸಲು ಹಲವಾರು ವರ್ಷಗಳಿಂದ ಪ್ರಯತ್ನಿಸುತ್ತಿದ್ದರೂ ಸಂಪೂರ್ಣ ಯಶಸ್ಸು ದೊರೆತಿಲ್ಲ. ಚೀನಾದ ಕಥೆಯೂ ಹೆಚ್ಚುಕಡಿಮೆ ಇದೇ. ಈ ನಡುವೆ ವೇದಾಂತ ಜೊತೆಗೆ ಚಿಪ್ ಉತ್ಪಾದನೆಗೆ ಕೈಜೋಡಿಸಿದ್ದ ತೈವಾನ್‌ನ ಫಾಕ್ಸ್‌ಕಾನ್ ಸಂಸ್ಥೆಯು ಕಾರಣಾಂತರಗಳಿಂದ ಜಂಟಿ ಯೋಜನೆಯಿಂದ ಹಿಂದೆ ಸರಿದಿದ್ದು, ವೇದಾಂತ ಬೇರೆ ಮೂರು ತಾಂತ್ರಿಕ ಸಂಸ್ಥೆಗಳೊಡನೆ ಒಪ್ಪಂದಕ್ಕೆ ಮುಂದಾಗಿದೆ.

ಈ ಕಾರಣಗಳಿಂದಾಗಿ ಮುಂದಿನ ಎರಡು ವರ್ಷಗಳ ಒಳಗಾಗಿ, ನಮ್ಮ ದೇಶದಲ್ಲಿ ಅತ್ಯಾಧುನಿಕ ಸೆಮಿಕಂಡಕ್ಟರ್ ಚಿಪ್‌ಗಳ ವಿನ್ಯಾಸ ಮತ್ತು ಉತ್ಪಾದನೆ ಕಷ್ಟಸಾಧ್ಯ ಎಂಬುದು ಪರಿಣತರ ನಿಲುವು. ಪದಾರ್ಥ ವಿಜ್ಞಾನ (ಮೆಟೀರಿಯಲ್ ಸೈನ್ಸ್), ಸಿಸ್ಟಮ್-ಆನ್-ಚಿಪ್, ಸಿಸ್ಟಮ್ ಮಾಡೆಲಿಂಗ್, ವಿದ್ಯುತ್‌ಕಾಂತೀಯ ವಿಜ್ಞಾನ, ಪ್ಲಾಸ್ಮಾ ರಸಾಯನ ವಿಜ್ಞಾನ, ಮೈಕ್ರೊ ಎಲೆಕ್ಟ್ರಾನಿಕ್ಸ್, ಸಿಲಿಕಾನ್ ಸಂಸ್ಕರಣೆ, ಸ್ವಯಂಚಾಲಿತ ಯಂತ್ರೋಪಕರಣಗಳ ಕ್ಷೇತ್ರಗಳಲ್ಲಿ ತಂತ್ರಜ್ಞರು, ಎಂಜಿನಿಯರುಗಳು ಮತ್ತು ಇನ್ನಿತರ ಸಿಬ್ಬಂದಿಗೆ ವಿಶೇಷ ತರಬೇತಿ ಮತ್ತು ಕೌಶಲಾಭಿವೃದ್ಧಿ ತೀರಾ ಅಗತ್ಯ. ಈ ಸವಾಲುಗಳನ್ನು ಎದುರಿಸಲು ಪ್ರಾರಂಭದಲ್ಲಿ, ಪ್ರಪಂಚದ ಪ್ರತಿಷ್ಠಿತ ಚಿಪ್ ಉತ್ಪಾದನಾ ಸಂಸ್ಥೆಗಳಿಂದ 300 ಪರಿಣತರನ್ನು ಭಾರತಕ್ಕೆ ಕರೆತರುವ ಪ್ರಯತ್ನಗಳು ನಡೆದಿವೆ ಎಂದು 'ದಿ ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

ಭಾರತದ ಸೆಮಿಕಂಡಕ್ಟರ್ ಚಿಪ್ ಉದ್ಯಮ ಇಂದು ಭರವಸೆಯ ಬದಲಾವಣೆಗಳ ಹೊಸ್ತಿಲಲ್ಲಿದೆ. ವಿಪುಲವಾದ ಹೊಸ ಅವಕಾಶಗಳು ಇರುವಂತೆಯೇ ಅಸಂಖ್ಯ ಸವಾಲುಗಳೂ ಇವೆ. ಪರಮಾಣು ಶಕ್ತಿ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಸವಾಲು, ಸಂಕಷ್ಟಗಳನ್ನು ಎದುರಿಸುತ್ತಲೇ ಜಗತ್ತಿನ ಗಮನ ಸೆಳೆಯುವಂತಹ ಸಾಧನೆಗಳಿಗೆ ಕಾರಣವಾದ ರಾಜಕೀಯ ಇಚ್ಛಾಶಕ್ತಿ, ದೂರದೃಷ್ಟಿ, ಬದ್ಧತೆ, ನಾವೀನ್ಯವೇ ಚಿಪ್ ಉದ್ಯಮದಲ್ಲೂ ಕಂಡುಬರಬೇಕೆಂಬುದು ಪರಿಣತರ ನಿರೀಕ್ಷೆ.

ಚುರುಮುರಿ



ಕೆಸರು ಪಟಾಕಿ

• ಲಿಂಗರಾಜು ಡಿ.ಎಸ್.

'ಸಾ, ರಾಜ್ಯದೇಲಿ ಈಗ ಜಾತಿಗಣತಿ, ಡೆಲ್ಲೀಲಿ ಹೊಂಜಿನ ಕಾಟ ಶುರುವಾಗ್ಯದಲ್ಲ?' ಅಂತ ಚರ್ಚೆಯ ಸೊಡರು ಹಚ್ಚಿದೆ.

'ರಾಜಕೀಯದ ಪಂಟ್ರುಗಳು ಅವರ ಮನಸ್ಸಿಗೆ ಒಪ್ಪುವಂಗೆ ಪ್ರೀತಿಗಣತಿ ಮಾಡಿಕ್ಯಳುವಾಗ ನೀತಿನೇ ಮರೆತೋಯ್ತರೆ ಕನೋ! ನೀತಿ-ನಿಯತ್ತು ಬುಟ್ಟು ರಾಜ್ಯವ ಒಸೊಸೀನೇ ಮಾರಿಕ್ಯಂಡು ಬತ್ತವ್ರೆ' ತಮ್ಮ ವಿಚಾರಧಾರೆಯನ್ನ ಬಿಚ್ಚಿಟ್ಟರು.

'ಹೌದೇಳಿ, ಮೈಸೂರು ಸ್ಯಾಂಡಲ್ ಸೋಪ್ ಹಗರಣ ಹಂಗೇ ಕುಂತದಂತೆ. ಅದೆಷ್ಟು ಐನಾತಿಗಳು ಕೈತೊಕ್ಕಂಡ್ರೋ ಗೊತ್ತಾಯ್ತಿಲ್ಲ. ಈಗ ಪಾಟೀಲಣ್ಣ ಬಂದು 'ನಾನು ಶೋ-ಪಿನ ಬ್ರಾಂಡ್ ಮೌಲ್ಯ ಹೆಚ್ಚಿಸ್ತೀನಿ ಅಂದದೆ!' ಅಂತಂದ ಚಂದ್ರು.

'ಏನು ಹೆಚ್ಚಿಸ್ತದೋ ಕಾಣೆ. ಹಿಂದೆಲ್ಲಾ ಲಂಚ ತಗಂಡೋರು ಸಿಗಾಕ್ಯಂಡು ಜೈಲಿಗೋಗುವಾಗ ಮಕ ಮುಚ್ಚಿಗ್ಯಂಡು ಹೋಯ್ತಿದ್ರು. ಈಗ ಕೈ ಬೀಸ್ತಾ ಎರಡು ಬೆಳ್ಳು ತೋರಿಸಿಗ್ಯಂಡು, ಹಲ್ಲು ಕಿಸೀತಾ ಹೋಯ್ತರೆ ಅಂದ್ರೆ ಲಂಚದ ಪ್ರಭಾವ ಎಷ್ಟದೆ ಅಂತ ಗೊತ್ತಾಯ್ತದೆ' ಅಂದೆ ಸಿಟ್ಟಲ್ಲಿ.

'ಯಾವೋ ದಿಂಡುಕುಳಗಳು ಇರಬಕು ಕಾಬುಡ್ಲಾ' ಅಂದ್ರು ತುರೇಮಣೆ.

'ನಮ್ಮ ಜನ ಹಸಿರು ಪಟಾಕಿ ಹೊಡಕಂದು ಅಚ್ಚುಕಟ್ಟಾಗಿ ದೀಪಾವಳಿ ಅನ್ನದು ಬುಟ್ಟು 'ದಿವಾಳಿ, ದಿವಾಳಿ' ಅಂತ ಹೊಡಕತ್ತರಲ್ಲೋ' ಅಂತು ಮೊಬೈಲ್ ನೋಡ್ತಿದ್ದ ಯಂಟಪ್ಪಣ್ಣ.

'ಅಣೈ, ರಾಜಕೀಯದೋರು ಅವರ ತೆವಲಿಗೆ ಕೆಸರು ಪಟಾಕಿ ಹಾರಿಸಿಗ್ಯಂಡು ದಿವಾಳಿ ಮಾಡ್ತಾವ್ರೆ. ಜನ ಅದುನ್ನೇ ಅಂತಿರದು 'ದಿವಾಳಿ ಆಯ್ತಿದಿವಿ' ಅಂತ. ರಾಜಕಾರಣಿಗಳು ಏಳಿಸ್ತಿರೋ ಹೊಗೇಲಿ ಸತ್ಯ ಕೆಮ್ಮಿಕ್ಯಂಡು ಕಡೆದು ಹೊಂಟೋಗ್ಯದೆ. ಜನ ಮಾತ್ರ ದಿವಾಳಿ ಆಯ್ತಾ ಇರದು ಕಾಣ್ತಲೇ ಇಲ್ಲ' ಅಂತ ಗುರುಗುಟ್ಟಿದೆ.

'ಅಲ್ಲ ಸಾ, ಹಾಲಿನ ದರ ಮತ್ತೆ ಹೆಚ್ಚಿಸ್ತರಂತೆ? ಈರುಳ್ಳಿ, ತರಕಾರಿ, ಬ್ಯಾಳೆ-ಕಾಳು ರೇಟು ಗಗನದಲ್ಲದೆ. ಕೊರೋನವೇ ಪರವಾಗಿಲ್ಲ! ಒಂದೇ ಸಾರಿ ಬಡಿದು ಬಾಯಿಗೆ ಹಾಕ್ಯಂದು ಹೊಂಟೊಯ್ತಿತ್ತು. ಈಗ ಬದುಕು ಮಾಡದೇ ಕಷ್ಟಾಗ್ಯದೆ' ಅಂದ ಚಂದ್ರು.

'ದಿಟ ದಿಟ' ಅಂತ ಲೊಚಗುಟ್ಟಿತು ಯಂಟಪ್ಪಣ್ಣ.

ಸಂಗತ

ಜನಪರ ನಿಲುವು, ವೈಚಾರಿಕ ಸ್ಪಷ್ಟತೆ

ಜನಪರ ಚಳವಳಿ, ಚಿಂತನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು ಪ್ರೊ. ಕೆ.ಮರುಳಸಿದ್ದಪ್ಪ

• ಎಂ.ಎಸ್.ಆಶಾದೇವಿ

ಸಮಕಾಲೀನ ಕರ್ನಾಟಕದ ಬಹುಮುಖ್ಯ ಚಿಂತಕರು ಪ್ರೊ.ಕೆ.ಮರುಳಸಿದ್ದಪ್ಪ (ಕೆಎಂಎಸ್). ಪ್ರಸ್ತುತ ದಿನಮಾನಗಳಲ್ಲಿ ಚಿಂತಕರು ಎನ್ನುವ ಪದವನ್ನು ಬಳಸುವುದಕ್ಕೂ ಅನೇಕ ಬಾರಿ ಹಿಂಜರಿಕೆಯಾಗುತ್ತದೆ. ಕೆಎಂಎಸ್ ಅದರ ನಿಜಾರ್ಥದಲ್ಲಿ ವಚನ ಚಳವಳಿಯ ವಾರಸುದಾರರಲ್ಲಿ ಒಬ್ಬರು.

70–80ರ ದಶಕಗಳಿಂದಲೂ ರಾಜ್ಯದ ಎಲ್ಲ ಮುಖ್ಯ ಜನಪರ ಚಳವಳಿಗಳು ಹಾಗೂ ಚಿಂತನೆಗಳ ಸಕ್ರಿಯ ಭಾಗವಾಗಿ ಇರುವವರು ಕೆಎಂಎಸ್. ಬುದ್ಧಿಜೀವಿ ಎಂಬ ಪರಿಕಲ್ಪನೆಯ ಸಾಕಾರರೂಪದಂತಿದ್ದಾರೆ ಅವರು. ಬುದ್ಧಿಜೀವಿಗಳು ಅಂದರೆ ಅಸಾಧ್ಯವಾದುದು, ಅಪ್ರಾಯೋಗಿಕವಾದುದನ್ನು ಲೋಕಕ್ಕೆ ಮಾತ್ರ ಹೇಳಿ, ತಮ್ಮನ್ನು ಅದರಿಂದ ಹೊರತುಪಡಿಸಿಕೊಂಡಿರುವವರು ಎನ್ನುವ ಇತ್ತೀಚಿನ ಅಪವ್ಯಾಖ್ಯಾನಗಳನ್ನೆಲ್ಲ ಹೊಡೆದುಹಾಕಿದವರು. ಬುದ್ಧಿಜೀವಿಗಳೆಂದರೆ ಸಮಷ್ಟಿಯ ಹಿತವನ್ನೇ ಗುರಿಯಾಗಿಸಿಕೊಂಡವರು, ಸಮುದಾಯದ ಸಾಂಸ್ಥಿಕ ರಚನೆಗಳ ಆರಂಭದಿಂದಲೂ ಎಲ್ಲ ಬಗೆಯ ಅವಕಾಶಗಳಿಂದ ವಂಚಿತರಾದ ಜನರ ಪರವಾಗಿ ಕಾರ್ಯನಿರ್ವಹಿಸುತ್ತಿರುವವರ ಜೊತೆ ಕೈಜೋಡಿಸುತ್ತಾ ಹೋಗುವವರು ಎಂದು ನಿರೂಪಿಸಿದವರು.

ಬುದ್ಧಿ ಎನ್ನುವುದು ಯಾವಾಗಲೂ ನ್ಯಾಯ, ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಭಿನ್ನಾಭಿಪ್ರಾಯಗಳನ್ನು ಹೊಂದಿದ್ದೂ ಸಹಬಾಳ್ವೆಯಲ್ಲಿ ನಂಬಿಕೆಯಿಡುವ ಮೂಲಭೂತ ಜೀವನತತ್ವಗಳನ್ನು ಅನುಮೋದಿಸುವಂಥದ್ದು. ಬಹುತೇಕರು ಬುದ್ಧಿಯ ಈ ಅನುಮೋದನೆಯನ್ನು ಪಕ್ಕಕ್ಕೆ ಸರಿಸಿ, ಪಟ್ಟಭದ್ರಶಕ್ತಿಗಳಿಗೆ ಶರಣಾಗುವವರು. ಯಾರು ಬುದ್ಧಿಯ ಅನುಮೋದನೆಯನ್ನು ತಮ್ಮ ಸಾಕ್ಷಿಪ್ರಜ್ಞೆಯಾಗಿ ಬದುಕಿನುದ್ದಕ್ಕೂ ಉಳಿಸಿಕೊಳ್ಳಲು, ಅಳವಡಿಸಿಕೊಳ್ಳಲು ಯತ್ನಿಸುತ್ತಾರೋ ಅಂಥವರೇ ಬುದ್ಧಿಜೀವಿ ಎನ್ನುವುದಾದರೆ, ಕೆಎಂಎಸ್ ನಮ್ಮ ನಡುವಿರುವ ಅಪರೂಪದ ಬುದ್ಧಿಜೀವಿ. ಕೆಎಂಎಸ್ ಅವರನ್ನು ಮೊದಲ ಬಾರಿಗೆ ನೋಡಿದವರೆಲ್ಲರಿಗೂ ಸಾರ್ವಜನಿಕ ಸಂದರ್ಭಗಳಲ್ಲಿ ಅವರು ತೆಗೆದುಕೊಳ್ಳುವ ನಿಲುವಿಗೂ ಅವರ ಮೆಲುಮಾತಿನ ವ್ಯಕ್ತಿತ್ವಕ್ಕೂ ಎಲ್ಲಿಯದೆಲ್ಲಿಯ ಸಂಬಂಧ ಎನ್ನುವಷ್ಟು ಆಶ್ಚರ್ಯ ಹುಟ್ಟುತ್ತದೆ. ಆದರೆ, ಅವರ ಜೊತೆ ಮಾತನಾಡುತ್ತಾ ಹೋದ ಹಾಗೆ, ಆ ಮೆಲುಧ್ವನಿಯ ಹಿಂದಿರುವ ಅಚಲ ನಿಲುವು, ವಿಚಾರಗಳ ಸ್ಪಷ್ಟತೆ ನಮ್ಮನ್ನು ಸೆಳೆಯುತ್ತದೆ.

ಎರಡು ಸಂದರ್ಭಗಳಲ್ಲಿ ಕೆಎಂಎಸ್ ಅವರ ನಿಲುವುಗಳನ್ನು ಚರ್ಚಿಸಬಯಸುತ್ತೇನೆ. ಈ ಸಂದರ್ಭಗಳು ಕೆಎಂಎಸ್ ಅವರ ವ್ಯಕ್ತಿತ್ವವನ್ನು ಸರಿಯಾಗಿ ನಿರೂಪಿಸುತ್ತವೆ. ಮೊದಲನೆಯದು, ನನಗೆ ಜಿಎಸ್‌ಎಸ್ ಪ್ರಶಸ್ತಿ ದೊರೆತ ಸಂದರ್ಭ. ಅವರಿಗೆ ಫೋನ್ ಮಾಡಿದ ನಾನು, 'ಪ್ರಶಸ್ತಿಯ ಹಣವನ್ನು ಟ್ರಸ್ಟ್‌ಗೇ ವಾಪಸ್ ಕೊಡಲು ಬಯಸುತ್ತೇನೆ. ಪ್ರಶಸ್ತಿಯೇ ದೊಡ್ಡ ಗೌರವ. ಆ ಹಣ ಟ್ರಸ್ಟ್‌ಗೇ ವಾಪಸ್ ಹೋದರೆ ಉಪಯೋಗವಾಗಬಹುದು' ಎಂದೆ. ಒಂದು ಗಳಿಗೆಯೂ ಯೋಚಿಸದ ಕೆಎಂಎಸ್, 'ಟ್ರಸ್ಟ್‌ನಲ್ಲಿ ಹಣವಿದೆ. ನೀವು ವಾಪಸ್ ಕೊಡುವ ಅಗತ್ಯ ಇಲ್ಲ. ಆ ಹಣದ ಬಳಕೆಗೆ ನಿಮಗೆ ಯಾವುದು ಅತ್ಯಂತ ಉಪಯುಕ್ತವಾದ ಕ್ರಮ ಎನಿಸುತ್ತದೋ ಅದಕ್ಕೆ ಬಳಸಿ' ಎಂದು ಸ್ಪಷ್ಟವಾಗಿ ಹೇಳಿದರು. ಈ ಸಲಹೆ ಸಮಂಜಸ ಎನಿಸಿ ನಾನು ಅದನ್ನು ಪಾಲಿಸಿದೆ. ಕೆಎಂಎಸ್ ಹೆಚ್ಚು ತಲೆಕೆಡಿಸಿಕೊಳ್ಳದೆ, ಬೇಕಾದರೆ ಟ್ರಸ್ಟ್‌ಗೆ ವಾಪಸ್ ಕೊಡಿ ಎನ್ನುವ ಲೋಕಾಭಿರಾಮದ ಸಲಹೆಯನ್ನು ಕೊಡಬಹುದಿತ್ತು. ಆದರೆ ಅವರು ಅಂಥದ್ದಕ್ಕೆ ಅವಕಾಶ ಕೊಡಲಿಲ್ಲ.

ಮೇಷ್ಟ್ರು ಎಂ.ಎಂ.ಕಲಬುರ್ಗಿ ಮತ್ತು ಗೆಳತಿ ಗೌರಿಯ ಸಾವಿನ ಆಘಾತದಲ್ಲಿ ನಾವೆಲ್ಲರೂ ಇದ್ದಾಗ, ಸಭೆಯೊಂದರಲ್ಲಿ ಕೆಎಂಎಸ್ ಹೇಳಿದ ಮಾತು ಈಗಲೂ ಮುಖ್ಯವಾದುದೆಂದು ತೋರುತ್ತದೆ. 'ಕಲಬುರ್ಗಿ ಮತ್ತು ಗೌರಿ ಅವರ ಸಾವಿನ ಕುರಿತು ನಾವು ಸದಾ ದುಃಖಿತರಾಗಿ ಮಾತನಾಡಬಾರದು. ವ್ಯಕ್ತಿಗತವಾಗಿ ಅವರನ್ನು ಕಳೆದುಕೊಂಡ ದುಃಖವನ್ನು ಒಳಗಿಟ್ಟುಕೊಂಡು, ಅವರು ಬಲಿಯಾದ ಕಾರಣ ಮತ್ತು ಉದ್ದೇಶಗಳನ್ನು ಇನ್ನೂ ಹೆಚ್ಚು ಜನರಿಗೆ ಮುಟ್ಟಿಸುವ ಕೆಲಸವನ್ನು ನಾವು ಮಾಡಬೇಕು. ಪದೇಪದೇ ಅವುಗಳನ್ನು ಕೊಲೆ ಕೊಲೆ ಎಂದು ಹೇಳಬೇಡಿ. ಅವರನ್ನು ಹುತಾತ್ಮರು ಎಂದೇ ನಾವು ಸಂಬೋಧಿಸಬೇಕು' ಎಂದಿದ್ದರು. ಸಾರ್ವಜನಿಕ ಬದುಕಿನಲ್ಲಿ ನಾವು ತಳೆಯಬೇಕಾದ ನಿಲುವು, ಆಡಬೇಕಾದ, ಬಳಸಬೇಕಾದ ಭಾಷೆ ಎಷ್ಟು ಸೂಕ್ಷ್ಮದ್ದು ಮತ್ತು ಮಹತ್ವದ್ದು ಎನ್ನುವುದು ಈ ಪ್ರಸಂಗದಿಂದ ನಮಗೆ ತಿಳಿಯುತ್ತದೆ.



ಕೆಎಂಎಸ್ ಅವರದ್ದೊಂದು ಗೆಳೆಯರ ಗುಂಪು, ತಮ್ಮ ನಡುವೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೂ ಅಖಂಡವಾಗಿ ಉಳಿದುಬಂದಿದೆ. ಇವರ ಸಹೋದ್ಯೋಗಿಗಳು, ಸಮಕಾಲೀನರಲ್ಲಿ ಹಲವರು ಅಧಿಕಾರಸ್ಥರನ್ನು ಓಲೈಸಿಕೊಂಡು ಸುರಕ್ಷಿತ ಹಾದಿ ಹಿಡಿದವರು. ಅಂಥ ಬಹುಸಂಖ್ಯಾತರ ಜೊತೆಯಲ್ಲಿ ಅಲ್ಪಸಂಖ್ಯಾತರಾಗಿ ಈ ಗೆಳೆಯರು ಲೋಕನಿಷ್ಠುರದ ದಾರಿಯನ್ನು ಹಿಡಿದರು. ಉಳಿದವರು ಚರ್ಚೆ, ಸಭೆ, ಹೋರಾಟಗಳಲ್ಲಿ ಭಾಗವಹಿಸುವ ಯೋಚನೆಯನ್ನೂ ಮಾಡದಿದ್ದಾಗ, ಉದ್ಯೋಗದಲ್ಲಿದ್ದ ಸಂದರ್ಭದಲ್ಲೂ ಕೆಎಂಎಸ್ ನಿರ್ಭೀತಿಯಿಂದ ಆ ಸಭೆಗಳಲ್ಲಿ ಭಾಗವಹಿಸಿ ಜನಪರ ನಿಲುವುಗಳನ್ನು ಪ್ರಭುತ್ವದ ವಿರುದ್ಧ ತೆಗೆದುಕೊಳ್ಳಲು ಒಂದಿಷ್ಟೂ ಹಿಂದೆಮುಂದೆ ನೋಡಲಿಲ್ಲ.

ಬಹುಮತದ ಆಯ್ಕೆಯನ್ನು ಅವರು ಎತ್ತಿ ಹಿಡಿಯುತ್ತಾರೆಯೇ ವಿನಾ ವೈಯಕ್ತಿಕವಾದ ಆಯ್ಕೆಗಳನ್ನು ಎಂದೂ ಮುಂದಿಡುವುದಿಲ್ಲ. ಆಯ್ಕೆ ಪ್ರಕ್ರಿಯೆ ಪ್ರಜಾಸಾಂವಿಧಾನಿಕ ನೆಲೆಯಲ್ಲಿ ನಡೆಯುವಂತೆ ನೋಡಿಕೊಳ್ಳುವುದರಲ್ಲಿ ಅವರು ವಹಿಸುವ ಕಾಳಜಿ ಅತ್ಯುತ್ತಮ ಆಯ್ಕೆಯನ್ನು ಮಾಡಲು ಅನುವು ಮಾಡಿಕೊಡುತ್ತದೆ.

ಡಾ. ಕೆ.ಎಂ.ಎಸ್. ಅಭಿಮಾನಿಗಳ ಬಳಗವು ಪ್ರೊ. ಕೆ.ಮರುಳಸಿದ್ದಪ್ಪ ಅವರಿಗೆ ಬುಧವಾರ (ನ. 15) ಬೆಂಗಳೂರಿನಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಿದೆ. ಈ ಸಂದರ್ಭದಲ್ಲಿ ಸಮರ್ಪಣೆಯಾಗಲಿರುವ ಗೌರವ ಗ್ರಂಥದ ಲೇಖನವೊಂದರ ಆಯ್ದ ಭಾಗ

ವಾಚಕರ ವಾಣಿ

ಬೆಳಕಿನೆಡೆಗೆ ನಮ್ಮ ಪಯಣ...

'ದೀಪದಿಂದ ದೀಪವ ಹಚ್ಚಬೇಕು ಮಾನವ...' ಎಂಬ ಹಾಡು ಕೇಳುಗರ ಮನದಲ್ಲಿ ಅಚ್ಚಳಿಯದೇ ಉಳಿದಿದೆ. ದೀಪವನ್ನು ಬೆಳಗಿಸುವ ಮೂಲಕ, ನಮ್ಮಲ್ಲಿರುವ ಅಜ್ಞಾನದ ಅಂಧಕಾರದಿಂದ ಸುಜ್ಞಾನದ ಬೆಳಕಿನೆಡೆಗೆ ನಮ್ಮ ಪಯಣ ಸಾಗಬೇಕಿದೆ. ದೀಪಾವಳಿ ಎನ್ನುವುದು ಚಿಣ್ಣರ ಪಾಲಿನ ಸಂಭ್ರಮವೇ ಸರಿ. ಇಂತಹ ಸಂಭ್ರಮದ ದಿನವೊಂದು ಪಟಾಕಿಯ ಮೂಲಕ ಅವರ ಬಾಳಲ್ಲಿ ಕತ್ತಲೆಯನ್ನು ತರದಿರಲಿ.

ಪರಿಸರಸ್ನೇಹಿ ಪಟಾಕಿಯನ್ನು ಎಚ್ಚರಿಕೆಯಿಂದ ಹಚ್ಚಿ ಹಬ್ಬವನ್ನು ಸಂಭ್ರಮಿಸೋಣ. ಅತ್ತಿಬೆಲೆಯಲ್ಲಿ ನಡೆದಂತಹ ಪಟಾಕಿ ದುರಂತ ಬೇರೆ ಎಲ್ಲೂ ಮರುಕಳಿಸದಿರಲಿ. ಮಕ್ಕಳ ಕೈಗೆ ಅಪಾಯಕಾರಿಯಾದಂತಹ ಪಟಾಕಿಗಳನ್ನು ನೀಡದೆ, ಹಿರಿಯರ ಮುಂದಾಳತ್ವದಲ್ಲಿ ಅವರು ಪಟಾಕಿ ಹಚ್ಚಿ, ಖುಷಿಯ ಕ್ಷಣಗಳನ್ನು ಅನುಭವಿಸುವಂತಾಗಲಿ.

ಲಕ್ಷ್ಮೀ ಶಿವಣ್ಣ, ರಾಯಚೂರು

ಶ್ರೀಗಂಧದ ಮರ: ರೈತರಿಗೊಂದು ಸಲಹೆ

ಶ್ರೀಗಂಧದ ಕಳ್ಳಬೇಟೆಗಾರರ ವಿಷಜಾಲವನ್ನು ಹತ್ತಿಕ್ಕಬೇಕಿದೆ ಎಂದು ಎಂ.ಜಿ.ರಂಗಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ನ. 13). ಆದರೆ ಇದು ಸುಲಭದ ಕೆಲಸವಲ್ಲ. ಕಳ್ಳರಿಗೆ ರಾಜಕಾರಣಿಗಳು ಹಾಗೂ ಅಧಿಕಾರಿಶಾಹಿಯ ಸಂಪೂರ್ಣ ಬೆಂಬಲ ಇರುತ್ತದೆ. ಯಾವುದೇ ರೈತ ಶ್ರೀಗಂಧ, ರಕ್ತಚಂದನ ಬೆಳೆದರೆ ಅವು ಬಹುಪಾಲು ಕಳ್ಳರ ಪಾಲಾಗುತ್ತವೆ. ಪೊಲೀಸ್, ಅರಣ್ಯ ಇಲಾಖೆಯ ಗಮನಕ್ಕೆ ತಂದರೆ, ಗಂಧದ ಮರಗಳಿಗೆ ರಕ್ಷಣೆ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಶಸ್ತ್ರಸಜ್ಜಿತ ಕಳ್ಳರನ್ನು ಯಾವುದೇ ಶಸ್ತ್ರವಿಲ್ಲದ ರೈತ ಎದುರಿಸಲು ಹೋದರೆ ಪ್ರಾಣಾಪಾಯ ಇರುತ್ತದೆ. ಆದ್ದರಿಂದ ರೈತರು ಹೆಚ್ಚಿನ ಲಾಭದ ಆಸೆಯಿಂದ ಶ್ರೀಗಂಧದ ಮರಗಳನ್ನು ಬೆಳೆಸುವ ಬದಲು ಹಣ್ಣಿನ ಮರಗಳನ್ನು ಬೆಳೆಸುವುದು ಹೆಚ್ಚು ಲಾಭದಾಯಕ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಲೋಕಾಯುಕ್ತ ಬಲಪಡಿಸಿ: ಭ್ರಷ್ಟಾಚಾರ ನಿಗ್ರಹಿಸಿ

ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಸಲು ಲೋಕಾಯುಕ್ತ ಪೊಲೀಸರು ಅನುಮತಿ ಕೋರಿರುವ ಪ್ರಸ್ತಾವಕ್ಕೆ 3 ತಿಂಗಳಾದರೂ ಅನುಮತಿ ಸಿಗದಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ನ. 13). ಬಹುಕೋಟಿ ರೂಪಾಯಿಯ ಈ ಪ್ರಕರಣ ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆಯ ಫಲಶ್ರುತಿ. ಲೋಕಾಯುಕ್ತವು ಸಂವಿಧಾನಾತ್ಮಕವಾಗಿ ರೂಪುಗೊಂಡ ಒಂದು ಸ್ವತಂತ್ರ ಸಂಸ್ಥೆ. ಆದಾಗ್ಯೂ ಭ್ರಷ್ಟ ಸರ್ಕಾರಿ ನೌಕರರು ಅಥವಾ ಚುನಾಯಿತ ಪ್ರತಿನಿಧಿಗಳನ್ನು ಪತ್ತೆ ಹಚ್ಚುವ ಲೋಕಾಯುಕ್ತಕ್ಕೆ ಇಂಥ ಭ್ರಷ್ಟರ ವಿರುದ್ಧ ನ್ಯಾಯಾಲಯದಲ್ಲಿ ನೇರವಾಗಿ ಪ್ರಕರಣ ದಾಖಲಿಸಲು ಸ್ವಾತಂತ್ರ್ಯ ಇಲ್ಲದಿರುವುದು ಕ್ರೂರ ವ್ಯಂಗ್ಯ. ಸದ್ಯದ ಕಾನೂನಿನಂತೆ ಲೋಕಾಯುಕ್ತವು ತನ್ನ ಬಲೆಯಲ್ಲಿ ಸಿಕ್ಕಿಬಿದ್ದ ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಆರೋಪಪಟ್ಟಿಯನ್ನು ದಾಖಲಿಸಲು ಸರ್ಕಾರದ ಮರ್ಜಿಗೆ ಕಾಯಬೇಕು.

ಸಂವಿಧಾನಾತ್ಮಕವಾಗಿ ಲೋಕಾಯುಕ್ತ ಸ್ವತಂತ್ರ ಸಂಸ್ಥೆಯಾಗಿದ್ದರೂ ಸರ್ಕಾರದ ಸಕ್ಷಮ ಪ್ರಾಧಿಕಾರದ ಅಥವಾ ವಿಧಾನಸಭೆಯ ಅಧ್ಯಕ್ಷರ ಅಧಿಕಾರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಬೇಕಾದ ಅತಂತ್ರ ಸ್ಥಿತಿ! ಇದು ಸದ್ಯದ ಕಾನೂನು ಒಡ್ಡಿರುವ ನಿರ್ಬಂಧ. ಯಾರ ಕೈ ಮೇಲೆ ಎನ್ನುವುದು ಇಲ್ಲಿ ಸಹಜವಾಗಿ ಮುಂದೆ ಬರುತ್ತದೆ. ಲೋಕಾಯುಕ್ತದಂತಹ ಸ್ವತಂತ್ರ ಸಂಸ್ಥೆಯ ಕೆಲಸದಲ್ಲಿ ಈಗಿರುವ ಕಾನೂನಿನ ನಿರ್ಬಂಧ ಒಂದು ತೊಡಕಾಗಿದೆ. ಆದ್ದರಿಂದ 'ಅಭಿಯೋಜನಾ ಮಂಜೂರಾತಿ'ಯಂಥ ದಾಕ್ಷಿಣ್ಯದಿಂದ ಲೋಕಾಯುಕ್ತವನ್ನು ಬಿಡುಗಡೆಗೊಳಿಸಿದರೆ ಪ್ರಕರಣಗಳು ಬೇಗ ಇತ್ಯರ್ಥವಾಗುತ್ತವೆ. ಸಿಕ್ಕಿಹಾಕಿಕೊಂಡ ಭ್ರಷ್ಟರ ಪ್ರಭಾವವೂ ಸರ್ಕಾರವನ್ನು ಬಾಧಿಸುವುದಿಲ್ಲ!

ಸಾಮಗ ದತ್ತಾತ್ರಿ, ಬೆಂಗಳೂರು

ದೀಪಾವಳಿ ರಜೆ: ಮರುಚಿಂತನೆ ನಡೆಯಲಿ

ರಾಜ್ಯದಲ್ಲಿ ದೀಪಾವಳಿ ಸಲುವಾಗಿ ಎರಡು ದಿನ ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ನರಕ ಚತುರ್ದಶಿ ಹಾಗೂ ಬಲಿಪಾಡ್ಯಮಿ ದಿನಗಳಂದು ಸರ್ಕಾರಿ ರಜೆ. ನಡುವಿನ ಕೇದಾರೇಶ್ವರ ವ್ರತ ಆಚರಿಸುವ ಅಮಾವಾಸ್ಯೆ ದಿನವು ಕೆಲಸದ ದಿನ. ಈ ರೀತಿ ಇರುವುದರಿಂದ, ಈ ಕೆಲಸದ ದಿನ ಸರ್ಕಾರಿ ಕಚೇರಿಗಳಲ್ಲಿ ಹಾಜರಾತಿ ಯಾವ ಮಟ್ಟಕ್ಕೆ ಇರುತ್ತದೆ ಎಂಬುದನ್ನು ಎಲ್ಲರೂ ಬಲ್ಲರು. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲಿ ದೀಪಾವಳಿಗೆ ಬರೀ ಒಂದು ದಿನ ಸರ್ಕಾರಿ ರಜೆ ಇದೆ. ನಮ್ಮ ರಾಜ್ಯದಲ್ಲಿ ಮಾತ್ರ ಕಡಿಮೆ ಸಂಖ್ಯೆಯ, ಮೇಲ್ವರ್ಗದ ಜನ ಹೆಚ್ಚಾಗಿ ಆಚರಿಸುವ ಬಲಿಪಾಡ್ಯಮಿ ದಿನದಂದು ಸಹ ರಜೆ ಇದೆ. ಬಹುಸಂಖ್ಯಾತರು ಹಬ್ಬ ಆಚರಿಸುವ ಅಮಾವಾಸ್ಯೆಗೆ ರಜೆಯಿಲ್ಲ. ಈ ಕಾರಣದಿಂದ ಸರ್ಕಾರಿ ಕಚೇರಿಗಳಲ್ಲಿ ಕೆಲಸವೂ ನಡೆಯುವುದಿಲ್ಲ, ಜನರಿಗೂ ಪ್ರಯೋಜನ ಇಲ್ಲ.

ಆದ್ದರಿಂದ ಈಗಲಾದರೂ ಇದನ್ನು ಸರಿಪಡಿಸಿ, ಎಲ್ಲರಿಗೂ ಸೂಕ್ತವಾದ ಒಂದು ದಿನ ದೀಪಾವಳಿ ಸಲುವಾಗಿ ಸಾರ್ವತ್ರಿಕ ರಜೆ ಘೋಷಿಸಲು ಸಂಬಂಧಿಸಿದವರು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ.

ಟಿ.ಜಯರಾಂ, ಕೋಲಾರ

ಪಟಾಕಿಗೆ ಸಮಯ ನಿಗದಿ: ಆದೇಶ ಕಾರ್ಯಸಾಧುವಲ್ಲ

ಪಟಾಕಿ ಅಂಗಡಿಯಲ್ಲಿ ಅಥವಾ ಸಿಡಿಸುವಾಗ ಆಗಬಹುದಾದ ಅಪಾಯಗಳಿಂದ ತಪ್ಪಿಸಿಕೊಳ್ಳುವ ಮುನ್ನೆಚ್ಚರಿಕೆ ಕ್ರಮವಾಗಿ, ಪಟಾಕಿ ಸಿಡಿಸುವ ಅವಧಿಯನ್ನು ರಾತ್ರಿ ಎಂಟರಿಂದ ಹತ್ತು ಗಂಟೆಯವರೆಗೆ ಮಾತ್ರ ಸೀಮಿತಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತು. ಈ ಕ್ರಮ ಜನರ ಆರೋಗ್ಯದ ದೃಷ್ಟಿಯಿಂದ ಸರಿಯಾಗಿಯೇ ಇದೆ. ಆದರೆ, ಬರೀ ಎರಡು ಗಂಟೆಗಳ ಅವಕಾಶ ಸಾಲದು. ಜೊತೆಗೆ, ಈ ಆದೇಶದ ಪಾಲನೆ ಹೇಗೆ ಎಂಬ ವಿವೇಚನೆ ಇರಬೇಕಿತ್ತು.

ನಿಗದಿತ ಸಮಯ ಮೀರಿ ಅಥವಾ ಮುನ್ನ ಪಟಾಕಿ ಸಿಡಿಸಿದವರ ಮೇಲೆ ಕ್ರಮ ಏನು ಎಂಬ ಸ್ಪಷ್ಟತೆ ಇಲ್ಲ. ಹಾಗೆಯೇ ನಗರದ ಎಲ್ಲಾ ರಸ್ತೆಗಳಲ್ಲಿ ಪಟಾಕಿ ಸಿಡಿಸದಂತೆ ಪೊಲೀಸರನ್ನು ನಿಯೋಜಿಸಲು ಸಾಧ್ಯವೇ? ಇಂತಹ ಆದೇಶ ಅಥವಾ ನಿಯಮ ರೂಪಿಸುವ ಮುನ್ನ ಚಿಂತಿಸಬೇಕು. ಕಾರ್ಯಸಾಧುವಲ್ಲದ ನಿಯಮ ಅಥವಾ ಆದೇಶಗಳಿಂದ ಉಪಯೋಗವೇನೂ ಆಗದೆ, ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡಂತೆ ಆಗುತ್ತದೆ ಅಷ್ಟೆ. ಇಂತಹ ಸಂದರ್ಭಗಳಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳಿಹೇಳಿ ಎಚ್ಚರಿಸಬೇಕಷ್ಟೇ ವಿನಾ ಆದೇಶ ನೀಡಲಾಗದು. ಇದಕ್ಕೂ ಮುನ್ನ ರಾಜಕಾರಣಿಗಳ ಮೆರವಣಿಗೆ ಅಥವಾ ಸ್ವಾಗತ ಸಮಾರಂಭಗಳಲ್ಲಿ ಪಟಾಕಿ ಸಿಡಿಸುವುದನ್ನು ನಿಷೇಧಿಸಿ ಜನರಿಗೆ ಮಾದರಿಯಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಕ್ಕಳ ದಿನದ ವಿಶೇಷ

ಕೋವಿಡ್ ಸಾಂಕ್ರಾಮಿಕವು ಜಗತ್ತನ್ನೇ ಬದಲಿಸಿತು, ಮಕ್ಕಳನ್ನು ಕೂಡ. ಆಟ, ಪಾಠ, ನೋಟಗಳೆಲ್ಲವೂ ಬೇರೆಯೇ ಆದವು. ಅಂತರ್ಜಾಲ ಮತ್ತು ಮೊಬೈಲ್‌ನ ಲೋಕದೊಳಗೆ ಹೆಚ್ಚಿನ ಮಕ್ಕಳು ಬಂದಿಗಳಾಗಿದ್ದಾರೆ. ಬಯಲಿನ ವಿಸ್ತಾರದಿಂದ ತಪ್ಪಿಸಿಕೊಂಡಿದ್ದಾರೆ. ಮಕ್ಕಳಲ್ಲಿ ಮಗುತನವನ್ನು ಮತ್ತೆ ತರುವುದು ಹೇಗೆ ಎಂಬ ಯೋಚನೆಯನ್ನು ಮಕ್ಕಳ ದಿನದಂದು ಇಲ್ಲಿ ಹಂಚಿಕೊಳ್ಳಲಾಗಿದೆ. ಮುದ ನೀಡಬಲ್ಲ ಕೆಲವು ಕತೆಗಳೂ ಇಲ್ಲಿವೆ

ಮೊಬೈಲ್ ಮುಳ್ಳಿನ ಮೇಲೆ ಮಕ್ಕಳ ಮನಸಿನ ಬಟ್ಟೆ!





● ಮೌನೇಶ್ ಬಡಿಗೇರ್

ಇದು ಮೊಬೈಲ್ ಯುಗ. ಎರಡು ವರ್ಷ ಕೊರೊನಾದಿಂದ ಇಡೀ ಲೋಕವೇ ಸಂಕಷ್ಟಕ್ಕೀಡಾದ ಕಾರಣ ಮೊಬೈಲ್ ಎಲ್ಲಾ ಕ್ಷೇತ್ರಗಳಲ್ಲೂ, ವರ್ಗಗಳಲ್ಲೂ ತನ್ನ ಪಾರಮ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಿದೆ. ಅದರಲ್ಲೂ ಮಕ್ಕಳ ಜಗತ್ತನ್ನು ಸದ್ದಿಲ್ಲದೇ ಬದಲಾಯಿಸಿಬಿಟ್ಟಿದೆ. ಆನ್‌ಲೈನ್ ಪಾಠಕ್ಕೋಸ್ಕರ ಶಾಲೆಗಳ ಶಿಫಾರಸ್ಸಿನ ಮೇರೆಗೆ ಬಳಸಲು ಕೊಟ್ಟ ಮೊಬೈಲುಗಳನ್ನು ಈಗ ವಾಪಸು ಪಡೆದುಕೊಳ್ಳಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ ಮಕ್ಕಳ ಅಪ್ಪ ಅಮ್ಮಂದಿರಿಗೆ. ಇದು ಹೇಗೆಂದರೆ ಕೊಟ್ಟ ವರವನ್ನೋ ಅಥವಾ ಶಾಪವನ್ನೋ ಮತ್ತೆ ಹಿಂಪಡೆದುಕೊಳ್ಳಲು ಸಾಧ್ಯವಾಗದಂತಹ ಸ್ಥಿತಿ. ಆದರೆ ಈ ಮೊಬೈಲನ್ನು ವರವನ್ನಾಗಿ ಮಾಡಿಕೊಂಡ ಮಕ್ಕಳು ನಿಜಕ್ಕೂ ಇಂದು ಉಳಿದೆಲ್ಲ ಮಕ್ಕಳಿಗಿಂತ ಬಹಳ ಮುಂದೆ ಮುಂದೆ ಸಾಗುತ್ತಿದ್ದರೆ; ಶಾಪವನ್ನಾಗಿ ಮಾಡಿಕೊಂಡ ಮಕ್ಕಳ ಬದುಕು ಹಿಮ್ಮುಖವಾಗಿ ಸಾಗುತ್ತಿದೆ.

15, 30 ಸೆಕೆಂಡುಗಳ ರೀಲ್ಸು, ಶಾರ್ಟ್‌ಗಳಿಗೆ ಅಂಟಿಕೊಂಡಿರುವ ಮಕ್ಕಳ ಮನಸ್ಸನ್ನು ವಿಷಯ ಕೇಂದ್ರಿತಗೊಳಿಸುವುದು ಅಥವಾ 'ಸಹಜ ಸಾಮಾನ್ಯ ಜ್ಞಾನ'ದ ಕಡೆಗೆ ಹರಿಸುವುದು ಕೂಡ ಇಂದು ದುಸ್ಸಾಹಸವೇ ಆಗಿಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮಕ್ಕಳನ್ನು ಮತ್ತೆ ಅವರ 'ಸಹಜ ಸೃಜನಶೀಲ ಲೋಕ'ಕ್ಕೆ ಮರಳಿ ತರುವುದು ಹೇಗೆ? ಟಿ.ವಿಗಳಲ್ಲಿ, ಶಾಲೆಗಳಲ್ಲಿ ಈ ಕುರಿತು ಅನೇಕ ಸೆಮಿನಾರುಗಳು, ಗೋಷ್ಠಿಗಳು ನಡೆದು ಹೋಗಿವೆ. ಅಲ್ಲಲ್ಲಾ ಸಂಪನ್ಮೂಲ ವ್ಯಕ್ತಿಗಳು ಬಂದು ಇದಕ್ಕೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಮನಸ್ಸು ಮಾಡಿದ್ದರು, ಶಿಕ್ಷಣತಜ್ಞರು ಮೊದಲಾದವರು ಕೂಡ ಸ್ವತಃ ತಮ್ಮ ಮಕ್ಕಳನ್ನು ಈ ಮೊಬೈಲೆಂಬ ಬ್ರಹ್ಮರಾಕ್ಷಸನ ಕೈಯಿಂದ ಬಚಾವು ಮಾಡುವಲ್ಲಿ ಸೋತು ಸುಣ್ಣವಾಗಿದ್ದಾರೆ.

ಬಹುಶಃ ಈ ಮಾತುಗಳು ಹಳಹಳಿಕೆಯ ಮಾತುಗಳಂತೆ ಕೇಳಬಹುದು; ತಂತ್ರಜ್ಞಾನ ವಿರೋಧಿಯಂತೆಯೂ ಕಾಣಬಹುದು. ಆದರೆ ಮಕ್ಕಳ ದೃಷ್ಟಿಯಿಂದ ನೋಡಿದರೆ ಮಾತ್ರ ಈ ಮಾತುಗಳ ಆಳ ನಿಮಗೆ ತಿಳಿಯಬಲ್ಲದು. ಈ ಮೊಬೈಲು ಸೃಷ್ಟಿಸಿರುವ ಮಕ್ಕಳ ಲೋಕದ ದಾರುಣ ಫಲಿತಾಂಶವನ್ನು ನಾವು ಇನ್ನೇನು ಕೆಲವೇ ವರ್ಷಗಳಲ್ಲಿ ಕಾಣಲಿದ್ದೇವೆ. ಹಾಗಾದರೆ ಮಕ್ಕಳನ್ನು ಈ ಮೊಬೈಲೆಂಬ ಭ್ರಾಮಕ ಲೋಕದಿಂದ ಅವರ ಸಹಜ ಸೃಜನಶೀಲ ಲೋಕಕ್ಕೆ ಮರಳಿಸಲು ಇರುವ ಮಾರ್ಗಗಳು ಏನು ಎಂದು ನೀವು ಕೇಳಬಹುದು. ಮೊಬೈಲಿನ ಅಂಗೈಯಗಲದ ಸಂಕುಚಿತ ಲೋಕದಲ್ಲೇ ಮುದುಡಿ, ಮುದುರಿಹೋಗಿರುವ ಮಕ್ಕಳ ಮನಸ್ಸನ್ನು ಅರಳಿಸಿ ಲೋಕಚರಿತವನ್ನಾಗಿಸಲು ರಂಗಭೂಮಿಗಿಂತ ಪರಿಣಾಮಕಾರಿ ಮಾಧ್ಯಮ ಮತ್ತೊಂದಿಲ್ಲ ಎಂದು ಹೇಳಬಲ್ಲೆ.

ರಂಗಭೂಮಿ ಎಂದರೆ ಬರೀ ನಾಟಕ ಆಡುವುದು ಎಂಬ ಬಹಳ ಸಾಮಾನ್ಯವಾದ ತಿಳುವಳಿಕೆ ಇದೆ ಎಲ್ಲರಲ್ಲೂ. ಆದರೆ ನಾಟಕ ಆಡುವುದು ರಂಗಭೂಮಿಯ ಒಂದು ಭಾಗ ಮಾತ್ರ. ರಂಗಭೂಮಿಯಲ್ಲಿ ಎಲ್ಲಾ ಲಲಿತಕಲೆಗಳೂ ಸೇರಿಕೊಂಡಿವೆ. ಚಿತ್ರಕಲೆ, ವಿನ್ಯಾಸ, ಉಡುಗೆ ತೊಡುಗೆ, ಬಣ್ಣಗಳು, ಪರಸ್ಪರ ಬೆರೆಯುವುದು, ಆತ್ಮವಿಶ್ವಾಸದಿಂದ ಮಾತನಾಡುವುದು, ಕಥೆ ಹೇಳುವುದು, ಕೇಳುವುದು, ಸಂಗೀತ, ಹಾಡು, ನೃತ್ಯ, ಭಾಷೆ, ಸಂಸ್ಕೃತಿ, ಸಾಹಿತ್ಯ, ಸಿನಿಮಾ, ದೃಷ್ಟಿಕೋನ ಹೀಗೆ ಏನನ್ನೂ ನಿರೀಕ್ಷಿಸದೆ ಖಾಲಿಯಾಗಿ ಬರುವ ಮಗುವೊಂದು ತನ್ನ ಪಾತ್ರೆಗೆ ತಕ್ಕಂತೆ ಏನೆಲ್ಲವನ್ನೂ ತುಂಬಿಕೊಂಡು ಹೋಗಬಹುದಾದ ಅಕ್ಷಯಸಾಗರ ರಂಗಭೂಮಿ.

'ಶಿಕ್ಷಣದಲ್ಲಿ ರಂಗಭೂಮಿ' ಎಂಬ ಕುರಿತು ಅನೇಕ ಚರ್ಚೆಗಳು ನಡೆಯುತ್ತಲೇ ಇವೆ. ಸರ್ಕಾರಿ ಶಾಲೆಗಳಲ್ಲಿ ರಂಗಶಿಕ್ಷಕರನ್ನೂ ನೇಮಕ ಮಾಡಿಕೊಳ್ಳಲಾಗಿದೆ. ಆದರೆ ಅವರಿಗೆಲ್ಲ ಸರ್ಕಾರ ಎಷ್ಟು ಸ್ವಾತಂತ್ರ್ಯ ಹಾಗೂ ಸ್ವಾಯತ್ತೆಯನ್ನು ನೀಡಿದೆ ಎಂದು ನೋಡಬೇಕಾಗುತ್ತದೆ. ಅನೇಕ ರಂಗಶಿಕ್ಷಕರು ರಂಗಶಿಕ್ಷಣದ ಜೊತೆಗೆ ಬೇರೆ ಬೇರೆ ವಿಷಯದ ಪಾಠಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯ ಇದೆ. ಇದು ಸಂಪೂರ್ಣವಾಗಿ ಅವರು ಕ್ರಿಯಾಶೀಲ ರಂಗಭೂಮಿಯಲ್ಲಿ ತೊಡಗಿಕೊಳ್ಳಲು ಅಡ್ಡಿಯಾಗಿದೆ. ಇದರಿಂದ ರಂಗಶಿಕ್ಷಕರನ್ನು ಕೂಡ ಮಕ್ಕಳು ಉಳಿದ ಬೇರೆ ಶಿಕ್ಷಕರಂತೆ ಕಂಡು ಅವರಿಂದ ರೋಸಿಹೋಗುವ ಸಂಭವವೇ ಹೆಚ್ಚು.

ಪೋಷಕರು ಸ್ವತಃ ತಮ್ಮ ಮಕ್ಕಳನ್ನು ಮೊಬೈಲ್ ಲೋಕದಿಂದ ಹೊರಗಿನ ಲೋಕಕ್ಕೆ ಕರೆತರುವಲ್ಲಿ ಅನಿವಾರ್ಯವಾಗಿ ಪ್ರಯತ್ನವನ್ನು ಮಾಡಬೇಕಾದ ತುರ್ತು ಇಂದು ನಿರ್ಮಾಣವಾಗಿದೆ. ನಾವು ಏನನ್ನು ಮಾಡುತ್ತೇವೆಯೋ ಮಕ್ಕಳು ಸುಪ್ತವಾಗಿ ನಮ್ಮನ್ನು ಅನುಸರಿಸುತ್ತಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯವಾದರೂ ನಾವೇ ಇಂದು ಅವರಿಗಿಂತ ಹೆಚ್ಚು ಮೊಬೈಲಿನ ಗೀಳಿಗೆ ಅಂಟಿಕೊಂಡಿದ್ದೇವೆ; ಅದು ಬದುಕಿನ ಅನಿವಾರ್ಯತೆಯೇ ಆಗಿರಬಹುದು; ಆದರೆ ಮಕ್ಕಳ ಭವಿಷ್ಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪೋಷಕರು ಇಂದು ಕಾರ್ಯಪ್ರವೃತ್ತರಾಗಬೇಕಿದೆ. ಮಕ್ಕಳು ನಿಯಮಿತವಾಗಿ ಮೊಬೈಲು ಬಳಸಲು ಸಾಧ್ಯವಾಗದ, ಆದರೆ ಅವರ ಮನಸ್ಸನ್ನು ಪರವಶಗೊಳಿಸಬಲ್ಲ ಕಲಾಪ್ರಕಾರಗಳ ಪ್ರದರ್ಶನಗಳಿಗೆ ಕರೆದುಕೊಂಡು ಹೋಗುವುದರ ಮೂಲಕ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಡಬಹುದು.

ನೃತ್ಯ, ಸಂಗೀತ, ಸಾಹಿತ್ಯ, ನಾಟಕ, ಚಿತ್ರಕಲಾ ಪ್ರದರ್ಶನ, ಹೀಗೆ ಹತ್ತು ಹಲವು ಪ್ರದರ್ಶನ ಕಲಾಪ್ರಕಾರಗಳಿಗೆ ಕನಿಷ್ಠ ವಾರದಲ್ಲಿ ಒಮ್ಮೆಯಾದರೂ ಅವರನ್ನು ಕರೆದುಕೊಂಡು ಹೋಗುವುದನ್ನು ರೂಢಿಸಿಕೊಳ್ಳಬಹುದು. ಹೀಗೆ ಕ್ರಮೇಣ ಮಗುವಿನ ಆಸಕ್ತಿಯನ್ನು ಗಮನಿಸಿ ಅದು ಸ್ವತಃ ಒಳಗೊಳ್ಳಬಹುದಾದ ಕಲಾಪ್ರಕಾರವನ್ನು ಕಲಿಯಲು ಪ್ರೋತ್ಸಾಹಿಸಬಹುದು. ಇದೆಲ್ಲವನ್ನೂ ಬಲವಂತವಾಗಿ ಮಾಡಿದರೂ ಮಕ್ಕಳು ಅದರ ಕುರಿತಾಗಿ ತಾತ್ಸಾರ, ಹೇವರಿಕೆಯ ಭಾವವನ್ನು ಬೆಳೆಸಿಕೊಂಡುಬಿಡುತ್ತಾರೆ. ಹಾಗಾಗದಂತೆ ನಾಜೂಕಾಗಿ ನೋಡಿಕೊಳ್ಳಬೇಕಾಗಿರುವುದು ಪೋಷಕರ ಜವಾಬ್ದಾರಿಯಾಗಿದೆ. ಮೊಬೈಲೆಂಬ ಮುಳ್ಳಿನ ಮೇಲೆ ಬಿದ್ದಿರುವ ನಮ್ಮ ಮಕ್ಕಳ ಮನಸ್ಸೆಂಬ ಕಸೂತಿ ಬಟ್ಟೆಯನ್ನು ಹರಿಯದಂತೆ ತೆಗೆದುಕೊಳ್ಳುವುದು ಇಂದು ಬಹಳ ಜರೂರಾದ ಕೆಲಸವಾಗಿದೆ. ಆ ದಿಸೆಯಲ್ಲಿ ರಂಗಭೂಮಿಯ ನೆರವು ಪಡೆದು ಪೋಷಕರು ತಮ್ಮ ಮಕ್ಕಳ ಭವಿಷ್ಯವನ್ನು ಮತ್ತೆ ಸಹಜ ಸೃಜನಶೀಲ ಪ್ರಕ್ರಿಯೆಯ ಕಡೆಗೆ ಹೊರಳುವಂತೆ ಮಾಡುವುದು ಹಿಂದಿಗಿಂತ ಇಂದು ಬಹಳ ಅಗತ್ಯದ ಕೆಲಸ ಎಂದು ಅನಿಸುತ್ತಿದೆ.

ಲೇಖಕ: ರಂಗಭೂಮಿ-ಸಿನಿಮಾ ನಿರ್ದೇಶಕ, ನಿರ್ಗುಣ ಅಭಿನಯ ಶಾಲೆ ಸ್ಥಾಪಕ



ರಂಗಕರ್ಮಿ ಪ್ರತಿಭಾ ಎಂ.ವಿ. ಸಾಗರ ಅವರ 'ಸ್ಪಂದನ' ತಂಡವು ಹಲವು ವರ್ಷಗಳಿಂದ ಕುಪ್ಪಳಿಯಲ್ಲಿ ಮಕ್ಕಳ ರಂಗಶಿಬಿರ 'ಮಳೆಬಿಲ್ಲು' ಅನ್ನು ನಡೆಸಿಕೊಂಡು ಬರುತ್ತಿದೆ. ಈ ಶಿಬಿರಗಳಲ್ಲಿ ಸೆರೆಹಿಡಿದ ಮಕ್ಕಳ ಭಾವಗಳಿವು...
ಚಿತ್ರಗಳು: ಗುರುರಾಜ್ ಶಾನ್ ತೀರ್ಥಹಳ್ಳಿ

ಮಕ್ಕಳ ಚಿತ್ರ: ಅಲ್ಲೊಂದು... ಇಲ್ಲೊಂದು

ಕನ್ನಡ ಚಿತ್ರರಂಗದಲ್ಲಿ ಮಕ್ಕಳ ಚಿತ್ರಗಳು ಬರುವುದು ಅಪರೂಪ. ರಿಷಬ್ ಶೆಟ್ಟಿ ನಿರ್ದೇಶಿಸಿದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ' ಸಿನಿಮಾ ಚಿತ್ರಮಂದಿರಗಳಲ್ಲಿಯೂ ದೊಡ್ಡ ಯಶಸ್ಸು ಗಳಿಸಿ ಮಕ್ಕಳ ಸಿನಿಮಾಗಳಿಗೂ ಒಂದು ಕಾಲ ಬಂದಿತೇನೊ ಎನ್ನುವ ಭಾವನೆ ಮೂಡಿಸಿತ್ತು. ಸತ್ಯಪ್ರಕಾಶ ನಿರ್ದೇಶನದ 'ಒಂದಲ್ಲ ಎರಡಲ್ಲ' ಕೂಡ ಚಿತ್ರಮಂದಿರಗಳಲ್ಲಿ ಬಿಡುಗಡೆಗೊಂಡು, ಉತ್ತಮ ವಿಮರ್ಶೆ ಪಡೆಯಿತು. ಆದರೆ, ಕೋವಿಡ್ ಬಳಿಕ ಚಿತ್ರಮಂದಿರಗಳಲ್ಲಿ ತೆರೆಕಂಡ ಮಕ್ಕಳ ಸಿನಿಮಾ ಇಲ್ಲವೇ ಇಲ್ಲ. ಚಲನಚಿತ್ರೋತ್ಸವಗಳನ್ನು ಗುರಿಯಾಗಿಸಿಕೊಂಡು ನಾಲ್ಕಾರು ಸಿನಿಮಾಗಳು ಬಂದಿವೆಯಾದರೂ, ಅವು ಸಾಮಾನ್ಯರ ನಡುವೆ ಸುದ್ದಿಯಾಗಿಲ್ಲ.

ರಕ್ಷಿತ್ ಶೆಟ್ಟಿ ನಿರ್ಮಿಸಿರುವ 'ಮಿಥ್ಯ' ಸಿನಿಮಾ ಚಿತ್ರೋತ್ಸವಗಳಲ್ಲಿ ಪ್ರಶಂಸೆ ಪಡೆದು, ಇತ್ತೀಚೆಗೆ ತುಸು ಸುದ್ದಿಯಲ್ಲಿದೆ. ಪುಟ್ಟ ಬಾಲಕನ ತಂದೆ-ತಾಯಿ ನಿಧನ ಹೊಂದುತ್ತಾರೆ. ಅವರ ನೆನಪುಗಳಿಂದ ಹೊರಬರಲಾರದ ಈ ಬಾಲಕ ಹೊಸ ಪ್ರಪಂಚವನ್ನು ಹುಡುಕಿಕೊಂಡು ಹೊರಡುತ್ತಾನೆ ಎಂಬ ಕಥೆಯನ್ನು ಹೊಂದಿರುವ ಈ ಚಿತ್ರವನ್ನು ಸುಮಂತ್ ಭಟ್ ನಿರ್ದೇಶಿಸಿದ್ದಾರೆ. 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಮತ್ತು 'ವಿಕ್ರಾಂತ್ ರೋಣ' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಬಾಲನಟ ಆತಿಶ್ ಶೆಟ್ಟಿ 'ಮಿಥ್ಯ' ಚಿತ್ರದಲ್ಲಿ ಮಿಥುನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾನೆ.

ಸುರೇಶ್ ಲಕ್ಕೂರ್ ನಿರ್ದೇಶನದಲ್ಲಿ ಮೂಡಿಬಂದಿರುವ 'ದೇವರ ಕನಸು' ಚಿತ್ರ ಇತ್ತೀಚೆಗಷ್ಟೇ ತೆರೆಕಂಡಿತ್ತು. ಮಾಸ್ಟರ್ ದೀಪಕ್, ಅಮೂಲ್ಯ, ಅಖುಷಿ ವೇದಿಕ ಹಾಗೂ ಮಾಕ್ ಮಣಿ ಚಿತ್ರದ ಪ್ರಮುಖಪಾತ್ರಗಳಲ್ಲಿ ನಟಿಸಿದ್ದರು. ಜುಲೈ 21ರಂದು ತೆರೆ ಕಂಡ ಚಿತ್ರಕ್ಕೆ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಸಾಥ್ ನೀಡಿದ್ದರು. ಜಯ್ ಕುಮಾರ್ ಚಿತ್ರವನ್ನು ನಿರ್ಮಾಣ ಮಾಡಿದ್ದರು.

ಬರಗೂರು ರಾಮಚಂದ್ರಪ್ಪನವರ 'ಚಿಣ್ಣರ ಚಂದ್ರ' ಸಿದ್ಧಗೊಂಡು ಚಲನಚಿತ್ರೋತ್ಸವಗಳಿಗೆ ಹೊರಟಿರುವ ಮಕ್ಕಳ ಚಿತ್ರ. ನಿರ್ದೇಶಕ ಯೋಗಿ ದೇವಗಂಗೆ ಅವರ 'ಗಾಂಧಿ ಮತ್ತು ನೋಟು' ಎಂಬ ಸಿನಿಮಾ ಕೂಡ ಹಿಂದಿನ ವರ್ಷ ತೆರೆಕಂಡಿತ್ತು. ಮಂಜು ಬಿ.ಎ, ಚಂದ್ರು, ಪದ್ಮನಾಭ್ ಈ ಚಿತ್ರವನ್ನು ನಿರ್ಮಿಸಿದ್ದರು. ಕನ್ನಡದ ಚಿತ್ರ ಸಾಹಿತಿ ವಿ.ನಾಗೇಂದ್ರ ಪ್ರಸಾದ್ ಅವರ 12 ವರ್ಷದ ಮಗಳು ದಿವಿಜಾ ಈ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡಿದ್ದಳು. ❖

ಮಕ್ಕಳಿಗಾಗಿ ಸಣ್ಣ ಕತೆಗಳು

ಮೀನು ಕೇಳಿದ ವಾರ್ತೆ

ಅದೊಂದು ಪುಟ್ಟ ಹಳ್ಳಿ. ಅಲ್ಲೊಂದು ಹೊಳೆ. ಅಲ್ಲಿ ಮೀನು, ಕಪ್ಪೆ, ಆಮೆಗಳೆಲ್ಲ ಸಂತೋಷದಿಂದ ಜೀವನ ಮಾಡಿಕೊಂಡಿದ್ದವು. ಮೀನುಗಳ ಸಂಸಾರವಂತೂ ತುಂಬ ದೊಡ್ಡದಾಗಿತ್ತು. ಮೀನಿನ ಸಂಸಾರದ ಬಗ್ಗೆ ಕಪ್ಪೆ ಮತ್ತು ಆಮೆಗಳಿಗೂ ಗೌರವವಿತ್ತು. ಮೀನುಗಳ ಮನೆಯಲ್ಲಿ ದೊಡ್ಡದೊಂದು ರೇಡಿಯೊ ಇದ್ದುದೇ ಅದಕ್ಕೆ ಕಾರಣವಾಗಿತ್ತು.

ಮೀನುಗಳ ಮನೆಯಲ್ಲಿ ಒಂದು ಹಿರಿಯ ಮೀನು ಇತ್ತು. ಅದರ ಮಾತನ್ನು ಕಪ್ಪೆ ಮತ್ತು ಆಮೆಯ ಕುಟುಂಬದವರೂ ಕೇಳುತ್ತಿದ್ದರು. ಆದರೆ, ರೇಡಿಯೊ ಕೇಳುವುದಕ್ಕೆ ಮಾತ್ರ ಯಾರೂ ಅದಕ್ಕೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಎಲ್ಲರಿಗೂ ಸಿನಿಮಾ ಹಾಡು ಕೇಳುವುದೆಂದರೆ ಪ್ರಾಣ. ಮರಿಮೀನು, ಮರಿಕಪ್ಪೆ, ಮರಿಆಮೆಗಳಂತೂ ರೇಡಿಯೊಗೆ ಅಂಟಿಕೊಂಡೇ ಇರುತ್ತಿದ್ದವು. ಹಾಗಾಗಿ ಹಿರಿಯ ಮೀನು ವಾರ್ತೆ ಕೇಳಲು ಆಗುತ್ತಿಲ್ಲವಲ್ಲ ಎಂದು ಕೊರಗುತ್ತಲೇ ಇರುತ್ತಿತ್ತು.


ಹಾಗೂ ಹೀಗೂ ಮಾಡಿ ಮಕ್ಕಳಿಂದ ರೇಡಿಯೊ ಪಡೆದುಕೊಳ್ಳುವ ಹೊತ್ತಿಗೆ ವಾರ್ತೆ ಮುಗಿದೇ ಹೋಗಿರುತ್ತಿತ್ತು. ಒಮ್ಮೊಮ್ಮೆ, 'ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು', ಎಂಬುದನ್ನು ಮಾತ್ರ ಕೇಳಿಸಿಕೊಂಡು ಅದು ನಿರಾಸೆ ಪಡುತ್ತಿತ್ತು.

ಆ ದಿನವೂ ಅದು ಮಕ್ಕಳಿಂದ ರೇಡಿಯೊ ತೆಗೆದುಕೊಳ್ಳುವ ಹೊತ್ತಿಗೆ ಸಾಕಷ್ಟು ಸಮಯವಾಗಿತ್ತು. ವಾರ್ತೆ ಕೇಳಲು ತಿರುಗಿಸಿತು. ಅದರ ಅದೃಷ್ಟಕ್ಕೆ, 'ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು', ಎಂಬುದು ಕೇಳಿಸಿತು. ಇಷ್ಟಾದರೂ ಸಿಕ್ಕಿತಲ್ಲ ಎಂದು ಸಂತಸ ಪಟ್ಟಿತು. ಆದರೆ ವಾರ್ತೆ ಮಾತ್ರ ಸಂತಸ ತರುವಂತಿರಲಿಲ್ಲ. 'ಹೊಳೆಗಳಿಗೆ ಔಷಧ ಹಾಕಿ ಮೀನುಗಳನ್ನೆಲ್ಲಾ ಹಿಡಿದುಕೊಂಡು ಹೋಗುವವರು ಬರುತ್ತಿದ್ದಾರೆ, ಬಹಳಷ್ಟು ಹೊಳೆಗಳಲ್ಲಿ ಮೀನುಗಳು ಪ್ರಾಣ ಕಳೆದುಕೊಂಡು ಅವರ ಪಾಲಾಗಿವೆ', ಎಂಬ ಸುದ್ದಿ ಕೇಳಿ ಅದು ಆಘಾತಗೊಂಡಿತು. ವಿಷಯ ಇತರ ಮೀನುಗಳಿಗೂ ಗೊತ್ತಾಯಿತು. ಕಪ್ಪೆ, ಆಮೆಗಳಿಗೂ ಭಯವಾಯಿತು. ಏನೂ ತೋಚದಂತಾಗಿ ಕುಳಿತುಬಿಟ್ಟವು. ಎಂದಿನಂತೆ ಅಜ್ಜನಿಂದ ರೇಡಿಯೊ ಕಿತ್ತುಕೊಳ್ಳಲು ಯಾರೂ ಬರಲಿಲ್ಲ. ಮುಂದೇನು ಎಂಬ ಚಿಂತೆಯೇ ಎಲ್ಲರನ್ನೂ ಕಾಡತೊಡಗಿತು.

ಅದೇ ಸಮಯಕ್ಕೆ ಆ ಊರಿನ ಮುಖ್ಯಸ್ಥನ ಮಗಳು ನೀರಿಗಾಗಿ ಬಿಂದಿಗೆ ಹಿಡಿದು ಅಲ್ಲಿಗೆ ಬಂದಳು. ಹಿರಿಯ ಮೀನು ಮತ್ತು ಊರ ಮುಖ್ಯಸ್ಥ ಸ್ನೇಹಿತರಾಗಿದ್ದರು. ಮುಖ್ಯಸ್ಥನ ಮಗಳಿಗೆ, 'ನಿನ್ನ ತಂದೆಗೆ ಇಲ್ಲಿಗೊಮ್ಮೆ ಬಂದು ಹೋಗುವಂತೆ ಹೇಳು', ಎಂದು ಹೇಳಿ ಕಳುಹಿಸಿತು ಹಿರಿಯ ಮೀನು.

ಊರ ಮುಖ್ಯಸ್ಥ ಸ್ವಲ್ಪವೂ ತಡಮಾಡದೆ ಹೊಳೆಯತ್ತ ಹೊರಟ. ಆತ ಬಂದೊಡನೆಯೇ ಹಿರಿಯ ಮೀನು ಕರೆದು ಕೂರಿಸಿತು. ಒಳಗೆ ಯಾರನ್ನೋ ಕೂಗಿ ಕಾಫಿ ಮಾಡಲು ಹೇಳಿತು. ನಂತರ ತಾನು ವಾರ್ತೆಯಲ್ಲಿ ಕೇಳಿದ ವಿಷಯ ತಿಳಿಸಿತು. 'ಅಯ್ಯೋ... ಹೌದೇ?' ಎಂದು ಮುಖ್ಯಸ್ಥನೂ ಒಮ್ಮೆ ದಿಗಿಲುಪಟ್ಟನು. ಸ್ವಲ್ಪ ಯೋಚಿಸಿದ ನಂತರ, 'ನೀವೇನೂ ಚಿಂತೆ ಮಾಡಬೇಡಿ. ನಿಮಗೇನೂ ತೊಂದರೆಯಾಗದ ಹಾಗೆ ನಾನು ವ್ಯವಸ್ಥೆ ಮಾಡುತ್ತೇನೆ' ಎಂದನು.


ಎಲ್ಲರಿಗೂ ಹೋದ ಜೀವ ಬಂದಂತಾಯಿತು. ಕಾಫಿ ಕುಡಿದು ಮುಖ್ಯಸ್ಥ ಮನೆಯತ್ತ ಹೊರಟನು. 'ನಿಶ್ಚಿಂತೆಯಿಂದ ಇರಿ' ಎಂದು ಪುನಃ ಹೇಳಲು ಮರೆಯಲಿಲ್ಲ. ಅಜ್ಜ ಈ ವಾರ್ತೆ ಕೇಳದಿದ್ದರೆ ದೊಡ್ಡ ಅನಾಹುತವೇ ಆಗುತ್ತಿತ್ತು ಎಂದು ಎಲ್ಲ ಕಿರಿ–ಮರಿ ಮೀನುಗಳಿಗೂ ಅನಿಸಿತು. ಎಲ್ಲರ ಮುಖ ನೋಡಿದರೆ, ತಮ್ಮ ತಪ್ಪನ್ನು ತಿದ್ದಿಕೊಳ್ಳಲು ತೀರ್ಮಾನಿಸಿದಂತೆ ಕಾಣಿಸುತ್ತಿತ್ತು. ❖



ಕಥೆಗಾರ: ವೆಂಕಟರಮಣ ಗೌಡ
ಕಲೆ: ಶ್ರೀಕೃಷ್ಣ ಕೆದಿಲಾಯ
ಪ್ರಕಾಶನ: ಪ್ರಥಮ್ ಬುಕ್ಸ್

ಕಥೆಗಳನ್ನು 'ಸ್ಟೋರಿವೀವರ್ಸ್' ವೆಬ್‌ಸೈಟ್‌ನಿಂದ ಪಡೆದುಕೊಳ್ಳಲಾಗಿದೆ

ಅರಸರಾಯರ ಹಲ್ಲುನೋವು



ಸಿಂಹ ಕಾಡಿನ ರಾಜನಾಗಿತ್ತು. ಅದರ ಅಬ್ಬರಕ್ಕೆ ಕಾಡಲ್ಲಿ ಎಲ್ಲರಿಗೂ ನಡುಕವೋ ನಡುಕ. ಎರಡು ದಿನಗಳಿಂದ ಸಿಂಹಕ್ಕೆ ಹಲ್ಲು ನೋವು ಜೋರಾಗಿತ್ತು. 'ರಾಜರೇ, ನೋಯುತ್ತಿರುವ ಹಲ್ಲು ಕೀಳಿಸಿಬಿಡಿ', ಎಂದಿತು ಡಾ.ಮಂಗ. 'ಮೊದಲು ಆ ಕೆಲಸ ಮಾಡುವೆ' ಎಂದಿತು ಸಿಂಹ. ಆದರೆ, ಸಿಂಹದ ಹಲ್ಲು ಕೀಳುವ ಧೈರ್ಯ ಯಾರಿಗೆ ಇದೆಯಪ್ಪ? ಎಲ್ಲರಿಗೂ ಸಿಂಹ ಎಂದರೆ ತುಂಬಾ ಭಯ! 'ರಾಜರೇ, ನನ್ನ ಹಿಂಗಾಲುಗಳಿಂದ ಒಂದು ಸಲ ಒದೆಯುವೆ, ಆಗ ಹಲ್ಲು ಒಂದೇ ಸಲಕ್ಕೆ ಹೊರಗೆ ಹಾರಿ ಬಿಡುವುದು' ಎಂದಿತು ದಡ್ಡ ಕತ್ತೆ. 'ನಿನಗೆ ನನ್ನನ್ನೇ ಒದೆಯುವಷ್ಟು ಧೈರ್ಯ ಇದೆಯಾ' ಎಂದು ಅಬ್ಬರಿಸಿತು ಸಿಂಹ. ಕತ್ತೆ ಬಾಲ ಮುದುರಿಕೊಂಡು ಪರಾರಿಯಾಯಿತು.

ಈಗ ಆನೆ, ಚಿರತೆ, ಕರಡಿ, ಜಿಂಕೆ ಎಲ್ಲರಿಗೂ ಚಿಂತೆ ಆಯಿತು. ಸಿಂಹದ ಬಾಯಿಗೆ ಕೈ ಹಾಕುವವರು ಯಾರು? ಎಂದು ಯೋಚಿಸಿದವು. ಮತ್ತೆರಡು ದಿನಗಳು ಕಳೆದವು. ಸಿಂಹಕ್ಕೆ ಹಲ್ಲು ನೋವು ತಡೆಯಲು ಆಗುತ್ತಿಲ್ಲ. 'ನಾನು ಒಂದು ಸಲ ನೋಡಲಾ?' ಎಂದು ಕೇಳಿತು ಇಲಿರಾಯ. ಅವರಿಬ್ಬರ ಸುತ್ತ ಯಾರೂ ಇಲ್ಲದೇ ಇರುವಾಗ. 'ನೋಡಪ್ಪ' ಎಂದ ಸಿಂಹ ಅಗಲವಾಗಿ ಬಾಯಿ ತೆರೆಯಿತು. 'ಓ! ನಿಮ್ಮ ಹಲ್ಲುಗಳ ಸಂದುಗಳಲ್ಲಿ ಸಿಕ್ಕಾಪಟ್ಟೆ ಕೊಳೆ ಸೇರಿದೆ' ಎಂದು ಬಾಯಿಯಲ್ಲಿ ಕಣ್ಣಾಡಿಸಿ ಹೇಳಿತು ಇಲಿ. ಅಷ್ಟೇ ಅಲ್ಲ, ತನ್ನ ಚೂಪಾದ ಹಲ್ಲುಗಳಿಂದ ಸಿಂಹದ ಹಲ್ಲುಗಳನ್ನೆಲ್ಲಾ ಉಜ್ಜಿ, ಉಜ್ಜಿ ಶುಚಿ ಮಾಡಿತು. ಸಿಂಹಕ್ಕೆ ಈಗ ಸ್ವಲ್ಪ ಹಾಯೆನಿಸಿತು.

'ರಾಜ, ದಯಮಾಡಿ ದಿನಾ ನಿಮ್ಮ ಹಲ್ಲುಗಳನ್ನು ಚೆನ್ನಾಗಿ ಉಜ್ಜಿ, ತೊಳೆಯಿರಿ. ಇಲ್ಲವಾದರೆ ಹಲ್ಲುಗಳೆಲ್ಲಾ ಕೊಳೆತು, ಬಾಯಿ ವಾಸನೆ ಬರುವುದು' ಎಂದಿತು ಜಾಣ ಇಲಿ.

'ಹೌದಪ್ಪ, ಇಲಿರಾಯ ಇನ್ನು ಮೇಲೆ ಹಾಗೆಯೇ ಮಾಡುವೆ. ಆದರೆ, ದಯಮಾಡಿ ಯಾರಿಗೂ ಈ ವಿಷಯ ಹೇಳಬೇಡ. ನೀನೇನಾದರೂ ಹೇಳಿದರೆ, ಅವರೆಲ್ಲ – ಛೆ, ಛೆ, ರಾಜನೇ ಹಲ್ಲು ಉಜ್ಜುವುದಿಲ್ಲ ಎನ್ನುತ್ತಾ ಗೇಲಿ ಮಾಡುವರು' ಎಂದು ಸಿಂಹ ದಮ್ಮಯ್ಯ ಗುಟ್ಟೆ ಹಾಕಿತು. 'ಆಯಿತು!' ಎನ್ನುತ್ತಾ ಇಲಿರಾಯ ಹಲ್ಲು ಕಿರಿಯಿತು. ಸಿಂಹಕ್ಕೂ ನಗು ತಡೆಯಲು ಆಗಲಿಲ್ಲ. ❖

ಕಥೆಗಾರ: ಸಂಜೀವ್ ಜೈಸ್ವಾಲ್ 'ಸಂಜಯ್'
ಪ್ರಕಾಶನ: ಪ್ರಥಮ್ ಬುಕ್ಸ್
ಕಲೆ: ಅಜಿತ್ ನಾರಾಯಣ್
ಅನುವಾದ: ಈಶ್ವರ್ ದೈತೋಟ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ನವೆಂಬರ್ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪ್ರತಿಪದ್ ಗಂ. 14-37 ನಕ್ಷತ್ರ: ಅನುರಾಧ ಗಂ. 27-24 ಯೋಗ: ಶೋಭನಾ ಗಂ 13-56 ಕರಣ: ಬವ ಗಂ. 14-37, ತುಲಾ ಮಾಸದ 28 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಮಧ್ಯಾಹ್ನ 03-00 - 04-30
ಸೂರ್ಯೋದಯ : 06-33 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 29 ರಬಿಯುಸ್ಸಾನಿ
ದಿನ ವಿಶೇಷ : ಬಲಿ ಪಾಡ್ಯಮಿ, ಮಕ್ಕಳ ದಿನಾಚರಣೆ ಅದೃಷ್ಟ ಸಂಖ್ಯೆ : 3, 10

ಮೇಷ: ನಿಮ್ಮ ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಈ ದಿನವೇ ಪ್ರಾರಂಭಿಸಿ. ಮನೋರಂಜನೆಗಾಗಿ ಹೆಚ್ಚು ಹಣ ವ್ಯಯಿಸುವಿರಿ. ಸಂಜೆ ವೇಳೆ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ.

ವೃಷಭ: ಪ್ರಳಯಾಂತಕ ಜನರ ಸಹವಾಸದಿಂದ ಅಪವಾದ ಕೇಳಬೇಕಾಗಬಹುದು. ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪಲಿದೆ. ನಿತ್ಯದ ಜೀವನ ಕ್ರಮ ಬದಲಿಸದೆ ಮುಂದುವರೆಸಿರಿ.

ಮಿಥುನ: ನಿಮಗಿರುವ ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ. ಪೆಟ್ರೋಲಿಯಂ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ. ಸಾಮಾಜಿಕವಾಗಿ ನಿಮ್ಮ ವರ್ಚಸ್ಸು ಹೆಚ್ಚುವುದು.

ಕರ್ಕಾಟಕ: ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ. ರೈತಾಪಿ ವರ್ಗದವರಲ್ಲಿ ಕೃಷಿಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಸಿಂಹ: ಧಾರ್ಮಿಕ ಕ್ಷೇತ್ರದ ಆಡಳಿತ ವ್ಯಕ್ತಿಗೆ ಅಥವಾ ವ್ಯವಸ್ಥಾಪಕರಿಗೆ ನಿಂದನೆಯ ಭೀತಿ, ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ ಎದುರಾಗಬಹುದು. ಪ್ರೀತಿ ಪಾತ್ರರೊಂದಿಗಿನ ಮಾತುಕತೆ ಈ ದಿನದ ನೆಮ್ಮದಿಯನ್ನು ಉಂಟುಮಾಡುತ್ತದೆ.

ಕನ್ಯಾ: ನಿಮ್ಮ ಮನಸ್ಸಿನಲ್ಲಿ ಯಾವುದೇ ರೀತಿಯ ಗೊಂದಲಗಳಿರುವುದಿಲ್ಲ. ಔಷಧ ವ್ಯಾಪಾರಿಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದು. ರಾಜಕೀಯದಲ್ಲಿನ ಅಧಿಕಾರಿಗಳ ಬದಲಾವಣೆ ನಿಮ್ಮ ಉದ್ಯೋಗಕ್ಕೆ ಲಾಭ ತರುವುದು.

ತುಲಾ: ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಮ್ಮ ಗುಣ ಮೆಚ್ಚುಗೆಗೆ ಪಾತ್ರವಾಗುವುದು. ಕಾನೂನು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಲ್ಲ. ಗುರು ನಿಂದನೆಯಂಥ ಪಾಪದ ಕೆಲಸ ಮಾಡಬೇಡಿ.

ವೃಶ್ಚಿಕ: ನಿಮ್ಮ ಕೆಲಸದಲ್ಲಿ ಎಲ್ಲರನ್ನು ಜೊತೆಗೂಡಿಸಿಕೊಂಡು ಗುಂಪಾಗಿ ಕೆಲಸ ನಿರ್ವಹಿಸುವುದರಿಂದ ಶೀಘ್ರವಾಗಿ ಮುಗಿಸುವಿರಿ. ಮೊದಲೇ ಸಾಕಷ್ಟು ತಯಾರಿ ರೂಪಿಸಿಕೊಂಡರೆ ಗುರಿ ಮುಟ್ಟುವುದು ಕಷ್ಟವೇನಲ್ಲ. ಮಾತಿನಲ್ಲಿ ಹಿಡಿತವಿರಲಿ.

ಧನು: ಕಂಪ್ಯೂಟರ್‌ನ ಬಿಡಿ ಭಾಗಗಳಂತಹ ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಮತ್ತು ರಿಪೇರಿ ಮಾಡುವವರಿಗೆ ಅಧಿಕ ಆದಾಯವಿದೆ. ಸುಗಂಧ ಹಾಗೂ ಅಲಂಕಾರಿಕ ದ್ರವ್ಯಗಳ ಮಾರಾಟ ಲಾಭದಾಯಕವಾಗಲಿದೆ.

ಮಕರ: ಮುಂದಿನ ಯೋಜನೆಗಳಿಗೆ ಬೇಕಾಗುವ ಹೆಚ್ಚಿನ ಹಣಕಾಸಿನ ಹೊಂದಾಣಿಕೆ ನಡೆಸಬಹುದು. ಖಾದಿ ಉದ್ಯಮದವರಿಗೆ ಪ್ರೋತ್ಸಾಹ ಸೌಲಭ್ಯಗಳು ಸಿಗುವುದು. ನಿವೇಶನ ಖರೀದಿಸುವ ನಿಮ್ಮ ಕನಸು ನನಸಾಗಲಿದೆ.

ಕುಂಭ: ಸಹೋದರರಲ್ಲಿ ಉಂಟಾದ ಸಮಸ್ಯೆ ಹೆಚ್ಚಿನ ವಿವಾದಕ್ಕೆ ಆಸ್ಪದವಾಗದಂತೆ ಬಗೆಹರಿಸಿಕೊಳ್ಳಿ. ನಿಮಗೆ ಒದಗಿ ಬರಲಿರುವ ಅವಕಾಶ ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಬರಹಗಾರರಿಗೆ ಪುರಸ್ಕಾರ ದೊರಕುತ್ತದೆ.

ಮೀನ: ನಿಮ್ಮ ಸೇವೆಯು ಅಧಿಕಾರಿಗಳಲ್ಲಿ ವಿಶ್ವಾಸವನ್ನು ಉಳಿಸಿಕೊಂಡು ಹೋಗುವ ರೀತಿಯಲ್ಲಿ ಇದ್ದರೆ ಒಳ್ಳೆಯದು. ಈ ದಿನ ಸಿಹಿಕಹಿಯ ಎರಡೂ ಅನುಭವಗಳು ನಿಮಗಾಗಬಹುದು. ಅನಗತ್ಯ ಅಲೆದಾಟಗಳು ತಪ್ಪಲಿದೆ.

ನುಡಿ ಬೆಳಗು

ನಕ್ಷತ್ರಲೋಕದಲ್ಲಿ ತಾಯಿಯ ಹುಡುಕಾಟ



ಪಿ. ಚಂದ್ರಿಕಾ

ಕಣ್ಣರಳಿಸಿ ಜಗತ್ತನ್ನು ನೋಡಬೇಕಿರುವ ಪುಟ್ಟ ವಯಸ್ಸು ಆ ಬಾಲಕನದ್ದು. ತನ್ನ ಸುತ್ತ ನಡೆಯುತ್ತಿದ್ದುದರ ಬಗ್ಗೆ ತಿಳಿಯುವ ಹಂಬಲದಲ್ಲಿದ್ದವ. ದುರಂತವೆಂದರೆ ಅವನು ಆ ವಯಸ್ಸಿನಲ್ಲಿ ತನ್ನ ತಾಯಿಯನ್ನು ಕಳೆದುಕೊಂಡುಬಿಟ್ಟ. ಆ ಮಗುವಿನ ಬಗ್ಗೆ ಎಲ್ಲರಿಗೂ ಕರುಣೆ, ತಾಯಿಲ್ಲದವನೆಂಬ ಅನುಕಂಪ. ಆದರೆ ಹುಡುಗನಿಗೆ ಮಾತ್ರ ತನ್ನ ತಾಯಿ ಏನಾದಳು ಎನ್ನುವ ಆತಂಕ, ಅವಳನ್ನು ಮತ್ತೆ ಕಾಣುವ ತವಕ.

ಅಜ್ಜಿಯನ್ನು ಕೇಳಿದ: 'ನನ್ನ ತಾಯಿ ಎಲ್ಲಿ?' ಅಜ್ಜಿ ಅವನಿಗೆ ಎಲ್ಲಾ ರೀತಿಯಲ್ಲೂ ವಿವರಿಸಿದಳು, 'ನಿನ್ನತಾಯಿ ಸತ್ತು ಹೋಗಿದ್ದಾಳೆ. ಅವಳು ಮತ್ತೆ ಬಾರದ ಲೋಕಕ್ಕೆ ಹೋಗಿದ್ದಾಳೆ' ಮುಂತಾಗಿ. ಸಣ್ಣ ಹುಡುಗನಿಗೆ ಇದೆಲ್ಲಾ ಅರ್ಥ ಮಾಡಿಕೊಳ್ಳುವ ಶಕ್ತಿ ಇಲ್ಲ. ಮತ್ತೆ ಮತ್ತೆ ಕೇಳಿದ, 'ನನ್ನ ತಾಯಿ ಎಲ್ಲಿ?'. ಅಜ್ಜಿಗೆ ಬೇಸರ, ದುಃಖ. ಜೊತೆಗೆ ಪುಟ್ಟ ಹುಡುಗನಿಗೆ ತಿಳಿಸಿ ಹೇಳಲಾಗದ ಅಸಹಾಯಕತೆ.

ಒಂದು ರಾತ್ರಿ ಮಾಳಿಗೆಯ ಮೇಲೆ ಮಲಗಿ ಆಕಾಶ ನೋಡುವಾಗ ಹುಡುಗ ಅಜ್ಜಿಯನ್ನು ಮತ್ತೆ ಅದೇ ಪ್ರಶ್ನೆ ಕೇಳಿದ. ಅವನ ಪ್ರಶ್ನೆಯಿಂದ ತಪ್ಪಿಸಿಕೊಳ್ಳುವುದೇ ಅವಳಿಗೆ ಸಾಹಸವಾಗಿತ್ತು. ತಕ್ಷಣಕ್ಕೆ ಅವನಿಂದ ಬಿಡಿಸಿಕೊಳ್ಳಲು ಆಕಾಶ ತೋರಿಸಿ, 'ನಿನ್ನ ತಾಯಿ ಅಲ್ಲಿ ನಕ್ಷತ್ರವಾಗಿದ್ದಾಳೆ' ಎದಳು. ಹುಡುಗ ನಂಬಿದ; ಹಸಿ ಗೋಡೆಯಂಥಾ ಅವನ ಮನಸ್ಸಿಗೆ ಅಜ್ಜಿಯ ಮಾತು ಹರಳಾಗಿ ಅಂಟಿಬಿಟ್ಟಿತ್ತು. ಹುಡುಕಾಟ ಶುರುವಾಯಿತು.

ಪ್ರತಿ ರಾತ್ರಿ ಮನೆಯ ಮಹಡಿಯ ಮೇಲೆ ಮಲಗುವುದು. ನಕ್ಷತ್ರಗಳಲ್ಲಿ ತನ್ನ ತಾಯಿಯನ್ನು ಹುಡುಕುವುದು ನಡೆದೇ ಇತ್ತು. ಮಧ್ಯ ಮಧ್ಯದಲ್ಲಿ ಅಜ್ಜಿಗೆ 'ನನ್ನ ತಾಯಿ ಆ ನಕ್ಷತ್ರಗಳಲ್ಲಿ ಎಲ್ಲಿದ್ದಾಳೆ' ಎಂದು ಕೇಳುತ್ತಿದ್ದ. ಅಜ್ಜಿ ಯಾವುದೋ ತೇಜೋಪುಂಜವಾದ ನಕ್ಷತ್ರವನ್ನು ತೋರಿಸಿ, 'ನೋಡಲ್ಲಿ' ಅನ್ನುತ್ತಿದ್ದಳು. ಹುಡುಗ ಅಜ್ಜಿ ತೋರಿಸಿದ ನಕ್ಷತ್ರವನ್ನು ಗಮನಿಸತೊಡಗಿದ. ಆ ನಕ್ಷತ್ರ ಚಲಿಸುತ್ತಿತ್ತು. ಅರೆ ತನ್ನ ತಾಯಿ ಏಕೆ ಓಡಾಡುತ್ತಿದ್ದಾಳೆ' ಎನಿಸಿ ಅವನಿಗೆ ಕುತೂಹಲ ಮೂಡಿತು. ಬರೀ ತನ್ನ ತಾಯಿ ಮಾತ್ರವಲ್ಲ ಆಕಾಶದಲ್ಲಿರುವ ಎಲ್ಲವೂ ಚಲಿಸುತ್ತಿವೆ ಎಂದು ಕಂಡುಕೊಂಡ. ದಿನಾ ಶ್ರದ್ಧೆಯಿಂದ ತಾಯಿಯನ್ನು ಹುಡುಕುತ್ತಿದ್ದವ ಸ್ವಲ್ಪ ದಿನಗಳ ನಂತರ ತನ್ನ ತಾಯಿ ಮರಳಿಬರಲಾರಳು ಎನ್ನುವ ಸತ್ಯವನ್ನುಅರ್ಥ ಮಾಡಿಕೊಂಡ. ತಾಯಿಯ ನೆಪದಲ್ಲಿ ದಿನಾ ನೋಡುತ್ತಿದ್ದ ನಕ್ಷತ್ರಗಳ ಲೋಕ ಅವನನ್ನು ಸೆಳೆಯಿತು. ನಕ್ಷತ್ರಕಾಯಗಳ ಚಲನೆಯಲ್ಲಿ ಮನ ನೆಟ್ಟಿತು. ಅವುಗಳ ನಿಖರವಾದ ಚಲನೆಯು ಆ ಹುಡುಗನಿಗೆ ಅರ್ಥವಾಗತೊಡಗಿತು. ಮುಂದೆ ಅವನು ಅತ್ಯಂತದೊಡ್ಡ ಖಗೋಳಶಾಸ್ತ್ರಜ್ಞ, ಗಣಿತಶಾಸ್ತ್ರಜ್ಞನಾದ. ಅದುವರೆಗೆ ನಂಬಿದ್ದಂತೆ ಭೂಮಿಯ ಸುತ್ತ ಸೂರ್ಯ ಸುತ್ತುವುದಿಲ್ಲ. ಬದಲಿಗೆ ಸೂರ್ಯನ ಸುತ್ತ ಭೂಮಿ ಸುತ್ತುತ್ತಿದೆ ಎಂದು ನಿರೂಪಿಸಿದ. ಅವನೇ ಗೆಲಿಲಿಯೋ.


ತೀವ್ರವಾದ ಹುಡುಕಾಟಗಳು ಮನುಷ್ಯನನ್ನು ಬಹು ಎತ್ತರಕ್ಕೆ ಒಯ್ಯುತ್ತವೆ ಮತ್ತು ಜಗತ್ತಿಗೆ ಮಹತ್ವದ ಕೊಡುಗೆಯನ್ನು ನೀಡುತ್ತವೆ ಎನ್ನುವುದಕ್ಕೆ ಗೆಲಿಲಿಯೋ ಉದಾಹರಣೆ. ❖

ಪದಬಂಧ 5500

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅಗಲವಾದ ಹರಿವಾಣ (3)
3. ವನದಲ್ಲಿರುವ ಉಡುಗೆ (3)
5. ಮದುವೆಯಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
6. ಶರಧಿಯೊಳಗಿರುವ ಬಾಣ (2)
8. ನಾವಿಕನಿರುವ ಸ್ವರ್ಗ! (2)
9. ಹತೋಟಿಗೆ ಪರ್ಯಾಯ ಪದ (2)
10. ಕಲಾವಿದನ ಮನೆ ಬಾಗಿಲು (2)
14. ಕೈಗೂಡದ ಆಸೆಯನ್ನು ಹೀಗೂ ಹೇಳುವರು (5)
15. ಕರಿಯ ಮರಿ ಬಿದ್ದ ಆಳವಾದ ಗುಂಡಿ (3)
16. ಓಬವ್ವನ ಆಯುಧ (3)

ಮೇಲಿನಿಂದ ಕೆಳಕ್ಕೆ
1. ಬೇರೆಯವರ ಅಧೀನದಲ್ಲಿರುವಿಕೆ (4)
2. ಅತಿಯಾದ ಆತುರ (3)
3. ಹಾರವನು ನೀಡಿದ ಚಿನ್ನದ ನಾಣ್ಯ (3)
4. ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7. ಕೀವು ಇಲ್ಲಿ ಕಾಣಿಸುತ್ತಿದೆ (3)
8. ನಾವಿಕನ ಮೂಗು! (3)
9. ಮಂಗಳಗ್ರಹಕ್ಕೆ ಹೀಗೂ ಕರೆವರು (4)
11. ಬಲಾತ್ಕಾರದ ಆಡಳಿತವನ್ನು ಹೀಗೆನ್ನಿ (4)
12. ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
13. ನಯನಾಜೂಕು ಇಲ್ಲದವ ತಿರುಗಿದ್ದಾನಲ್ಲಾ! (3)



ಹಿಂದಿನ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
3.ಜಯಶಾಲಿ 5.ನಗದು
6.ವಾತಾಯನ 8.ಗತ್ಯಂತರ
12.ಪ್ರಕರಣ 14.ಅನುವಾದ
15.ಮನವಿ 16.ವಿದ್ಯಮಾನ

ಮೇಲಿಂದ ಕೆಳಕ್ಕೆ
1.ಜನಮನ್ನಣೆ 2.ಮದುಮಗ
3.ಜನಿವಾರ 4.ಲಿಕನ
7.ಯತಿ 9.ತಟಾಕ
10.ತವಂದ್ಯಾವಿಅ 11.ಭಾನು
12.ಪ್ರದರ್ಶನ 13.ಣಬಾಮಸು
14.ಅಡವಿ

ಸುಡೊಕು 5886

	2			6	7	4		
3		4					7	2
	7			4	8		6	
	4			3			8	
8		9		7				
	5		8		4		9	7
2				9		7	3	
		3						
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5885 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಎಸ್‌.ಎಂ. ಕೃಷ್ಣ, ಬಸವರಾಜ ಬೊಮ್ಮಾಯಿ ಸೇರಿ ಪ್ರಮುಖ ನಾಯಕರ ಭೇಟಿ ಮಾಡಿದ ಬಿ.ವೈ. ವಿಜಯೇಂದ್ರ

ಒಗ್ಗಟ್ಟಿನಿಂದ ಹೆಚ್ಚು ಸ್ಥಾನ ಗೆಲ್ಲಿ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸೋಮವಾರ ಇಡೀ ದಿನವನ್ನು ಬಿಜೆಪಿ ಮತ್ತು ಜೆಡಿಎಸ್ ಹಿರಿಯ ನಾಯಕರ ಭೇಟಿಗೆ ಮೀಸಲಾಗಿಟ್ಟರು.

ಮೊದಲಿಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಆ ಬಳಿಕ ಪಕ್ಷದ ನಾಯಕರಾದ ಎಸ್.ಎಂ.ಕೃಷ್ಣ, ಶಾಸಕ ಬಸವರಾಜ ಬೊಮ್ಮಾಯಿ ಅವರ ಮನೆಗೆ ಭೇಟಿ ನೀಡಿ ದೀಪಾವಳಿಯ ಶುಭಾಶಯ ಕೋರಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ಮಾರ್ಗದರ್ಶನ ಮತ್ತು ಸಹಕಾರವನ್ನು ಕೋರಿದರು.

ದೇವೇಗೌಡರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, 'ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಿನಿಂದ ಮುನ್ನಡೆದು ಅತ್ಯಧಿಕ ಸ್ಥಾನಗಳನ್ನು ಗೆಲ್ಲುವುದಕ್ಕೆ ಒತ್ತು ನೀಡಬೇಕು. ಈ ನಿಟ್ಟಿನಲ್ಲಿ ಯಾವುದೇ ಸಮಸ್ಯೆ ಎದುರಾದರೆ ಎರಡೂ ಪಕ್ಷಗಳು ಒಟ್ಟಾಗಿಯೇ ಬಗೆಹರಿಸಿಕೊಳ್ಳಬೇಕು. ದೇಶದ ಭವಿಷ್ಯ ನಿರ್ಮಾಣ ಮಾಡುವ ಚುನಾವಣೆ ಆಗಿರುವುದರಿಂದ ಹೆಚ್ಚು ಯುವಕರು ಸಕ್ರಿಯ ರಾಜಕಾರಣಕ್ಕೆ ಬರಬೇಕು' ಎಂದು ದೇವೇಗೌಡರು ಸಲಹೆ ನೀಡಿದರು ಎಂದರು.

'ದೊಡ್ಡ ರಾಷ್ಟ್ರೀಯ ಪಕ್ಷದಲ್ಲಿ ಇಷ್ಟು ಚಿಕ್ಕವಯಸ್ಸಿಗೆ ದೊಡ್ಡ ಜವಾಬ್ದಾರಿ ನೀಡಿದ್ದಾರೆ. ನಿಮ್ಮ ತಂದೆ ಯಡಿಯೂರಪ್ಪ ಅವರಂತೇ ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯದ ತುಂಬ ಪ್ರವಾಸ ಮಾಡಿ ಸಂಘಟನೆಗೆ ಶಕ್ತಿ ತುಂಬಿದರೆ ಯಶಸ್ಸು ಸಿಗುತ್ತದೆ ಎಂದು ಹಾರೈಸಿದರು. ಪಕ್ಷದ ಹಿತದೃಷ್ಟಿಯಿಂದ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಸಲಹೆಗಳನ್ನು ಪಡೆಯುತ್ತೇನೆ' ಎಂದೂ ಹೇಳಿದರು.

ವಿಜಯೇಂದ್ರ ಭೇಟಿ ಬಳಿಕ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, 'ಇಂದಿಲ್ಲ, ನಾಳೆ ಯುವ ಪ್ರತಿಭೆಗಳು ಹೊರಹೊಮ್ಮಲೇಬೇಕು. ಅವರ ಜತೆ ಹಿರಿಯರು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಅದಕ್ಕೆ ಹಿರಿಯರು ಅನುವು ಮಾಡಿಕೊಟ್ಟು ಅವರ ಕೈಗಳನ್ನು ಬಲಪಡಿಸಬೇಕು ಮತ್ತು ಮಾರ್ಗದರ್ಶನ ನೀಡಬೇಕು' ಎಂದು ಸಲಹೆ ನೀಡಿದರು.

ಶಾಸಕ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಆದ ಸಂದರ್ಭದಲ್ಲಿ 'ನಿಮ್ಮ ಸಂಘಟನಾತ್ಮಕ ಅವಧಿಯಲ್ಲಿ ಪಕ್ಷ ಇನ್ನಷ್ಟು ಸದೃಢವಾಗಿ ಬೆಳೆಯಲಿ' ಎಂದು ಹಾರೈಸಿದರು.

ಮಾಜಿ ಸಚಿವ ಗೋವಿಂದ ಕಾರಜೋಳ, ಶಾಸಕ ಎಸ್. ಸುರೇಶ್‌ಕುಮಾರ್, ಸಂಸದ ಪಿ.ಸಿ. ಮೋಹನ್, ಆರ್.ಅಶೋಕ ಅವರನ್ನೂ ವಿಜಯೇಂದ್ರ ಭೇಟಿ ಮಾಡಿದರು.



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸೋಮವಾರ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರನ್ನು ಬೆಂಗಳೂರಿನ ಪದ್ಮನಾಭನಗರದ ಅವರ ನಿವಾಸದಲ್ಲಿ ಭೇಟಿ ಮಾಡಿದರು. ಸಂಸದ ಪ್ರಜ್ವಲ್ ರೇವಣ್ಣ ಇದ್ದರು

'ಮೋದಿ ಪುನರಾಯ್ಕೆಗೆ ಬೆಂಬಲ'

'ಪ್ರಧಾನಿ ನರೇಂದ್ರ ಮೋದಿ ಅವರನ್ನು ಪುನರಾಯ್ಕೆ ಮಾಡುವುದಕ್ಕಾಗಿ ಬೆಂಬಲ ನೀಡುತ್ತಿದ್ದೇವೆ. ಈ ಕಾರಣಕ್ಕಾಗಿ ಜೆಡಿಎಸ್ ಬಿಜೆಪಿ ಜತೆಯಾಗಿ ಲೋಕಸಭಾ ಚುನಾವಣೆ ಎದುರಿಸಲಿವೆ' ಎಂದು ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಹೇಳಿದರು.

ಜೆಡಿಎಸ್–ಬಿಜೆಪಿ ಮೈತ್ರಿ ಕುರಿತು ಸೋಮವಾರ ಪ್ರತಿಕ್ರಿಯಿಸಿದ ಅವರು, ಜಂಟಿ ಹೋರಾಟದಿಂದ ಚುನಾವಣೆಯಲ್ಲಿ ಮೈತ್ರಿಕೂಟಕ್ಕೆ ಹೆಚ್ಚಿನ ಲಾಭವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'ನಾವು ಲೋಕಸಭಾ ಚುನಾವಣೆಯಲ್ಲಿ ಒಟ್ಟಾಗಿ ಹೋರಾಡುವುದರಿಂದ 22ರಿಂದ 24 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತೇವೆ. ಮೈತ್ರಿಗೆ ಸಂಬಂಧಿಸಿದಂತೆ ಯಾವುದೇ ಭಿನ್ನಾಭಿಪ್ರಾಯವಿದ್ದರೂ ಪಕ್ಷದೊಳಗೆ ಬಗೆಹರಿಸಿಕೊಳ್ಳುತ್ತೇವೆ' ಎಂದರು.

ಉತ್ತಮ ಆಯ್ಕೆ: 'ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿರುವುದು ಉತ್ತಮ ಆಯ್ಕೆ. ಯುವ ಸಮೂಹದಲ್ಲಿ ಸಂಚಲನ ಸೃಷ್ಟಿಸಿರುವ ನಾಯಕನಿಗೆ ಅಧ್ಯಕ್ಷ ಸ್ಥಾನ ನೀಡುವ ಮೂಲಕ ಬಿಜೆಪಿ ಹೈಕಮಾಂಡ್ ಒಳ್ಳೆಯ ನಿರ್ಧಾರ ಕೈಗೊಂಡಿದೆ' ಎಂದು ಹೇಳಿದರು.

'ಕರ್ನಾಟಕ ಡಿಕೆಶಿ ಗಣರಾಜ್ಯವೆ?'

'ರಾಜ್ಯ ಸರ್ಕಾರದ ಗ್ಯಾರಂಟಿಗಳ ಕುರಿತು ವಿರೋಧ ಪಕ್ಷದವರು ಮಾತನಾಡಬಾರದು ಎನ್ನುವುದಾದರೆ ಕರ್ನಾಟಕ ರಾಜ್ಯ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಿಪಬ್ಲಿಕ್ (ಗಣರಾಜ್ಯ) ಆಗಿ ಬದಲಾಗಿದೆಯೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಗ್ಯಾರಂಟಿಗಳಿಗೂ ಕುಮಾರಸ್ವಾಮಿಗೂ ಏನು ಸಂಬಂಧ' ಎಂದು ಶಿವಕುಮಾರ್ ಪ್ರಶ್ನಿಸಿರುವ ಕುರಿತು 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ಅಧಿಕಾರದ ಪಿತ್ತ ನೆತ್ತಿಗೇರಿ ಮಿದುಳು ಕೆಲಸ ಮಾಡದಿದ್ದರೆ ನಾಲಿಗೆ ಹೀಗೆ ಮಾತನಾಡುತ್ತದೆ. ಇದರಲ್ಲಿ ಅಚ್ಚರಿಯೇನೂ ಇಲ್ಲ' ಎಂದಿದ್ದಾರೆ.

'ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ, ಪ್ರತಿಪಕ್ಷ ಎರಡೂ ಇರುತ್ತವೆ. ಇದು ಗೊತ್ತಿಲ್ಲದಷ್ಟು ಅಜ್ಞಾನವೆ? ಪ್ರಶ್ನೆ ಮಾಡುವುದಕ್ಕಾಗಿಯೇ ಜನರು ನನ್ನನ್ನು ವಿರೋಧ ಪಕ್ಷದಲ್ಲಿ ಕೂರಿಸಿದ್ದಾರೆ. ಸ್ವಲ್ಪ ಸಮಯದ ನಂತರ ತಿರುಗುವ ತಲೆ ತಾನಾಗಿಯೇ ನಿಲ್ಲುತ್ತದೆ' ಎಂದು ಕುಟುಕಿದ್ದಾರೆ.

'ಚುನಾವಣೆ ಗೆಲ್ಲಬೇಕಾದರೆ ಇಂತಹ ಅಗ್ಗದ ಗಿಮಿಕ್‌ಗಳನ್ನು ಮಾಡಲೇಬೇಕಾಗುತ್ತದೆ ಎಂದು ಸಚಿವರೊಬ್ಬರು ಹೇಳಿದ್ದರು. ಉಪ ಮುಖ್ಯಮಂತ್ರಿಯವರ ಸಂಪುಟ ಸಹೋದ್ಯೋಗಿ ಹೇಳಿದ್ದನ್ನೇ ನಾನು ಹೇಳಿದ್ದೇನೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ರಾಜ್ಯ ಸರ್ಕಾರ ಶ್ವೇತಪತ್ರ ಹೊರಡಿಸಲಿ' ಎಂದು ಆಗ್ರಹಿಸಿದ್ದಾರೆ.

'ಬಡವರ ಮೇಲೆ ದ್ವೇಷ ಯಾಕೆ?'

'ರಾಜ್ಯದ ಬಡವರ ಮೇಲೆ ಈ ಪರಿಯ ದ್ವೇಷ ಯಾಕೆ. ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವುದೆಂದರೆ ಕೋಟ್ಯಂತರ ಸಂಖ್ಯೆಯಲ್ಲಿರುವ ಬಡ ಫಲಾನುಭವಿಗಳನ್ನು ವಿರೋಧಿಸುವುದೆಂದೇ ಅರ್ಥ. ಯಾಕೆ ಬಡವರ ಹೊಟ್ಟೆಗೆ ಹೊಡೆಯುವ ಕಿಚ್ಚು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಬಗ್ಗೆ ಕುಮಾರಸ್ವಾಮಿ ಮಾಡಿರುವ ಟೀಕೆಗಳಿಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ಗ್ಯಾರಂಟಿ ಯೋಜನೆಗಳ ಲಾಭ ಪಡೆದು ಸಂಭ್ರಮಿಸುವವರಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮತದಾರರೂ ಇದ್ದಾರೆ. ಗ್ಯಾರಂಟಿ ಯೋಜನೆಗಳ ಫಲಿತಾಂಶವನ್ನು ತಿಳಿದುಕೊಳ್ಳಬೇಕಾದ ಪ್ರಾಮಾಣಿಕ ಉದ್ದೇಶವಿದ್ದರೆ ಹಳ್ಳಿಗಳಿಗೆ ತೆರಳಿ ಫಲಾನುಭವಿಗಳನ್ನು ಮಾತನಾಡಿಸಿ' ಎಂದಿದ್ದಾರೆ.

'ಬಿಜೆಪಿಯ ಬೂಟಾಟಿಕೆಯ ನಡವಳಿಕೆಯನ್ನು ಇಡೀ ದೇಶ ಕಂಡು ಛೀಮಾರಿ ಹಾಕುತ್ತಿದೆ. ಗ್ಯಾರಂಟಿ ಯೋಜನೆಗಳು ಸೇರಿದಂತೆ ಇಂತಹ ಯೋಜನೆಗಳೆಲ್ಲ ಬಿಟ್ಟಿ ಭಾಗ್ಯ ಎಂದು ಗೇಲಿ ಮಾಡುತ್ತಿದ್ದ ಬಿಜೆಪಿ, ಐದು ರಾಜ್ಯಗಳ ಚುನಾವಣಾ ಪ್ರಣಾಳಿಕೆಯಲ್ಲಿ ಇಂತಹ 'ಬಿಟ್ಟಿ ಭಾಗ್ಯ'ಗಳನ್ನೆಲ್ಲ ಸೇರಿಸಿ ಬಿಟ್ಟಿದೆ. ಅವರಿಗೆ ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ನೈತಿಕತೆ ಇಲ್ಲ. ಬಿಜೆಪಿ ನಡವಳಿಕೆಯನ್ನು ಪ್ರಶ್ನಿಸುವ ದಮ್ಮು, ತಾಕತ್ತು ಕುಮಾರಸ್ವಾಮಿಗೂ ಇಲ್ಲ' ಎಂದು ಕುಟುಕಿದ್ದಾರೆ.

ಸುದ್ದಿ 2 ನಿಮಿಷ

'ಪ್ರಚಾರದ ಹೊಣೆ: ವಿಜಯೇಂದ್ರ ಪದಗ್ರಹಣಕ್ಕೆ ಹಾಜರಾಗಲಾಗದು'

ಚಿಕ್ಕಮಗಳೂರು: 'ಮಧ್ಯ ಪ್ರದೇಶದ ಚುನಾವಣೆಯ ಜವಾಬ್ದಾರಿ ಇರುವುದರಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಪದಗ್ರಹಣ ಸಮಾರಂಭಕ್ಕೆ ಹಾಜರಾಗುತ್ತಿಲ್ಲ' ಎಂದು ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

'ಅವರು ಅಧ್ಯಕ್ಷರಾಗಿ ನೇಮಕವಾದ ಬಳಿಕ ಎರಡು ಬಾರಿ ನನ್ನ ಜತೆ ಮಾತನಾಡಿದ್ದಾರೆ. ಮಧ್ಯಪ್ರದೇಶದ ಚುನಾವಣೆ ನಿರ್ವಹಿಸುವ ಜವಾಬ್ದಾರಿಯನ್ನು ಪಕ್ಷ ನೀಡಿರುವುದರಿಂದ ಅಲ್ಲಿಗೆ ತೆರಳುತ್ತಿದ್ದೇನೆ. ನ.15ರ ರಾತ್ರಿ ಮರಳುತ್ತೇನೆ. ಈ ವಿಷಯವನ್ನು ವಿಜಯೇಂದ್ರ ಅವರ ಗಮನಕ್ಕೆ ತಂದಿದ್ದೇನೆ' ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.



'ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಗೌರವ ಕೊಟ್ಟೇ ಕೊಡುತ್ತೇವೆ. ಪಕ್ಷದ ಗೆರೆಯನ್ನು ನಾನು ಯಾವಾಗಲೂ ದಾಟಿಲ್ಲ. ನ್ಯಾಯಾಧೀಶರು ಬದಲಾಗುತ್ತಾರೆ, ಆದರೆ, ನ್ಯಾಯಪೀಠಕ್ಕೆ ಗೌರವ ಇದ್ದೇ ಇರುತ್ತದೆ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬುದಷ್ಟೆ ನಮ್ಮ ಗುರಿ' ಎಂದು ಹೇಳಿದರು.

ಕಂಡವರ ಹಣದಲ್ಲಿ ಮಜಾ ಮಾಡುವುದು ಸಮಾಜವಾದಿ ತತ್ವವೇ: 'ರಾಜ್ಯದಲ್ಲಿ ಬರ ಇದ್ದು, ರೈತರು ಕಷ್ಟದಲ್ಲಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಆದಿಯಾಗಿ ಸಚಿವ ಸಂಪುಟದ ಸಹೋದ್ಯೋಗಿಗಳ ಮನೆಗೆ ಕೋಟಿಗಟ್ಟಲೆ ಮೊತ್ತದ ಪೀಠೋಪಕರಣ ಖರೀದಿ ಮಾಡಿದ್ದಾರೆ. ಇದು ಸರಿಯೇ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾಜವಾದಿ ಎಂದು ಹೇಳಿಕೊಳ್ಳುತ್ತಾರೆ ಕಂಡವರ ಹಣದಲ್ಲಿ ಮಜಾ ಮಾಡುವುದು ಸಮಾಜವಾದಿ ತತ್ವವೇ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಸೇರಲು ಮಾಜಿ ಸಂಸದ ಮುದ್ದಹನುಮೇಗೌಡ ಒಲವು'

ತುಮಕೂರು: ಮಾಜಿ ಸಂಸದ ಎಸ್‌.ಪಿ.ಮುದ್ದಹನುಮೇಗೌಡ ಕಾಂಗ್ರೆಸ್ ಸೇರಲು ಒಲವು ತೋರಿದ್ದಾರೆ ಎಂಬ ಮಾಹಿತಿ ಇದೆ ಎಂದು ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿ, ಮುದ್ದಹನುಮೇಗೌಡ ಕಾಂಗ್ರೆಸ್ ಸೇರುತ್ತಾರೆ ಎನ್ನುವ ವಿಚಾರವನ್ನು ಸಂಪೂರ್ಣವಾಗಿ ಒಪ್ಪಲು, ಅಲ್ಲಗಳೆಯಲು ಆಗುವುದಿಲ್ಲ. ಈ ವಿಷಯದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಬಳಿಯೂ ಹಲವು ಮುಖಂಡರು ಚರ್ಚಿಸಿದ್ದಾರೆ ಎಂದರು.

'ನನಗೂ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಆಸೆ ಇದೆ. ಟಿಕೆಟ್ ನೀಡುವಂತೆ ಹೈಕಮಾಂಡ್ ಮುಂದೆ ಬೇಡಿಕೆ ಇಟ್ಟಿದ್ದೇನೆ. ಅವಕಾಶ ಸಿಕ್ಕರೆ ಸ್ಪರ್ಧೆ ಮಾಡುತ್ತೇನೆ' ಎಂದರು.

310 ಕಡತಗಳಿಗೆ ಪ್ರಿಯಾಂಕ್ ಮುಕ್ತಿ

ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಸಂಬಂಧಿಸಿದ ಕಡತಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದಂತೆ ದೀರ್ಘಕಾಲದಿಂದ ಬಾಕಿ ಉಳಿದಿದ್ದ 310 ಕಡತಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ವಿಲೇವಾರಿ ಮಾಡಿದ್ದಾರೆ.

ಇಲಾಖಾ ವಿಚಾರಣೆಗೆ ಆದೇಶ ಹೊರಡಿಸುವುದು, ಇಲಾಖಾ ವಿಚಾರಣೆಗಳ ವರದಿಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವುದು, ಲೋಕಾಯುಕ್ತ ತನಿಖೆಗೆ ವಹಿಸುವುದು, ತನಿಖಾ ವರದಿಗಳ ಕುರಿತು ನಿರ್ಧಾರ ಕೈಗೊಳ್ಳುವುದು, ಅಪರಾಧ ಸಾಬೀತಾದ ಪ್ರಕರಣಗಳಲ್ಲಿ ಸೇವೆಯಿಂದ ವಜಾಗೊಳಿಸುವುದು, ನಿವೃತ್ತ ನೌಕರರ ವಿರುದ್ಧ ದಂಡನೆ ವಿಧಿಸುವುದಕ್ಕೆ ಸಂಬಂಧಿಸಿದ ಕಡತಗಳು ಇದರಲ್ಲಿ ಸೇರಿವೆ. ಒಂದು ವರ್ಷದಿಂದ ಎಂಟು ವರ್ಷಗಳಷ್ಟು ಹಳೆಯ ಕಡತಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಕುರಿತು 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಿಯಾಂಕ್, 'ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕಚೇರಿಯಲ್ಲಿ ಸ್ವಚ್ಛತಾ ಕೆಲಸ ಮಾಡಿದ್ದೇನೆ. ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರವು ಬಾಕಿ ಉಳಿಸಿಕೊಂಡಿದ್ದ 300ಕ್ಕೂ ಹೆಚ್ಚು ಕಡತಗಳನ್ನು ವಿಲೇವಾರಿ ಮಾಡಿದ್ದೇನೆ' ಎಂದಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ನಾನು ಇ–ಆಫೀಸ್ ತಂತ್ರಾಂಶವನ್ನು ನಿರಂತರವಾಗಿ ಗಮನಿಸುತ್ತಿರುತ್ತೇನೆ. 50ಕ್ಕಿಂತ ಹೆಚ್ಚು ಕಡತಗಳು ಬಾಕಿ ಉಳಿಯದಂತೆ ಕ್ರಮ ಕೈಗೊಳ್ಳುತ್ತಿದ್ದೇನೆ. 500ಕ್ಕೂ ಹೆಚ್ಚು ಭೌತಿಕ ಕಡತಗಳು ಬಾಕಿ ಇರುವುದು ಇತ್ತೀಚೆಗೆ ಗಮನಕ್ಕೆ ಬಂದಿತ್ತು. ಅವುಗಳಲ್ಲಿ 310 ಕಡತಗಳಿಗೆ ಸೋಮವಾರ ಮುಕ್ತಿ ನೀಡಿದ್ದೇನೆ' ಎಂದರು.

ಭ್ರಷ್ಟಾಚಾರ ನಿಗ್ರಹದ ವಿಷಯದಲ್ಲಿ ಹಿಂದಿನ ಬಿಜೆಪಿ ಸರ್ಕಾರ ಎಷ್ಟು ಗಂಭೀರವಾಗಿತ್ತು ಎಂಬುದಕ್ಕೆ ಈ ಕಡತಗಳು ಉದಾಹರಣೆ. ಈ ರೀತಿ ಕಡತಗಳನ್ನು ಬಾಕಿ ಉಳಿಸಿಕೊಂಡು, ಭ್ರಷ್ಟಾಚಾರ, ದುರಾಡಳಿತಕ್ಕೆ ಯಾವ ಶಿಕ್ಷೆಯೂ ಆಗದು ಎಂಬ ಭಾವನೆ ಬೆಳೆಯಲು ಹಿಂದಿನ ಸರ್ಕಾರ ಕಾರಣವಾಗಿತ್ತು ಎಂದು ದೂರಿದರು.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವಿರುದ್ಧದ ಶಿಸ್ತುಕ್ರಮಕ್ಕೆ ಸಂಬಂಧಿಸಿದಂತೆ ದೀರ್ಘ ಕಾಲದಿಂದ ಬಾಕಿ ಉಳಿದಿದ್ದ ಕಡತಗಳನ್ನು ವಿಲೇವಾರಿ ಮಾಡಿದರು

'ಶಾಸಕರಿಗೆ ಗಂಡ ಭೇರುಂಡ ಲಾಂಛನವುಳ್ಳ ಬ್ಯಾಡ್ಜ್'

ಒಂದನೇ ಪುಟದಿಂದ...

ಬೆಂಗಳೂರಿನ ಐ ಡ್ರೀಮ್ಸ್ ಟ್ರೇಡ್ ಆ್ಯಂಡ್ ಇವೆಂಟ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯಿಂದ ಪ್ರತಿ ಬ್ಯಾಡ್ಜ್‌ಗೆ ಜಿಎಸ್‌ಟಿ ಸೇರಿದಂತೆ ₹2,832ರ ದರದಲ್ಲಿ ಬ್ಯಾಡ್ಜ್‌ಗಳನ್ನು ಖರೀದಿಸಲಾಗುತ್ತಿದೆ.

₹19.03 ಲಕ್ಷ ವೆಚ್ಚದಲ್ಲಿ ಬ್ಯಾಡ್ಜ್‌ಗಳನ್ನು ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4–ಜಿ ಅಡಿ ವಿನಾಯ್ತಿ ನೀಡಿ ಆರ್ಥಿಕ ಇಲಾಖೆ ಅಕ್ಟೋಬರ್ 30ರಂದು ಆದೇಶ ಹೊರಡಿಸಿದೆ.

'ಆಸ್ಟ್ರೇಲಿಯಾದ ಮೇಯರ್ ಒಬ್ಬರನ್ನು ಇತ್ತೀಚೆಗೆ ಭೇಟಿಮಾಡಿದ್ದೆ. ಅವರು ಸರ್ಕಾರದ ಲಾಂಛನವುಳ್ಳ ಬ್ಯಾಡ್ಜ್ ಅನ್ನು ನನಗೆ ಉಡುಗೊರೆಯಾಗಿ ನೀಡಿದ್ದರು. ಅಲ್ಲಿನ ಚುನಾಯಿತ ಪ್ರತಿನಿಧಿಗಳು ಗೌರವ ಸೂಚಕವಾಗಿ ಸರ್ಕಾರದ ಲಾಂಛನವುಳ್ಳ ಬ್ಯಾಡ್ಜ್ ಧರಿಸುವ ವಿಷಯ ತಿಳಿಸಿದ್ದರು. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಶಾಸಕರಿಗೆ ಸರ್ಕಾರದ ಅಧಿಕೃತ ಲಾಂಛನವುಳ್ಳ ಬ್ಯಾಡ್ಜ್ ವಿತರಿಸಲು ತೀರ್ಮಾನಿಸಲಾಗಿದೆ' ಎಂದು ಖಾದರ್ 'ಪ್ರಜಾವಾಣಿ'ಗೆ ತಿಳಿಸಿದರು.

ಶಾಸಕರನ್ನು ಗುರುತಿಸುವುದಕ್ಕೂ ಈ ಬ್ಯಾಡ್ಜ್‌ಗಳಿಂದ ಅನುಕೂಲ ಆಗಲಿದೆ. ಬ್ಯಾಡ್ಜ್ ಧರಿಸಿ ಹೋಗುವುದು ಶಾಸಕರಿಗೆ ಗೌರವದ ವಿಚಾರವೂ ಆಗಲಿದೆ

ಯು.ಟಿ. ಖಾದರ್
ವಿಧಾನಸಭೆಯ ಅಧ್ಯಕ್ಷ

ಉಡುಗೊರೆ ನೀಡುವುದಕ್ಕೂ ಸಿದ್ಧತೆ: ಶಾಸಕರು, ಗಣ್ಯರು, ಅಧಿಕಾರಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ವಿಧಾನಸಭೆ ಸಚಿವಾಲಯದಿಂದ ಸರ್ಕಾರದ ಲಾಂಛನವುಳ್ಳ ಡೈರಿ, ಪೆನ್, ಸ್ಟೀಲ್ ನೀರಿನ ಬಾಟಲಿ, ವಿಸಿಟಿಂಗ್ ಕಾರ್ಡ್ ಹೋಲ್ಡರ್ ಮತ್ತು ಕೀ ಚೈನ್ ವಿತರಣೆಗೆ ಸಿದ್ಧತೆ ನಡೆದಿದೆ.

ಈ ಎಲ್ಲ ವಸ್ತುಗಳನ್ನು ಒಳಗೊಂಡ 1,000 ಉಡುಗೊರೆ ಬಾಕ್ಸ್‌ಗಳನ್ನು ತಲಾ ₹1,947ರ ದರದಲ್ಲಿ ಮಂಗಳೂರಿನ ಉಳ್ಳಾಲದ ಬಿ.ಕೆ. ಸಪ್ಲೈಯರ್ಸ್ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ. ಇದಕ್ಕಾಗಿ ₹19.47 ಲಕ್ಷ ವ್ಯಯಿಸಲು ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4–ಜಿ ಅಡಿಯಲ್ಲಿ ವಿನಾಯ್ತಿ ನೀಡಲಾಗಿದೆ.

2ನೇ ಪತ್ನಿ ಆರೋಪ: ಎಚ್‌ಡಿಕೆ ವಿರುದ್ಧದ ದೂರು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದ ಎಚ್‌.ಡಿ.ಕುಮಾರಸ್ವಾಮಿ ಅವರು, ಚುನಾವಣೆ ಸಮಯದಲ್ಲಿ ಪ್ರಮಾಣ ಪತ್ರ ಸಲ್ಲಿಸುವಾಗ ತಮ್ಮ ಎರಡನೇ ಪತ್ನಿ ಹಾಗೂ ಮಗಳ ವಿವರ ಬಚ್ಚಿಟ್ಟಿದ್ದಾರೆ' ಎಂದು ಆರೋಪಿಸಲಾಗಿದ್ದ ಖಾಸಗಿ ದೂರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಈ ಸಂಬಂಧ, 'ವಿಶ್ವ ಕನ್ನಡ ಸಮಾಜ'ದ ಸಂಸ್ಥಾಪಕ ಎಸ್‌.ಆನಂದ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್; 'ದೂರುದಾರರ ಆರೋಪಗಳಿಗೆ ಆಧಾರವಿಲ್ಲ' ಎಂದು ಹೇಳಿದ್ದಾರೆ.

'ದೂರುದಾರರು ತಮ್ಮ ಆರೋಪಗಳನ್ನು ಸಾಬೀತುಪಡಿಸುವಂತಹ ಒಂದೇ ಒಂದು ತುಣುಕು ದಾಖಲೆಯನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹೀಗಾಗಿ, ಅವರು ತಮ್ಮ ಆರೋಪ ಸಾಬೀತುಪಡಿಸುವಲ್ಲಿ ವಿಫಲವಾಗಿದ್ದಾರೆ. ಹೀಗಾಗಿ, ಐಪಿಸಿ ಕಲಂ 181 ರ ಅಡಿಯಲ್ಲಿ ಕುಮಾರಸ್ವಾಮಿ ಅವರು ಯಾವುದೇ ಅಪರಾಧ ಎಸಗಿಲ್ಲ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ದೂರಿನಲ್ಲಿ ಏನಿತ್ತು?: 'ಕುಮಾರಸ್ವಾಮಿ ಅವರು 2018ರ ಮೇನಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ನಾಮಪತ್ರ ಸಲ್ಲಿಕೆ ವೇಳೆ ಪ್ರಮಾಣಪತ್ರದಲ್ಲಿ ತಮ್ಮ ಎರಡನೇ ಪತ್ನಿ ರಾಧಿಕಾ ಕುಮಾರಸ್ವಾಮಿ ಮತ್ತು ಪುತ್ರಿ ಶಮಿಕಾ ಕುಮಾರಸ್ವಾಮಿ ಬಗ್ಗೆ ಚುನಾವನಾ ಆಯೋಗಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ. ಇದು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 181ರ (ಪ್ರಮಾಣ ಪತ್ರ ಸಲ್ಲಿಕೆಯಲ್ಲಿ ಸುಳ್ಳು ಹೇಳಿಕೆ) ಮತ್ತು ಜನಪ್ರತಿನಿಧಿ ಕಾಯ್ದೆ–1951ರ ಕಲಂ 125 ಎ (ತಪ್ಪು ಮಾಹಿತಿ ಒದಗಿಸುವುದು) ಅಡಿಯಲ್ಲಿನ ಅಪರಾಧವಾಗಿದೆ' ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ಅಕ್ರಮ ತಡೆಗೆ ಕೆಇಎ ಸೂತ್ರ

ಒಂದನೇ ಪುಟದಿಂದ...

ಅಲ್ಲದೆ, ಈ ಹುದ್ದೆಗಳಿಗೆ ನಡೆಸುವ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಕೂಡಾ ಕನ್ನಡ, ಇಂಗ್ಲಿಷ್, ಕಂಪ್ಯೂಟರ್ ಸೈನ್ಸ್ ಮತ್ತು ಸಾಮಾನ್ಯ ಜ್ಞಾನ ಆಧಾರಿತ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಅದರಿಂದಾಗಿ, ಯಾವುದೇ ವ್ಯಕ್ತಿ ಅಲ್ಪ ಪರಿಣತಿ ಇದ್ದರೂ ಗೂಗಲ್ ಮುಂತಾದ ತಂತ್ರಾಂಶಗಳನ್ನು ಬಳಸಿ ಉತ್ತರ ಸಿದ್ಧಪಡಿಸಬಹುದಾಗಿದೆ. ಅಭ್ಯರ್ಥಿಗಳ ಸಂಖ್ಯೆ ಹೆಚ್ಚು, ಹುದ್ದೆಗಳ ಸಂಖ್ಯೆ ಕಡಿಮೆ ಹಾಗೂ ಮುಂದುವರಿದ ತಂತ್ರಜ್ಞಾನದ ಸಹಾಯದಿಂದ ಪರೀಕ್ಷೆಗಳಲ್ಲಿ ಅಕ್ರಮ ವಿಧಾನಗಳನ್ನು ಅನುಸರಿಸಿ ಅಂಕಗಳನ್ನು ಗಳಿಸುವ ಪ್ರಯತ್ನ ಇತ್ತೀಚೆಗೆ ಹೆಚ್ಚಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ವಿವರಿಸಿದ್ದಾರೆ.

'ನಿರ್ದಿಷ್ಟ ವಿದ್ಯಾರ್ಹತೆಯ ಅನೇಕ ಹುದ್ದೆಗಳ ನೇಮಕಾತಿಗೆ ಕೆಇಎ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಸಾಮಾನ್ಯ ವಿದ್ಯಾರ್ಹತೆ ಇರುವ ಹುದ್ದೆಗಳಿಗೆ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದ್ದು, ಪರೀಕ್ಷಾ ಅಕ್ರಮಗಳ ಸಾಧ್ಯತೆಯೂ ಹೆಚ್ಚಿರುತ್ತದೆ' ಎಂದೂ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂಬೇಡ್ಕರ್ ನಿಗಮಕ್ಕೆ ಪ್ರವೀಣ್ ಎಂ.ಡಿ

ಬೆಂಗಳೂರು: ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾಗಿರುವ ಐಎಎಸ್ ಅಧಿಕಾರಿ ಪ್ರವೀಣ್ ಪಿ. ಬಾಗೇವಾಡಿ ಅವರನ್ನು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಸೋಮವಾರ ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಸದಸ್ಯ ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ಪ್ರವೀಣ್ ಅವರಿಗೆ ವಹಿಸಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ತಿಳಿಸಿದೆ.

ತಂದೆ, ತಾಯಿ ನೋಡಿಕೊಳ್ಳುವುದು ಮಕ್ಕಳ ಕಾನೂನು ಬಾಧ್ಯತೆ: ಹೈಕೋರ್ಟ್

ಪೋಷಕರನ್ನು ಧರ್ಮಕ್ಕೆ ನೋಡಿಕೊಳ್ಳಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಳಿನ ಮುಸ್ಸಂಜೆಯಲ್ಲಿ ಪಯಣಿಸುವ ಅಪ್ಪ ಮತ್ತು ಅಮ್ಮನನ್ನು ಮಕ್ಕಳು ಧರ್ಮಕ್ಕೆ ನೋಡಿಕೊಳ್ಳಬೇಕಾಗಿಲ್ಲ. ಅದು ಅವರ ಕಾನೂನು ಬಾಧ್ಯತೆ, ಮಾತ್ರವಲ್ಲ ನೈತಿಕತೆಯ ಆದ್ಯ ಕರ್ತವ್ಯವೂ ಹೌದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣವೊಂದರಲ್ಲಿ ಮಗಳು ಮತ್ತು ಅಳಿಯ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಹಿರಿಯರ ಆರೈಕೆಯ ನಿಟ್ಟಿನಲ್ಲಿ ವಿಶ್ವಸಂಸ್ಥೆ 1991ರಲ್ಲಿ ನಿರ್ಣಯವೊಂದನ್ನೂ ಕೈಗೊಂಡಿದೆ.ಪೋಷಕರನ್ನು ಪ್ರೀತಿಯಿಂದ ಆರೈಕೆ ಮಾಡುವುದು ಮಕ್ಕಳ ಕರ್ತವ್ಯ. ಪೋಷಕರಿಂದ ಸ್ಥಿರಾಸ್ತಿಯನ್ನು ಉಡುಗೊರೆ ರೂಪದಲ್ಲಿ ಪಡೆದಿದ್ದರೆ ಪ್ರೀತಿ ಇನ್ನಷ್ಟು ಹೆಚ್ಚಿರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಪೋಷಕರ ಮೇಲೆ ಹತ್ತಿರದವರಿಂದಲೇ ನಡೆಯುವ ದೌರ್ಜನ್ಯ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿವೆ. ಇದು ಉತ್ತಮ ಬೆಳವಣಿಗೆಯಲ್ಲ. ಇಂಥ ಪ್ರಕರಣಗಳಲ್ಲಿ ನ್ಯಾಯಾಲಯಗಳು, ಪ್ರಾಧಿಕಾರಗಳು ಹೆಚ್ಚು ಸಂವೇದನಾಶೀಲವಾಗಿರಬೇಕು. ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿದ್ದು ಈ ಬಗ್ಗೆ ಮುತುವರ್ಜಿ ವಹಿಸಬೇಕು' ಎಂದು ನ್ಯಾಯಪೀಠ ಕಾಳಜಿ ವ್ಯಕ್ತಪಡಿಸಿದೆ.

ಪ್ರಕರಣವೇನು?: ರಾಜಶೇಖರಯ್ಯ ಅವರ ಪುತ್ರಿ, ಆರ್.ಕವಿತಾ, ತುಮಕೂರು ಜಿಲ್ಲೆಯ ಬಸವಾಪಟ್ಟಣದ ನಿವಾಸಿ ಯೋಗೇಶ್ ಅವರನ್ನು ಮದುವೆಯಾಗಿದ್ದರು. ಮಗಳ ಮದುವೆ ನಂತರ ರಾಜಶೇಖರಯ್ಯ ತಮ್ಮ ಆಸ್ತಿಯನ್ನು 2018ರ ಸೆಪ್ಟೆಂಬರ್ 28ರಂದು ಮಗಳ ಹೆಸರಿಗೆ ಗಿಫ್ಟ್ ಡೀಡ್ ಮಾಡಿ ಕೊಟ್ಟಿದ್ದರು.

ಈ ಬೆಳವಣಿಗೆ ನಂತರ ರಾಜಶೇಖರಯ್ಯ ಸ್ಥಳೀಯ ಉಪ ವಿಭಾಗಾಧಿಕಾರಿಗೆ ದೂರೊಂದನ್ನು ನೀಡಿ, 'ನನ್ನ ಮಗಳು ಮತ್ತು ಅಳಿಯ ನನ್ನನ್ನು ತಹಶೀಲ್ದಾರ್ ಕಚೇರಿಗೆ ವೃದ್ಧಾಪ್ಯ ವೇತನ ಮಾಡಿಸುತ್ತೇನೆ ಎಂದು ಕರೆದುಕೊಂಡು ಹೋಗಿ ಹಲವು ಕಾಗದ ಪತ್ರಗಳಿಗೆ ಸಹಿ ಹಾಕಿಸಿಕೊಂಡಿದ್ದಾರೆ. ಮನೆ ನಿರ್ಮಾಣಕ್ಕೆಂದು ನನ್ನಿಂದ ₹10 ಲಕ್ಷ ಪಡೆದಿದ್ದು, ಮನೆ ನಿರ್ಮಾಣಕ್ಕೆ ಮಾಡಿರುವ ಸಾಲ ತೀರಿಸಲು ಆಸ್ತಿ ಮಾರಾಟಕ್ಕೆ ಒತ್ತಡ ಹೇರುತ್ತಿದ್ದಾರೆ' ಎಂದು ಆರೋಪಿಸಿದ್ದರು.

ಈ ದೂರನ್ನು ಉಪವಿಭಾಗಾಧಿಕಾರಿಯು, ಹಿರಿಯ ನಾಗರಿಕರ ಕಲ್ಯಾಣ ಮತ್ತು ನಿರ್ವಹಣಾ ಕಾಯ್ದೆ–2007ರ ಅಡಿಯಲ್ಲಿ ವಿಚಾರಣೆ ನಡೆಸಿದ್ದರು. ಈ ವೇಳೆ ರಾಜಶೇಖರಯ್ಯ, 'ಮಗಳು ಕವಿತಾ ಮತ್ತು ಅಳಿಯ ನನ್ನ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿದ್ದರು. ಇದಕ್ಕೆ ಪ್ರತಿಯಾಗಿ ಕವಿತಾ ಮತ್ತು ಮತ್ತು ಅವರ ಪತಿ, 'ರಾಜಶೇಖರಯ್ಯ ಅವರನ್ನು ನಾವು ಚೆನ್ನಾಗಿಯೇ ನೋಡಿಕೊಂಡಿದ್ದೇವೆ. ಅವರ ವೈದ್ಯಕೀಯ ಚಿಕಿತ್ಸೆಗಾಗಿ ಈತನಕ ₹ 30 ಲಕ್ಷ ಖರ್ಚು ಮಾಡಿದ್ದೇವೆ' ಎಂದು ಪ್ರತಿವಾದ ಮಂಡಿಸಿದ್ದರು.



ಇದನ್ನು ಒಪ್ಪದ ಉಪ ವಿಭಾಗಾಧಿಕಾರಿ, 'ಗಿಫ್ಟ್ ಡೀಡ್‌ನಲ್ಲಿ ಕವಿತಾ ತನ್ನ ತಂದೆಯನ್ನು ನೋಡಿಕೊಳ್ಳಬೇಕೆಂಬ ಷರತ್ತು ವಿಧಿಸಲಾಗಿತ್ತು. ಆದರೆ, ಅವರು ಈ ಷರತ್ತನ್ನು ಉಲ್ಲಂಘಿಸಿದ್ದಾರೆ' ಎಂಬ ತೀರ್ಮಾನದೊಂದಿಗೆ, 2021ರ ಫೆಬ್ರುವರಿ 24ರಂದು ಗಿಫ್ಟ್ ಡೀಡ್ ರದ್ದುಗೊಳಿಸಿದ್ದರು. ಇದನ್ನು ಪ್ರಶ್ನಿಸಿ ಕವಿತಾ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಏಕಸದಸ್ಯ ನ್ಯಾಯಪೀಠ ಈ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು.

ಬಲಿಪಾಡ್ಯಮಿ: ಆನಂದದ ಅರಿವು

• ಎಸ್. ಸೂರ್ಯಪ್ರಕಾಶ ಪಂಡಿತ್

ನಿಸರ್ಗದ ವಿದ್ಯಮಾನಗಳಲ್ಲಿ ಕತ್ತಲೆ–ಬೆಳಕಿನ ‘ಆಟ’ ಸ್ವಾರಸ್ಯಕರ. ಕತ್ತಲೆಯು ಕಳೆದು ಬೆಳಕು ಮೂಡುವುದು; ಬೆಳಕು ಮರೆಯಾಗಿ ಕತ್ತಲು ಕವಿಯುವುದು – ಇದು ನಿರಂತರ ಚಕ್ರ. ಕತ್ತಲೆಯಿದ್ದಾಗ ಭಯ, ಅಪಾಯ; ಅದೇ ಬೆಳಕಿನಲ್ಲಿ ಧೈರ್ಯ, ಭರವಸೆ. ಹೀಗಾಗಿ ಮನುಷ್ಯನ ಜೀವನದಲ್ಲಿ ಬೆಳಕು ಎನ್ನುವುದು ಧೈರ್ಯಕ್ಕೂ ಪ್ರಗತಿಗೂ ಒಳತಿಗೂ ಸಂಕೇತ ಎನಿಸಿಕೊಂಡಿತು; ವಿಶಾಲಾರ್ಥದಲ್ಲಿ ‘ಬೆಳಕು’ ಎಂಬುದು ಜ್ಞಾನಕ್ಕೆ ಸಂಕೇತವೇ ಆಯಿತು. ಜ್ಞಾನವನ್ನು ಬಯಸುವುದೂ, ಬೆಳಕನ್ನು ಅರಸುವುದು ‘ಸಂಸ್ಕೃತಿ‘ ಎಂದು ಹೆಸರಾಯಿತು.

ಕತ್ತಲೆ–ಬೆಳಕಿನ ಸುತ್ತಾಟದಲ್ಲಿ ಒಳಿತು–ಕೆಡಕುಗಳ ಚಕ್ರವನ್ನೂ ಕಾಣಬಹುದು. ರಾಕ್ಷಸತ್ವದ ಸೋಲು ಮತ್ತು ದೈವತ್ವಗಳ ಗೆಲುವಿನಲ್ಲಿ ಈ ತತ್ತ್ವ ಅಡಕವಾಗಿದೆ. ರಾಕ್ಷಸರು ಹೊರಗಿನವೇ ಆಗಬೇಕಿಲ್ಲ; ನಮ್ಮೊಳಗೂ ರಾಕ್ಷಸರಿದ್ದಾರೆ. ಆಲಸ್ಯ, ಸ್ವಾರ್ಥ, ಅಹಂಕಾರ, ಕ್ರೌರ್ಯ, ಕೇಡಿನ ಬುದ್ಧಿ, ಕಾಮ, ಕ್ರೋಧ, ಮದ, ಮಾತ್ಸರ್ಯ – ಇಂಥವೆಲ್ಲವೂ ರಾಕ್ಷಸತ್ವದ ಪ್ರತಿನಿಧಿಗಳೇ. ಈ ದುರ್ಗುಣಗಳಿಗೆ ನಮ್ಮ ಮೈಯನ್ನು ಒಪ್ಪಿಸಿದರೆ ಆಗ ನಾವು ರಾಕ್ಷಸರೇ ಆಗುತ್ತೇವೆಯಷ್ಟೆ!

ಇಂದು ಬಲಿಪಾಡ್ಯಮಿ

ಬಲಿಪಾಡ್ಯಮಿ ಆಚರಣೆಯ ಭಿತ್ತಿಯಲ್ಲಿ ಈ ಸಂದೇಶವೂ ಇದೆ. ಬಲಿ ಚಕ್ರವರ್ತಿಯು ದಾನಶೀಲ; ಯಾರು ಏನು ಕೇಳಿದರೂ ಕೊಡುವಂಥವನು. ಆದರೆ ಅವನ ಈ ದಾನಬುದ್ಧಿಯೇ ಅವನ ಪಾಲಿಗೆ ದಾನವಬುದ್ಧಿಯಾಯಿತು. ನಾನೊಬ್ಬ ಅಸಾಮಾನ್ಯ ದಾನಶೀಲ – ಎಂಬ ಅಹಂಕಾರದ ಪರ್ವತ ಅವನ ತಲೆಯನ್ನು ಆಕ್ರಮಿಸಿತು. ‘ಇಡಿಯ ಸೃಷ್ಟಿ ಭಗವಂತನ ಆಸ್ತಿ; ಚರಾಚರ ವಸ್ತುಗಳೆಲ್ಲವೂ ಅವನ ಅಧೀನ. ಇದನ್ನು ಅರ್ಥಮಾಡಿಕೊಂಡು, ಲೋಭವನ್ನು ತ್ಯಜಿಸಿ, ನಿನಗೆ ಎಷ್ಟು ಬೇಕು ಅಷ್ಟನ್ನೇ ಬಳಸಿಕೋ. ಇವೆಲ್ಲವೂ ಭಗವಂತನಿಗೆ ಸೇರಿದ ಸ್ವತ್ತು ಎಂಬ ಸತ್ಯವನ್ನು ಮರೆಯಬೇಡ’ ಎಂಬ ಆರ್ಷಪ್ರಜ್ಞೆ ಅವನಿಂದ ದೂರವಾಯಿತು. ಎಲ್ಲೆಲ್ಲೂ ವ್ಯಾಪಿಸಿರುವ ಆ ಈಶ್ವರತತ್ತ್ವವನ್ನು ಮತ್ತೆ ನೆನಪಿಸಲು ವಿಷ್ಣುವೇ ಬಲಿಯಲ್ಲಿಗೆ ಬರಬೇಕಾಯಿತು. ಬಲಿಯ ಸಣ್ಣತನವನ್ನು ದೂರಮಾಡಬೇಕಾಗಿದ್ದುದರಿಂದ ವಿಷ್ಣುವೂ ಅವನಲ್ಲಿಗೆ



ವಾಮನನಾಗಿಯೇ ಬರಬೇಕಾಯಿತು! ಸಣ್ಣತನದ ಬುದ್ಧಿಯಲ್ಲಿಯೇ ಮುಳುಗಿದ್ದ ಬಲಿ ಚಕ್ರವರ್ತಿಗೆ ವಾಮನನ ವ್ಯಾಪ್ತಿ ಅರಿವಿಗೆ ಬರುವುದಾದರೂ ಹೇಗೆ? ಆದುದರಿಂದಲೇ ಅವನು ವಾಮನ ಕೇಳಿದ ಮೂರು ಹೆಜ್ಜೆಗಳನ್ನು ಸ್ವಲ್ಪವೂ ವಿಚಾರಿಸಿದೆ ‘ದಾನ’ ಮಾಡಿದ. ಕುಬ್ಜನಾಗಿದ್ದ ವಾಮನ ಕೂಡಲೇ ಬೆಳೆಯತೊಡಗಿ, ಬೆಳೆದು ಬೆಳೆದು ಬೆಳೆಯುತ್ತಲೇಹೋದ! ವಿಷ್ಣುವಿನ ಈ ಬೆಳವಣಿಗೆಯ ಬೆಳಕಿನಲ್ಲಿ ಬಲಿಯು ತನ್ನ ಅಹಂಕಾರವನ್ನೇ ‘ಬಲಿ’ ಕೊಡಬೇಕಾಯಿತು. ಒಂದು ಹೆಜ್ಜೆಯಲ್ಲಿ ಇಡಿಯ ಭೂಮಿಯನ್ನೂ, ಎರಡನೆಯ ಹೆಜ್ಜೆಯಲ್ಲಿ ಆಗಸವನ್ನೂ ಅಳೆದ ವಿಷ್ಣುವು, ‘ಮೂರನೆಯ ಹೆಜ್ಜೆಗೆ ಅವಕಾಶ ಎಲ್ಲಿ’ ಎಂದು ಬಲಿಯನ್ನು ಕೇಳಿದ. ವಿಷ್ಣುವಿನ ಮೂರನೆಯ ಹೆಜ್ಜೆಗೆ ಸ್ಥಳವನ್ನು ಒದಗಿಸಬಲ್ಲ ತಾಣ ಇಡಿಯ ಸೃಷ್ಟಿಯಲ್ಲಿಯೇ ಎಲ್ಲಾದರೂ ಇದ್ದೀತೆ? ಆದರೆ ಅಂಥದೊಂದು ನೆಲೆಯೂ ಇದ್ದೀತು ಎಂದು ಬಲಿಯ ‘ತಲೆ’, ಎಂದರೆ ಅವನ ಅಹಂಕಾರ, ಆಲೋಚಿಸಿತು. ಈ ಅಹಂಕಾರ ತೊಲಗದೆ ವಿಷ್ಣುವಿನೊಂದಿಗೆ ಬಲಿಗೆ ತಾದಾತ್ಮ್ಯ ಒದಗುವಂತಿರಲಿಲ್ಲ. ಈ ಅರಿವು ಬಲಿಯಲ್ಲಿ ಮೂಡಿತು. ಆ ಕ್ಷಣವೇ ಅವನು ತ್ರಿವಿಕ್ರಮನ ಮೂರನೆಯ ಹೆಜ್ಜೆಗೆ ತಾಣವಾಗಿ ತನ್ನ ತಲೆಯನ್ನು ಒಪ್ಪಿಸಿದ. ವಿಷ್ಣುವು ಬಲಿಯ ತಲೆಯನ್ನು ಮೆಟ್ಟಿ, ಅವನ ಅಹಂಕಾರವನ್ನು ಇಲ್ಲವಾಗಿಸಿದ; ಆ ಮೂಲಕ ಬಲಿಗೆ ಸರ್ವವ್ಯಾಪಕವೂ ಸಾರ್ವಕಾಲಿಕವೂ ಆದ ‘ಸೋऽಹಂ’ಭಾವದ ಚಿರಂಜೀವಿಪದವಿಯನ್ನು ಅನುಗ್ರಹಿಸಿದ.

ಪುರಾಣದ ರೂಪಕಗಳು ಐತಿಹಾಸಿಕ ಕಥನಗಳಲ್ಲ; ಅವು ನಿತ್ಯವಾಗಿರುವ ಜೀವನದರ್ಶನದ ಪ್ರತಿಮೆಗಳು; ಎಲ್ಲ ಕಾಲಕ್ಕೂ ಒದಗುವ ಅರಿವಿನ ಬೆಳಕು. ನಮ್ಮ ಮನೋಬುದ್ಧಿಗಳಲ್ಲಿ ಸುಪ್ತವಾಗಿರುವ ಅಹಂಕಾರದ ದಮನವಾಗಬೇಕು; ಆಗ ಮಾತ್ರವೇ ಎಲ್ಲೆಲ್ಲೂ ವ್ಯಾಪಿಸಿರುವ ಆನಂದದ ಅನುಭವ ದಕ್ಕೀತು – ಎಂಬುದೇ ಬಲಿಪಾಡ್ಯಮಿಯ ಕಾಣ್ಕೆ.

ಲಂಚ ಪಡೆದು ಕೆಲಸ ಮಾಡಲು ಶಾಸಕ ತಾಕೀತು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಲೋಕೋಪಯೋಗಿ ಇಲಾಖೆಯ ಪ್ರಥಮ ದರ್ಜೆ ಸಹಾಯಕನಿಗೆ ಮೊಬೈಲ್ ಮೂಲಕ ಕರೆ ಮಾಡಿ ₹10 ಸಾವಿರ ಪಡೆದು ಕೆಲಸ ಮಾಡಿಕೊಡಿ ಎಂದು ಶಾಸಕ ಶರಣು ಸಲಗರ ಕೇಳಿರುವ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ನಾನು ಲೆಕ್ಕಪತ್ರ ಶಾಖೆಯ ವೆಂಕಟರಾವ್ ಎಂದು ಪ್ರಥಮ ದರ್ಜೆ ಸಹಾಯಕ ಪರಿಚಯಿಸಿಕೊಂಡಿದ್ದಾನೆ. ಆಗ ಶಾಸಕರು, ₹10 ಸಾವಿರ ತೆಗೆದುಕೊಂಡು ಕೆಲಸ ಮಾಡಿಕೊಡಬೇಕು. ಹೆಚ್ಚಿಗೂ ಬೇಡ ಕಡಿಮೆಯೂ ತೆಗೆದುಕೊಳ್ಳುವುದು ಬೇಡ. ಆತನಿಗೆ ತೊಂದರೆ ಕೊಡುವುದೂ ಬೇಡ. ಇಲ್ಲದಿದ್ದರೆ ನಾನೇ ಅಲ್ಲಿಗೆ ಬರಬೇಕಾಗುತ್ತದೆ. ನಾನು ರಾಜಕೀಯ ವ್ಯಕ್ತಿ. ಆದರೂ ಏನೂ ಅನ್ನುತ್ತಿಲ್ಲ. ವ್ಯವಸ್ಥೆಯೇ ಹಾಗಿದ್ದಾಗ ಏನೂ ಮಾಡಕ್ಕಾಗಲ್ಲ’ ಎಂದು ಸಲಗರ ಆಡಿರುವ ಮಾತುಗಳು ಆಡಿಯೊದಲ್ಲಿದೆ.



ಶರಣು ಸಲಗರ

ತಪ್ಪೇನಿದೆ?: ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಶಾಸಕ ಶರಣು ಸಲಗರ, ‘ನನ್ನ ಕಾರ್ಯಕರ್ತರ ಸಮಸ್ಯೆಗೆ ಸ್ಪಂದಿಸುವುದು ನನ್ನ ಕರ್ತವ್ಯ. ಒಂದು ಕೆಲಸಕ್ಕಾಗಿ ಬಡ ಕುಟುಂಬದ ಕಾರ್ಯಕರ್ತನಿಂದ ₹40 ಸಾವಿರ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಅದನ್ನು ಕಡಿಮೆಗೊಳಿಸಿ ಬರೀ ₹10 ಸಾವಿರ ಪಡೆದು ಕೆಲಸ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇನೆ. ಕೆಲಸ ಆಗಲಿ ಎಂಬ ಸದುದ್ದೇಶ ನನ್ನದಾಗಿತ್ತು. ಇದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದ್ದಾರೆ.

‘ಜಾತಿ ಗಣತಿ ವರದಿ: ವಿರೋಧ ಸಲ್ಲ’

ಬೆಳಗಾವಿ: ‘ಜಾತಿಗಣತಿ ವರದಿ ಬಿಡುಗಡೆಗೂ ಮುನ್ನವೇ ಅದನ್ನು ವಿರೋಧಿಸುವುದು ಸರಿಯಲ್ಲ. ಅದರ ಕುರಿತು ಚರ್ಚಿಸಬೇಕೆ ಹೊರತು ಅನಗತ್ಯ ಆಕ್ಷೇಪಣೆ ಸೂಕ್ತವಲ್ಲ’ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಬೆಳಗಾವಿ ಅಧಿವೇಶನದ ಬಳಿಕ ಜಾತಿ ಗಣತಿ ವರದಿ ಬಿಡುಗಡೆ ಆಗಬಹುದು’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಉಪ ಮುಖ್ಯಮಂತ್ರಿಗಳ ನೇಮಕಾತಿ ಪ್ರಕ್ರಿಯೆ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಬಳಿಕ ಆಗಬಹುದು. ಇದರ ಬಗ್ಗೆ ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ’ ಎಂದರು.

‘ಹಣ ಸಂಗ್ರಹಿಸಲು ಸಚಿವರಿಗೆ ಗುರಿ ನಿಗದಿಪಡಿಸಲಾಗಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್‌ನಲ್ಲಿ ಅಂತಹ ಬೆಳವಣಿಗೆಗಳು ನಡೆದಿಲ್ಲ’ ಎಂದರು.

ಸಿಐಡಿ ತನಿಖೆ ಚುರುಕು

ಕಲಬುರಗಿ: ಬ್ಲೂಟೂತ್ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಚುರುಕುಗೊಳಿಸಿದ್ದಾರೆ.

ಸಿಐಡಿ ಹೆಚ್ಚುವರಿ ಎಸ್‌ಪಿ ರಾಘವೇಂದ್ರ ಹೆಗಡೆ ಅವರು ಸೋಮವಾರ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಪಡೆದರು. ಡಿವೈಎಸ್‌ಪಿಗಳಾದ ಶಂಕರಗೌಡ ಪಾಟೀಲ, ತನ್ವೀರ್ ಅವರು ಅಕ್ರಮದ ಸಂಬಂಧ ಪೊಲೀಸರ ಪ್ರಾಥಮಿಕ ತನಿಖೆಯ ಕಡತಗಳನ್ನು ತರಿಸಿಕೊಂಡು ಅಧ್ಯಯನ ಮಾಡುತ್ತಿದ್ದಾರೆ. ತನಿಖೆಗೆ ಇನ್ನಷ್ಟು ಅಧಿಕಾರಿಗಳು ಸೇರ್ಪಡೆ ಆಗಲಿದ್ದಾರೆ.

‘ಪಿಎಸ್‌ಐ ನೇಮಕಾತಿಯಲ್ಲಿ ಬ್ಲೂಟೂತ್ ಬಳಸಿದ್ದ ತಂತ್ರವು ಈ ಅಕ್ರಮಕ್ಕೂ ತಾಳೆ ಆಗುತ್ತಿದೆ. ಜಿಲ್ಲಾ ಕೇಂದ್ರದಿಂದ ಪರೀಕ್ಷಾ ಕೊಠಡಿಗೆ ಪ್ರಶ್ನೆ ಪತ್ರಿಕೆ ತಲುಪಿದ ಹಂತಗಳಲ್ಲಿ ಯಾರೆಲ್ಲಾ ಭಾಗಿಯಾದರು? ಯಾರ ಹೊಣೆಗಾರಿಕೆ ಏನಿತ್ತು? ಯಾವ ಹಂತದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ ಎಂದು ಪತ್ತೆಹಚ್ಚಬೇಕಿದೆ’ ಎಂದು ಮೂಲಗಳು ತಿಳಿಸಿವೆ.

‘ಇದಕ್ಕೆ ಸಂಬಂಧಿಸಿದವರ ವಿಚಾರಣೆ ಜೊತೆಗೆ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಬೇಕಿದೆ. ದೀಪಾವಳಿ ಬಳಿಕ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗುವುದು’ ಎಂದು ಹೇಳಿವೆ.

ಪ್ರಗತಿಯಲ್ಲಿ 13 ತಾಣಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ: ಇಲಾಖೆ ಆಯುಕ್ತ

ಸ್ಮಾರಕ ದತ್ತು: ಉತ್ತಮ ಸ್ಪಂದನೆ

• ಎಂ. ಮಹೇಶ

ಮೈಸೂರು: ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಅನುಷ್ಠಾನಗೊಳಿಸಿರುವ ‘ಸ್ಮಾರಕ ದತ್ತು ಯೋಜನೆ’ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಇದೇ ವರ್ಷದ ಸೆ.24ರಂದು ಯೋಜನೆಗೆ ಚಾಲನೆ ನೀಡಲಾಗಿತ್ತು. ಈವರೆಗೆ ವಿವಿಧ ಜಿಲ್ಲೆಗಳ 13 ಸ್ಮಾರಕಗಳನ್ನು ದತ್ತು ತೆಗೆದುಕೊಳ್ಳುವ ಪ್ರಕ್ರಿಯೆಗೆ ವಿಸ್ತೃತ ಯೋಜನಾ ವರದಿ ಸಲ್ಲಿಸುವಂತೆ ಖಾಸಗಿ ಸಂಸ್ಥೆಗಳಿಗೆ ಒಪ್ಪಿಗೆ ಪತ್ರ ನೀಡಲಾಗಿದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣದ ಕೋಟೆ, ಕಲಬುರಗಿ ಜಿಲ್ಲೆಯ ಮಳಖೇಡ ಕೋಟೆ ಹಾಗೂ ಯಾದಗಿರಿ ಜಿಲ್ಲೆಯ ಯಾದಗಿರಿ ಕೋಟೆಗಳನ್ನು ದತ್ತು ಸ್ವೀಕರಿಸಲು ಹೈದರಾಬಾದ್‌ನ ಕೃಷ್ಣಕೃತಿ ಫೌಂಡೇಶನ್ ಆಸಕ್ತಿ ವ್ಯಕ್ತಪಡಿಸಿದೆ.

ಕಲಬುರಗಿ ಜಿಲ್ಲೆಯ ನಾಗಾವಿಯಲ್ಲಿರುವ 60 ಕಂಬಗಳ ಮಂಟಪ, ನಂದಿಬಾವಿ ದೇವಾಲಯಗಳ ಸಂಕೀರ್ಣ, ಮಲ್ಲಿಕಾರ್ಜುನ ದೇವಾಲಯ, ಮಲ್ಲಯ್ಯನಗುಡಿಯನ್ನು (ಒಟ್ಟು 4) ದತ್ತು ಪಡೆಯಲು ಬೆಂಗಳೂರಿನ ಯುನೈಟೆಡ್ ವೇ ಫೌಂಡೇಶನ್ ಮುಂದಾಗಿದೆ. ಬೆಂಗಳೂರಿನ ಸಿಂಗಾಲ್ ಅಯ್ಯರ್ ಫ್ಯಾಮಿಲಿ ಫೌಂಡೇಶನ್ ಮಡಿಕೇರಿಯ ನಾಲ್ಕುನಾಡು ಅರಮನೆ ದತ್ತು ಸ್ವೀಕರಿಸಲಿದೆ.

ಚಿಕ್ಕಬಳ್ಳಾಪುರದ ಜಿಲ್ಲೆಯ ರಂಗಸ್ಥಳ–ಅದರ ಸಮೀಪದಲ್ಲಿರುವ ಕಲ್ಯಾಣಿ, ನಂದಿ ಬೆಟ್ಟದಲ್ಲಿರುವ ಯೋಗ ನಂದೀಶ್ವರ, ಹಾಲಂಬಗಿರಿ ವೆಂಕಟರಮಣ ದೇವಸ್ಥಾನ, ಕೈವಾರದ ಭೀಮೇಶ್ವರ, ನಕುಲೇಶ್ವರ ದೇಗುಲವನ್ನು ಬೆಂಗಳೂರಿನ ಡಿಸ್ಕವರಿ ವಿಲೇಜ್ ಫೌಂಢೇಶನ್ ದತ್ತು ಸ್ವೀಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಇಲಾಖೆಯ ಆಯುಕ್ತ ಎ.ದೇವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

280 ಸ್ಮಾರಕಗಳ ಪಟ್ಟಿ: ‘ದೇಶದಲ್ಲಿ ಇದೇ ಮೊದಲಿಗೆ ಸ್ಮಾರಕ ದತ್ತು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಿದ್ದು, ಇಲಾಖೆಯ ಜಾಲತಾಣದಲ್ಲಿ (https://nammasmaraka.in) ಪಟ್ಟಿ ಪ್ರಕಟಿಸಲಾಗಿದೆ. ಬೆಂಗಳೂರು ವಿಭಾಗದಲ್ಲಿ 59, ಮೈಸೂರು ವಿಭಾಗದಲ್ಲಿ 61, ಕುಲಬುರಗಿ ವಿಭಾಗದಲ್ಲಿ 94, ಬೆಳಗಾವಿ ವಿಭಾಗದಲ್ಲಿ 66 ಪಟ್ಟಿಯಲ್ಲಿವೆ.

ಒಟ್ಟು 280 ಸ್ಮಾರಕಗಳನ್ನು ಮೊದಲ ಹಂತದಲ್ಲಿ ದತ್ತು ಕೊಡಲು ಯೋಜಿಸಲಾಗಿದೆ. ಈವರೆಗೆ ಹದಿಮೂರು ಸ್ಮಾರಕಗಳಿಗೆ ಸಂಬಂಧಿಸಿ ಒಪ್ಪಿಗೆ ಪತ್ರ ನೀಡಲಾಗಿದ್ದು, ಎಂಒಯು ಮಾಡಿಕೊಳ್ಳುವ ಹಂತದಲ್ಲಿದೆ’ ಎಂದು ಹೇಳಿದರು.

‘ಆಸಕ್ತಿ ವ್ಯಕ್ತಪಡಿಸಿದವರಿಗೆ ಒಪ್ಪಿಗೆಪತ್ರ ನೀಡಲಾಗುವುದು. ಅವರು ಕಾರ್ಯಯೋಜನೆಗೆ ಸಂಬಂಧಿಸಿ ನಿಗದಿತ ಸಮಯದಲ್ಲಿ ಡಿಪಿಆರ್ ಸಲ್ಲಿಸಬೇಕು. ಅದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಒಡಂಬಡಿಕೆ ಮಾಡಿಕೊಳ್ಳಲಾಗುತ್ತದೆ. ಅವರು ಕನಿಷ್ಠ 5 ವರ್ಷ ನಿರ್ವಹಣೆ ನೋಡಿಕೊಳ್ಳಬೇಕಾಗುತ್ತದೆ’ ಎಂದು ತಿಳಿಸಿದರು.

ಮೂಲಸೌಲಭ್ಯ, ಸಂರಕ್ಷಣೆ: ‘ಕುಡಿಯುವ ನೀರು, ಶೌಚಾಲಯ ಮತ್ತಿತರ ಮೂಲಸೌಲಭ್ಯಗಳನ್ನು ಮುಖ್ಯವಾಗಿ ಒದಗಿಸಬೇಕು. ಕಾಂಪೌಂಡ್ ನಿರ್ಮಾಣ, ಉದ್ಯಾನ ನಿರ್ವಹಣೆ, ಧ್ವನಿ– ಬೆಳಕು ಕಾರ್ಯಕ್ರಮದ ಅನುಷ್ಠಾನಕ್ಕೆ ಕ್ರಮ ವಹಿಸಬಹುದಾಗಿದೆ. ಅಧ್ಯಯನ ಕೇಂದ್ರವನ್ನೂ ಮಾಡಬಹುದು. ಸ್ಮಾರಕಗಳ ಸಂರಕ್ಷಣೆಗೆ ಅಗತ್ಯವಿರುವ ಎಲ್ಲ ಕ್ರಮಕೈಗೊಳ್ಳಬಹುದು. ಇಲಾಖೆ, ಜಿಲ್ಲಾ ಮಟ್ಟದ ಸ್ಮಾರಕ ಸಮಿತಿ ಮೇಲ್ವಿಚಾರಣೆ ನಡೆಸಲಾಗುತ್ತದೆ. ಡಿಪಿಆರ್ ಸಲ್ಲಿಕೆಗೆ 3 ತಿಂಗಳು ಸಮಯ ಕೊಡಲಾಗುತ್ತದೆ’ ಎಂದು ವಿವರ ನೀಡಿದರು.



ಕಲಬುರಗಿ ಜಿಲ್ಲೆಯ ಮಳಖೇಡ ಕೋಟೆಯ ನೋಟ (ಸಂಗ್ರಹ ಚಿತ್ರ)

‘ಸಾರ್ವಜನಿಕ ಸಹಭಾಗಿತ್ವ’

‘ಇಲಾಖೆಯಿಂದ ‘ಸಂರಕ್ಷಣ್ ಯೋಜನೆ’ಯಡಿ ಗ್ರಾಮವಾರು ಸ್ಮಾರಕಗಳ ಸಮೀಕ್ಷೆ ನಡೆಯುತ್ತಿದೆ. 38 ತಾಲ್ಲೂಕುಗಳಲ್ಲಿನ 5ಸಾವಿರ ಗ್ರಾಮಗಳಲ್ಲಿ 20ಸಾವಿರ ಪ್ರಾಚ್ಯಾವಶೇಷಗಳು ದೊರೆತಿವೆ. ಇವುಗಳಲ್ಲಿ ಸ್ಮಾರಕ, ಶಿಲ್ಪಕೃತಿ, ನೆಲೆಗಳು ಇವೆ. ಎಲ್ಲವನ್ನೂ ಸರ್ಕಾರವೇ ನಿರ್ವಹಿಸುವುದು ಕಷ್ಟಸಾಧ್ಯ. ಹೀಗಾಗಿ, ಸಾರ್ವಜನಿಕ ಸಹಭಾಗಿತ್ವ ಪಡೆಯಲಾಗುತ್ತಿದೆ’ ಎನ್ನುತ್ತಾರೆ ದೇವರಾಜ್.

‘ರಾಜ್ಯದ ಕಲೆ, ಇತಿಹಾಸ ಹಾಗೂ ಪರಂಪರೆ ಮೊದಲಾದವುಗಳನ್ನು ಬಿಂಬಿಸುವ ಹೆಗ್ಗುರುತುಗಳನ್ನು ಉಳಿಸಲು ಜಾಗೃತಿ ಮೂಡಿಸುವ ಕಾರ್ಯವೂ ಇದಾಗಿದೆ. ತ್ವರಿತವಾಗಿ ಉಳಿಸುವ ತುರ್ತು ಇಂದಿನದಾಗಿದೆ’ ಎಂದರು.

ಸ್ಮಾರಕಗಳನ್ನು ದತ್ತು ಪಡೆಯಲು ಅಮೆರಿಕದಲ್ಲಿರುವ ಅನಿವಾಸಿ ಭಾರತಿಯರೊಡನೆ ಆನ್‌ಲೈನ್‌ನಲ್ಲಿ ಚರ್ಚಿಸಿದ್ದೇನೆ. 20 ಮಂದಿ ಆಸಕ್ತಿ ವ್ಯಕ್ತಪಡಿಸಿದ್ದಾರೆ

ಎಚ್.ಕೆ.ಪಾಟೀಲ, ಪ್ರವಾಸೋದ್ಯಮ ಸಚಿವ

ದತ್ತು ಪಡೆಯುವ ಸಂಸ್ಥೆಯನ್ನು ‘ಸ್ಮಾರಕ ಮಿತ್ರ’ ಎಂದು ಕರೆಯಲಾಗುವುದು. ಮೂಲಸೌಕರ್ಯ ಕಲ್ಪಿಸಲಾಗುವುದು. ಸಂರಕ್ಷಣೆ ಕೆಲಸವೂ ನಡೆಯಲಿದೆ

ಎ.ದೇವರಾಜ್, ಆಯುಕ್ತ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

‘ರಾಜ್ಯದಲ್ಲಿ 844 ಸಂರಕ್ಷಿತ ಸ್ಮಾರಕಗಳಿವೆ. ಇವುಗಳಲ್ಲಿ ಉತ್ತಮ ಸಂಪರ್ಕ, ವಿಶಿಷ್ಟ ಸ್ಮಾರಕಗಳನ್ನು ಆದ್ಯತೆಯ ಮೇಲೆ ದತ್ತು ನೀಡಲಾಗುತ್ತದೆ. ಇತರ ಸ್ಮಾರಕಗಳನ್ನು ಸ್ವೀಕರಿಸಲು ಮುಂದೆ ಬಂದರೆ ಅದಕ್ಕೂ ಅವಕಾಶವಿದೆ’ ಎಂದು ದೇವರಾಜ್ ಹೇಳಿದರು.

ಮಂಗ ದಾಳಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹೊನ್ನಾಳಿ (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಅರಕೆರೆ ಎ.ಕೆ.ಕಾಲೊನಿಯ ಎ.ಕೆ.ಗುತ್ಯಪ್ಪ (65) ಅವರು ಕೋತಿ (ಮುಸಿಯಾ) ದಾಳಿಯಿಂದ ಮೃತಪಟ್ಟಿದ್ದಾರೆ.

ಗುತ್ಯಪ್ಪ ಅವರು ಭಾನುವಾರ ರಾತ್ರಿ 1 ಗಂಟೆ ಸುಮಾರಿಗೆ ಮೂತ್ರ ವಿಸರ್ಜನೆಗೆ ಮನೆಯಿಂದ ಹೊರ ಬಂದಾಗ ಚಾವಣಿ ಮೇಲೆ ಕುಳಿತಿದ್ದ ಮುಸಿಯಾ ಏಕಾಏಕಿ ದಾಳಿ ನಡೆಸಿದೆ. ಮೊಣಕೈ ಮತ್ತು ಮಣಿಕಟ್ಟು ಭಾಗದಲ್ಲಿನ ನರಗಳು ಹೊರ ಬರುವಂತೆ ಕಚ್ಚಿದ್ದರಿಂದ ತೀವ್ರ ರಕ್ತ ಸ್ರಾವವಾಗಿದೆ. ತಕ್ಷಣವೇ ಅವರನ್ನು ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.

ಅಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಕರೆದೊಯ್ಯಲು ಸಿದ್ಧತೆ ನಡೆಸುತ್ತಿರುವಾಗಲೇ ಗುತ್ಯಪ್ಪ ಅಸುನೀಗಿದ್ದಾರೆ.



ಗುತ್ಯಪ್ಪ

ಮತ್ತೊಬ್ಬರ ಮೇಲೂ ದಾಳಿ: ಇದೇ ಗ್ರಾಮದ ಪ್ರಭಾಕರ್ ಎಂಬವರ ಮೇಲೂ ಸೋಮವಾರ ಬೆಳಿಗ್ಗೆ ದಾಳಿ ಮಾಡಿದೆ. ಮನೆಯಲ್ಲಿ ಅವರ ತಲೆ, ಕೈಗೆ ಗಾಯವಾಗಿದ್ದು, ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಅರಣ್ಯ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ, ಮುಸಿಯಾ ಸೆರೆಗೆ ಕಾರ್ಯಾಚರಣೆ ಕೈಗೊಂಡಿದ್ದಾರೆ. ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡಂಚಿನ ಗ್ರಾಮಗಳಿಗೆ ತ್ರೀಫೇಸ್ ವಿದ್ಯುತ್

ಬೆಂಗಳೂರು: ವನ್ಯಜೀವಿ–ಮಾನವ ಸಂಘರ್ಷ ತಗ್ಗಿಸುವ ನಿಟ್ಟಿನಲ್ಲಿ ಕಾಡಂಚಿನ ಗ್ರಾಮಗಳಿಗೆ ರಾತ್ರಿಯ ಬದಲು ಹಗಲು ಹೊತ್ತಿನಲ್ಲಿ ಮಾತ್ರ ತ್ರೀಫೇಸ್ ವಿದ್ಯುತ್ ಒದಗಿಸುವಂತೆ ಸಿಎಂಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದ್ದಾರೆ.

ಈ ಸಂಬಂಧ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಖಂಡ್ರೆ, ರಾಜ್ಯದ ಹಲವು ಕಡೆಗಳಲ್ಲಿ ಕಾಡಿನಂಚಿನ ಪ್ರದೇಶಗಳಿಗೆ ಆನೆ, ಹುಲಿ, ಚಿರತೆ ಸೇರಿ ಹಲವು ಕಾಡುಪ್ರಾಣಿಗಳು ಬರುತ್ತಿವೆ. ರಾತ್ರಿ ವೇಳೆ ತ್ರೀಫೇಸ್ ವಿದ್ಯುತ್ ಪೂರೈಕೆ ಮಾಡುತ್ತಿರುವುದರಿಂದ ಜೀವಹಾನಿಗೆ ಕಾರಣವಾಗುತ್ತಿದೆ ಎಂದಿದ್ದಾರೆ. ರಾತ್ರಿಯ ವೇಳೆ ತ್ರೀಫೇಸ್ ವಿದ್ಯುತ್ ಪೂರೈಕೆ ಮಾಡಿದರೆ ರೈತರು ಪಂಪ್‌ಸೆಟ್ ಮೋಟರ್ ಆನ್ ಮಾಡಲು ಮತ್ತು ಆಫ್ ಮಾಡಲು ರಾತ್ರಿಯ ವೇಳೆ ಸಂಚರಿಸುವ ಕಾರಣ ಸಂಘರ್ಷ ಹೆಚ್ಚುತ್ತದೆ. ಹೀಗಾಗಿ ಬೆಳಗಿನ ಹೊತ್ತು ತ್ರೀಫೇಸ್ ವಿದ್ಯುತ್ ಪೂರೈಸುವುದು ಸೂಕ್ತ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾಗಿ ಅವರು ತಿಳಿಸಿದ್ದಾರೆ. ಈ ಕುರಿತು ಇಂಧನ ಇಲಾಖೆಗೆ ನಿರ್ದೇಶನ ನೀಡುವಂತೆ ಇಂಧನ ಸಚಿವರಿಗೂ ಖಂಡ್ರೆ ಮನವಿ ಮಾಡಿದ್ದಾರೆ.

ನಿಧನ ವಾರ್ತೆ

ನಾಗಸ್ವರ ವಾದಕ ಜಲೀಲ್ ಸಾಹೇಬ್

ಪಡುಬಿದ್ರಿ (ಉಡುಪಿ): ನಾಗಸ್ವರ ವಾದಕ ಕಾಪು ತಾಲ್ಲೂಕಿನ ಕೊಪ್ಪಲಂಗಡಿ ನಿವಾಸಿ ಜಲೀಲ್ ಸಾಹೇಬ್ (56) ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಪತ್ನಿ, ಪುತ್ರಿ ಇದ್ದಾರೆ.

ಜಲೀಲ್ ಸಾಹೇಬ್ ಅವರು ಕರಾವಳಿಯ ದೇವಸ್ಥಾನ ಹಾಗೂ ದೈವಸ್ಥಾನಗಳಲ್ಲಿ ದಶಕಗಳಿಂದಲೂ ನಾಗಸ್ವರ ಸೇವೆ ನೀಡುತ್ತಾ ಬಂದಿದ್ದರು.



ಕಾಪುವಿನ ಮಾರಿಗುಡಿ ದೇವಸ್ಥಾನದಲ್ಲಿ ಜಲೀಲ್ ಸಾಹೇಬ್ ಅವರ ತಂದೆ ಬಾಬು ಸಾಹೇಬ್, ತಾತ ಇಮಾಮ್ ಸಾಹೇಬ್, ಮುತ್ತಾತ ಮುಗ್ದಂ ಸಾಹೇಬ್ ಅವರೂ ವಾದ್ಯ ನುಡಿಸುವ ಸೇವೆ ಮಾಡುತ್ತಿದ್ದರು.

ಬೆಂಕಿ: 9 ಮಂದಿ ಸಾವು

ಹೈದರಾಬಾದ್ (ಪಿಟಿಐ): ಇಲ್ಲಿನ ನಾಂಪಲ್ಲಿ ಪ್ರದೇಶದ ನಾಲ್ಕು ಅಂತಸ್ತಿನ ಕಟ್ಟಡವೊಂದಕ್ಕೆ ಬೆಂಕಿ ಹತ್ತಿಕೊಂಡ ಪರಿಣಾಮ ನಾಲ್ವರು ಮಹಿಳೆಯರು ಸೇರಿದಂತೆ ಒಂಬತ್ತು ಮಂದಿ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೃತರ ಪೈಕಿ ಏಳು ಮಂದಿ ಒಂದೇ ಕುಟುಂಬದವರು. ಸೋಮವಾರ ಬೆಳಿಗ್ಗೆ ನೆಲಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ಅಲ್ಲಿ ರಾಸಾಯನಿಕ ತುಂಬಿದ್ದ ಡ್ರಮ್‌ಗಳನ್ನು ಇಡಲಾಗಿತ್ತು. ಬಳಿಕ, ಬೆಂಕಿಯು ಎಲ್ಲ ಕಡೆ ವ್ಯಾಪಿಸಿದೆ.

ಐದು ವರ್ಷ 11 ಮೈತೇಯಿ ಸಂಘಟನೆಗಳಿಗೆ ನಿಷೇಧ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶ ವಿರೋಧಿ ಚಟುವಟಿಕೆಗಳ ಆರೋಪದಡಿ ಮೈತೇಯಿ ಸಮುದಾಯದ ಏಳು ಸಂಘಟನೆಗಳು, ಅವುಗಳ ನಾಲ್ಕು ಅಂಗಸಂಸ್ಥೆಗಳನ್ನು ಐದು ವರ್ಷಗಳಿಗೆ ಕೇಂದ್ರ ಸರ್ಕಾರ ನಿಷೇಧಿಸಿದೆ.

ಈ ಸಂಘಟನೆಗಳ ಕಾರ್ಯ ಚಟುವಟಿಕೆಗಳು ದೇಶದ ಸಾರ್ವಭೌಮತೆ ಮತ್ತು ಏಕತೆಗೆ ಸವಾಲು ಒಡ್ಡಿದ್ದವು. ಭದ್ರತಾ ಸಿಬ್ಬಂದಿ ಹಾಗೂ ನಾಗರಿಕರ ಮೇಲಿನ ಹಲ್ಲೆ ಕೃತ್ಯಗಳಲ್ಲೂ ಈ ಸಂಘಟನೆಗಳು ಭಾಗಿಯಾಗಿದ್ದವು ಎಂದು ಸರ್ಕಾರ ತಿಳಿಸಿದೆ. ಕೇಂದ್ರ ಗೃಹ ಸಚಿವಾಲಯವು ಈ ಸಂಬಂಧ ಅಧಿಸೂಚನೆ ಹೊರಡಿಸಿದೆ. ಆ ಪ್ರಕಾರ, ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ), ಅದರ ರಾಜಕೀಯ ಘಟಕ ಆರ್‌ಪಿಎಫ್, ಸಂಯುಕ್ತ ರಾಷ್ಟ್ರೀಯ ಮುಕ್ತ ರಂಗ (ಯುಎನ್‌ಎಲ್‌ಎಫ್) ಮತ್ತು ಅದರ ಶಸ್ತ್ರಸಜ್ಜಿತ ಸಂಘಟನೆ ಮಣಿಪುರ ಪೀಪಲ್ಸ್ ಆರ್ಮಿ (ಎಂಪಿಎ), ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಾಂಗ್ಲೆಪಕ್ (ಪಿಆರ್‌ಎಪಿಕೆ), ಇದರ ಶಸ್ತ್ರಸಜ್ಜಿತ ಸಂಘಟನೆ ರೆಡ್ ಆರ್ಮಿ ನಿಷೇಧಿಸಲಾದ ಪ್ರಮುಖ ಸಂಘಟನೆಗಳು. ಅಲ್ಲದೆ, ಕಾಂಗ್ಲೆಯಿ ಯವೊಲ್ ಕನ್ನಾ ಲುಪ್ (ಕೆವೈಕೆಎಲ್), ಕೋಆರ್ಡಿನೇಷನ್ ಕಮಿಟಿ, ಸೋಷಿ ಯಲಿಸ್ಟ್ ಯೂನಿಟಿ ಕಾಂಗ್ಲೆಪಕ್ (ಎಎಸ್‌ಯುಕೆ) ಸಂಘಟನೆಗಳನ್ನು ಐದು ವರ್ಷಗಳಿಗೆ ನಿಷೇಧಿಸಲಾಗಿದೆ.

ಈ ಸಂಘಟನೆಗಳು ಭಾರತದಿಂದ ಮಣಿಪುರವನ್ನು ಪ್ರತ್ಯೇಕಿಸಿ ಸ್ವತಂತ್ರ ರಾಷ್ಟ್ರ ಮಾಡುವ ಗುರಿ ಹೊಂದಿದ್ದವು ಎಂದೂ ಸರ್ಕಾರ ತಿಳಿಸಿದೆ.

ಟಿಎಂಸಿ ಮುಖಂಡನ ಹತ್ಯೆ

ಜಯನಗರ (ಪಶ್ಚಿಮಬಂಗಾಳ) (ಪಿಟಿಐ): ದಕ್ಷಿಣ 24 ಪರಗಣ ಜಿಲ್ಲೆಯ ಜಯನಗರದಲ್ಲಿ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಸ್ಥಳೀಯ ನಾಯಕರೊಬ್ಬರನ್ನು ಸೋಮವಾರ ಬೆಳಿಗ್ಗೆ ಗುಂಡು ಹಾರಿಸಿ ಹತ್ಯೆ ಮಾಡಿದ್ದು, ಹತ್ಯೆ ಆರೋಪಿಗಳಲ್ಲಿ ಒಬ್ಬಾತ ಗುಂಪು ದಾಳಿಯಲ್ಲಿ ಹತನಾಗಿದ್ದಾನೆ.

ಜಯನಗರದ ಬಮುಂಗಾಚಿ ಪ್ರದೇಶದ ಟಿಎಂಸಿ ಅಧ್ಯಕ್ಷ ಸೈಫುದ್ದೀನ್ ಲಸ್ಕರ್ (47) ಹಂತಕರ ಗುಂಡೇಟಿಗೆ ಬಲಿಯಾದವರು. ಪಂಚಾಯಿತಿ ಅಧ್ಯಕ್ಷೆ, ಲಸ್ಕರ್ ಅವರ ಪತ್ನಿಯ ಬೆಂಬಲಿಗರು, ದುಷ್ಕರ್ಮಿಗಳ ಪೈಕಿ ಇಬ್ಬರು ಆರೋಪಿಗಳನ್ನು ಹಿಡಿದು ಗುಂಪು ಹಲ್ಲೆ ನಡೆಸಿದ್ದಾರೆ. ಗುಂಪು ದಾಳಿಗೆ ಒಬ್ಬ ಸತ್ತಿದ್ದು, ಸ್ಥಳಕ್ಕೆ ಧಾವಿಸಿದ ಪೊಲೀಸರು ಮತ್ತೊಬ್ಬನನ್ನು ರಕ್ಷಿಸಿ, ಬಂಧಿಸಿದ್ದಾರೆ.

ಬೆಳಿಗ್ಗೆ ಪ್ರಾರ್ಥನೆ ಸಲ್ಲಿಸಲು ಹೊರಟಿದ್ದ ಲಸ್ಕರ್ ಮೇಲೆ ಅವರ ಮನೆ ಸಮೀಪವೇ ಹತ್ತಿರದಿಂದ ಗುಂಡಿನ ದಾಳಿ ನಡೆದಿದೆ. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದಿದ್ದು, ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು ಎಂದೂ ಪೊಲೀಸರು ತಿಳಿಸಿದ್ದಾರೆ.

ಹತ್ಯೆ ಹಿಂದೆ ಸಿಪಿಎಂ, ಬಿಜೆಪಿ ಬೆಂಬಲಿತ ಗೂಂಡಾಗಳ ಕೈವಾಡವಿದೆ ಎಂದು ಸ್ಥಳೀಯ ಶಾಸಕ ವಿಶ್ವನಾಥ್ ದಾಸ್ ಆರೋಪಿಸಿದ್ದಾರೆ.

ಮನೆಗಳಿಗೆ ಬೆಂಕಿ– ಲೂಟಿ: ಲಸ್ಕರ್ ಹತ್ಯೆ ಬಳಿಕ, ನೆರೆಯ ದಲುವಾಖಾಲಿ ಗ್ರಾಮದಲ್ಲಿ ದುಷ್ಕರ್ಮಿಗಳು ಹಲವಾರು ಮನೆಗಳಿಗೆ ನುಗ್ಗಿ ಲೂಟಿ ಮಾಡಿ, ಬೆಂಕಿ ಹಚ್ಚಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು, ಪೊಲೀಸರು ತಿಳಿಸಿದ್ದಾರೆ. ಸ್ಥಳದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

‘ಸಿಪಿಎಂ ಬೆಂಬಲಿಗರಾದ ಕಾರಣಕ್ಕೆ ನಮ್ಮ ಮನೆಗಳನ್ನು ಗುರಿಯಾಗಿಸಿ ದಾಳಿ ಮಾಡಿ, ನಮ್ಮ ಮೇಲೆ ಹಲ್ಲೆ ನಡೆಸಲಾಗಿದೆ’ ಎಂದು ದಲುವಾಖಾಲಿಯ ಕೆಲವು ಸಂತ್ರಸ್ತರು ಹೇಳಿದ್ದಾರೆ.

‘ಪೊಲೀಸರ ಸಮ್ಮುಖದಲ್ಲಿಯೇ ತಮ್ಮ ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಸ್ಥಳಕ್ಕೆ ಬಂದ ಅಗ್ನಿಶಾಮಕ ವಾಹನಗಳನ್ನು ಬೆಂಕಿ ನಂದಿಸದಂತೆ ತಡೆಯಲಾಯಿತು’ ಎಂದೂ ಅವರು ದೂರಿದ್ದಾರೆ.

ಸಿಪಿಎಂ ಕೇಂದ್ರ ಸಮಿತಿ ಸದಸ್ಯ ಸುಜನ್ ಚಕ್ರವರ್ತಿ ಮಾತನಾಡಿ, ‘ಈ ಘಟನೆಯು ಬೊಗ್ಟುಯಿ ಹತ್ಯಾಕಾಂಡವನ್ನು ನೆನಪಿಸುತ್ತದೆ. ಪ್ರತೀ ಸಾವು ದುರದೃಷ್ಟಕರ. ಸೈಫುದ್ದೀನ್ ಲಸ್ಕರ್ ಹತ್ಯೆಗೆ ಟಿಎಂಸಿಯೊಳಗಿನ ಆಂತರಿಕ ಕಲಹವೇ ಕಾರಣ. ಇದರಲ್ಲಿ ಸಿಪಿಎಂ ಅನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಪೊಲೀಸರು ಲಸ್ಕರ್‌ನ ಹಂತಕರನ್ನು ಬಂಧಿಸಲು ಸಮರ್ಪಕ ತನಿಖೆ ನಡೆಸಬೇಕು. ಈ ಕೊಲೆಯ ಹಿಂದಿನ ಪಿತೂರಿಯನ್ನು ಹೊರಗೆಳೆಯಬೇಕು’ ಎಂದು ಒತ್ತಾಯಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆ ಚುರುಕು: ಸ್ಥಳಕ್ಕೆ ಮುಖ್ಯಮಂತ್ರಿ ಧಾಮಿ ಭೇಟಿ

ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರು ಸುರಕ್ಷಿತ

ಪ್ರಜಾವಾಣಿ ವಾರ್ತೆ

ಉತ್ತರಕಾಶಿ: ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯಲ್ಲಿ ಕುಸಿದಿರುವ ನಿರ್ಮಾಣ ಹಂತದ ಸುರಂಗದೊಳಗೆ 40 ಕಾರ್ಮಿಕರು ಸಿಲುಕಿಕೊಂಡು 30 ಗಂಟೆಗಳು ಕಳೆದಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ. ಅವರೊಂದಿಗೆ ಸಂವಹನವನ್ನೂ ಸಾಧಿಸಲಾಗಿದೆ ಎಂದು ಸರ್ಕಾರ ಸೋಮವಾರ ಹೇಳಿದೆ.

ಇಡೀ ರಾತ್ರಿ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ. ಅವರನ್ನು ಸುರಕ್ಷಿತವಾಗಿ ಹೊರಗೆ ತರುವ ಮಾರ್ಗದ ನಿರ್ಮಾಣ ಕಾರ್ಯವೂ ನಡೆದಿದೆ. ಅವರಿಗೆ ಆಹಾರ ಹಾಗೂ ನೀರು ಪೂರೈಸಲಾಗಿದೆ ಎಂದು ಸಿಲ್ಕ್ಯಾರಾ ಪೊಲೀಸ್ ಠಾಣೆಯ ನಿಯಂತ್ರಣಾ ಕೊಠಡಿಯ ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದರು.



ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಕುಸಿತವಾಗಿರುವ ಸುರಂಗದ ಸ್ಥಳಕ್ಕೆ ಭೇಟಿ ನೀಡಿ, ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯ ಮಾಹಿತಿ ಪಡೆದರು –ಪಿಟಿಐ ಚಿತ್ರ

ಬಳಿಕ ಮಾತನಾಡಿದ ಅವರು, ‘ಸುರಂಗದ ಒಳಗೆ ಸಿಲುಕಿಕೊಂಡಿರುವ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆತರಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಕಾರ್ಯಾಚರಣೆಯನ್ನು ಚುರುಕುಗೊಳಿಸಲಾಗಿದೆ. ಆತಂಕಗೊಂಡಿರುವ ಕಾರ್ಮಿಕರ ಕುಟುಂಬದ ಸದಸ್ಯರಿಗೂ ಆತ್ಮಸ್ಥೈರ್ಯ ತುಂಬಲಾಗಿದೆ’ ಎಂದು ತಿಳಿಸಿದರು.

ಮತ್ತೊಂದೆಡೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ರಕ್ಷಣಾ ಕಾರ್ಯಾಚರಣೆ ಕುರಿತು ಮಾಹಿತಿ ಪಡೆದರು.

ಕಾರ್ಯಾಚರಣೆಗೆ ಅಡ್ಡಿ?: ‌ುರಂಗದ ಒಳಗೆ ಮಣ್ಣು ಕುಸಿದು ಬೀಳುತ್ತಿರುವುದರಿಂದ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದೆ. ಹಾಗಾಗಿ, ಮಣ್ಣು ಕುಸಿದು ಬೀಳದಂತೆ ಕಾಂಕ್ರೀಟ್ ಸಿಂಪಡಿಸಲಾಗುತ್ತಿದೆ ಎಂದು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಎನ್‌ಎಚ್‌ಐಡಿಸಿಎಲ್) ನಿರ್ದೇಶಕ ಅಂಶು ಮನೀಶ್ ಖಾಲ್ಕೊ ತಿಳಿಸಿದ್ದಾರೆ.

‘ಎಲ್ಲಾ ಕಾರ್ಮಿಕರು ಸುರಕ್ಷಿತವಾಗಿದ್ದು, ವಾಕಿಟಾಕಿ ಮೂಲಕ ಅವರ ಜೊತೆ ಹಲವು ಬಾರಿ ಸಂವಹನ ನಡೆಸಲಾಗಿದೆ’ ಎಂದರು.

ಇಂದು, ನಾಳೆಯೂ ಕಾರ್ಯಾಚರಣೆ


ಉತ್ತರಕಾಶಿ (ಪಿಟಿಐ): ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯು ಇನ್ನೂ ಎರಡು ದಿನಗಳ ಕಾಲ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಮಂಗಳವಾರ ರಾತ್ರಿ ಅಥವಾ ಬುಧವಾರ ಎಲ್ಲಾ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆತರುವ ನಿಟ್ಟಿನಲ್ಲಿ ಕಾರ್ಯಾಚರಣೆ ನಡೆದಿದೆ’ ಎಂದು ವಿಪತ್ತು ನಿರ್ವಹಣಾ ಕಾರ್ಯದರ್ಶಿ ರಂಜಿತ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಕೋಟೆ ನಾಡು ಗ್ವಾಲಿಯರ್‌ನಲ್ಲಿ ಕಾಂಗ್ರೆಸ್–ಕಮಲದ ನಡುವೆ ಪೈಪೋಟಿ ಜೋರು

‘ಶಿಥಿಲ’ ಕೋಟೆಯಲ್ಲಿ ಪ್ರಾಬಲ್ಯಕ್ಕೆ ಕಸರತ್ತು

ಚುನಾವಣಾ ಪಯಣ – ಮಧ್ಯಪ್ರದೇಶ



ಮಂಜುನಾಥ ಹೆಬ್ಬಾರ್

ಗ್ವಾಲಿಯರ್: ಕೋಟೆ ನಾಡು ಗ್ವಾಲಿಯರ್‌ನಲ್ಲಿ ಪ್ರಾಬಲ್ಯ ಸ್ಥಾಪಿಸಲು ಕೈ–ಕಮಲ ನಡುವೆ ಪೈಪೋಟಿ ಜೋರಾಗಿದೆ. ಜ್ಯೋತಿರಾದಿತ್ಯ ಸಿಂಧಿಯಾ ಹಾಗೂ ಬೆಂಬಲಿಗರ ವಲಸೆಯಿಂದ ಶಿಥಿಲಗೊಂಡಿರುವ ‘ಕೈ’ ಕೋಟೆಯನ್ನು ಪುಡಿಗಟ್ಟಲು ಕಮಲ ಪಡೆ ಕಸರತ್ತು ನಡೆಸುತ್ತಿದೆ. ‘ಆಪರೇಷನ್ ಕಮಲ’, ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಾಳಯ ಮತದಾರರ ಮನ ಗೆಲ್ಲುವ ಪ್ರಯತ್ನದಲ್ಲಿ ತೊಡಗಿದೆ.

ಬಿಜೆಪಿ ಆಡಳಿತ ಕುರಿತು ಈ ಭಾಗದ ಮತದಾರರಿಗೆ ದೊಡ್ಡ ಮಟ್ಟದ ಸಿಟ್ಟಿದೆ. ಕಾಂಗ್ರೆಸ್‌ನ ಬಗ್ಗೆಯೂ ಅವರಿಗೆ ಅಷ್ಟೊಂದು ಸಮಾಧಾನ ಇಲ್ಲ. ಗ್ವಾಲಿಯರ್ ರೈಲು ನಿಲ್ದಾಣದಲ್ಲಿ ಮಾತಿಗೆ ಸಿಕ್ಕ ಆಟೊ ಚಾಲಕ ಬ್ರಿಜೇಶ್, ‘ಅಕ್ಟೋಬರ್ 25ರಂದು ನಡೆದ ಸಿಂಧಿಯಾ ಶಾಲೆಯ 125ನೇ ಸಂಸ್ಥಾಪನಾ ದಿನಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಮುಖ್ಯ ಅತಿಥಿ. ಪ್ರಧಾನಿ ಅವರು ಸುಮಾರು ಅರ್ಧಗಂಟೆಯಷ್ಟು ಭಾಷಣ ಮಾಡಿದರು. ಸಿಂಧಿಯಾ ಕುಟುಂಬವನ್ನು ಹೊಗಳಲು ಬಹುತೇಕ ಸಮಯ ಮೀಸಲಿಟ್ಟರು. ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಗುಜರಾತಿನ ಅಳಿಯ ಎಂದೂ ಕರೆದರು. ಆದರೆ, ಗ್ವಾಲಿಯರ್‌ನ ಅಭಿವೃದ್ಧಿ ಬಗ್ಗೆ ಚಕಾರ ಎತ್ತಲಿಲ್ಲ’ ಎಂದು ಆಕ್ಷೇಪಿಸಿದರು.

‘ಗ್ವಾಲಿಯರ್ ಮೊದಲಿನಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. ಆಪರೇಷನ್ ಕಮಲದ ಮೂಲಕ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಸೆಳೆದುಕೊಂಡು ಮೋದಿ ಹಾಗೂ ಅಮಿತ್ ಶಾ ಜೋಡಿ ‘ಕೈ’ ಕೋಟೆಯಲ್ಲಿ ಬಿರುಕು ಮೂಡಿಸಿದರು. ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಕಳೆದ 10 ದಿನಗಳಲ್ಲಿ ಮೋದಿ ಹಾಗೂ ಶಾ ಅವರು ನಗರಕ್ಕೆ ಮೂರು ಸಲ ಬಂದು ಹೋದರು. ಭಾವನಾತ್ಮಕ ವಿಷಯಗಳನ್ನು ಪ್ರಸ್ತಾಪಿಸಿದರು. ಆದರೆ, ಜನರ ಸಂಕಷ್ಟಗಳ ಕುರಿತು ಮಾತನಾಡಲಿಲ್ಲ’ ಎಂದೂ ಅವರು ಆಕ್ರೋಶ ತೋರಿದರು. ‘ಗ್ವಾಲಿಯರ್ ಸುತ್ತಮುತ್ತ ದೊಡ್ಡ ಕೈಗಾರಿಕೆಗಳಿಲ್ಲ. 20 ವರ್ಷಗಳಿಂದ ಅಧಿಕಾರದಲ್ಲಿದ್ದರೂ ಬಿಜೆಪಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಿಲ್ಲ. ಎಷ್ಟೊಂದು ಯುವಕರು ಕೆಲಸವಿಲ್ಲದೆ ಓಡಾಡುತ್ತಿದ್ದಾರೆ. ಒಂದೆರಡು ದಿನಗಳಲ್ಲಿ ಎಲ್ಲವೂ ನಿಮಗೆ ಗೊತ್ತಾಗುತ್ತದೆ’ ಎಂದೂ ಹೇಳಿದರು.

‘ಎಲ್‌ಇಡಿ ದೀಪಗಳನ್ನು ಹಾಕುವುದು ಹಾಗೂ ಸೆಲ್ಫಿ ಸ್ಟ್ಯಾಂಡ್‌ಗಳನ್ನು ಅಳವಡಿಸುವುದನ್ನೇ ಬಿಜೆಪಿಯವರು ಅಭಿವೃದ್ಧಿ ಎಂದುಕೊಂಡಿದ್ದಾರೆ. ನಗರದ ಎಷ್ಟೊಂದು ಕಡೆ ಸೆಲ್ಫಿ ಸ್ಟ್ಯಾಂಡ್‌ಗಳಿವೆ ಎಂಬುದನ್ನು ನೀವೇ ಒಂದು ಸಲ ಲೆಕ್ಕ ಹಾಕಿ’ ಎಂದು ಹೇಳಿದರು. ‘ನೀವು ಕಾಂಗ್ರೆಸ್‌ನವರಾ’ ಎಂದು ಪ್ರಶ್ನಿಸಿದರೆ, ‘ದಿನದ ಸಂಪಾದನೆ ₹500 ದಾಟುವುದಿಲ್ಲ. ಕಷ್ಟದಲ್ಲೇ ಜೀವನ ನಡೆಸುತ್ತಿದ್ದೇನೆ. ಪಕ್ಷದಲ್ಲಿ ಗುರುತಿಸಿಕೊಂಡು ನನ್ನ ಕಷ್ಟ ಪರಿಹಾರ ಆಗುತ್ತದೆಯೇ? ವಾಸ್ತವ ಸಂಗತಿ ಹೇಳಿದ್ದೇನೆ’ ಎಂದು ಸಮಜಾಯಿಷಿ ನೀಡಿದರು.

‘ನಾನು ಬಿಜೆಪಿಯವನು’ ಎಂದೇ ಮಾತು ಆರಂಭಿಸಿದವರು ಕಾರು ಚಾಲಕ ರವಿ ಪಾಠಕ್. ‘ನಗರವು ಅಭಿವೃದ್ಧಿಯಲ್ಲಿ 25 ವರ್ಷಗಳಷ್ಟು ಹಿಂದುಳಿದಿದೆ. ನಗರದಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗಿವೆ. ಬಿಜೆಪಿ ಸರ್ಕಾರವೂ ನಗರದ ಬಗ್ಗೆ ನಿರ್ಲಕ್ಷ್ಯ ವಹಿಸಿದೆ. ಜನರು ಈ ಸಲ ಪರಿವರ್ತನೆ ಬಯಸಿದ್ದಾರೆ’ ಎಂದು ಹೇಳಿಕೊಂಡರು.

‘ರಾಜ–ಮಹಾರಾಜರು ಯಾವಾಗಲೂ ಅವಕಾಶವಾದಿಗಳು. ಗಾಳಿ ಬಂದ ಕಡೆಗೆ ತೂರಿಕೊಳ್ಳುವವರು. ಅಧಿಕಾರ ಇಲ್ಲದಿದ್ದರೆ ವಿಲಿವಿಲಿ ಒದ್ದಾಡುತ್ತಾರೆ. ಸಿಂಧಿಯಾ ಕುಟುಂಬ ಸಹ ಅದಕ್ಕಿಂತ ಭಿನ್ನವಲ್ಲ. 50 ವರ್ಷಗಳಿಂದ ಅಪ್ಪ–ಮಕ್ಕಳು (ಮಾಧವರಾವ್ ಸಿಂಧಿಯಾ, ಜ್ಯೋತಿರಾದಿತ್ಯ ಸಿಂಧಿಯಾ) ಅಧಿಕಾರದ ಸುಖ ಅನುಭವಿಸಿಕೊಂಡು ಬಂದವರು. ಅಧಿಕಾರದ ಆಸೆಯಿಂದ ಬಿಜೆಪಿಗೆ ಓಡೋಡಿ ಬಂದರು. ಆದರೆ, ಅವರ ವರ್ತನೆ ಬಿಜೆಪಿಗೆ ಹೊಂದುವುದಿಲ್ಲ’ ಎಂದೂ ಅವರು ಹೇಳಿದರು. ಅದಕ್ಕೆ ಒಂದು ಉದಾಹರಣೆ ಕೊಟ್ಟರು. ‘ವೇದಿಕೆಗಳಲ್ಲಿ ಜ್ಯೋತಿರಾದಿತ್ಯ ದರ್ಪ ತೋರುತ್ತಾರೆ. ರಾಜ–ಮಹಾರಾಜದ ಶೈಲಿಯಲ್ಲೇ ಭಾಷಣ ಮಾಡುತ್ತಾರೆ. ಭಾಷಣ ಮುಗಿದ ಕೂಡಲೇ ಮೈಕ್ರೋಫೋನ್ ಕಿತ್ತೆಸೆಯುತ್ತಾರೆ. ಇದು ಬಿಜೆಪಿ ಸಂಸ್ಕೃತಿಯಲ್ಲ. ಇಂತಹ ನಾಯಕರನ್ನು ಸೇರಿಸಿಕೊಂಡು ಬಿಜೆಪಿ ವರಿಷ್ಠರು ತಪ್ಪು ಮಾಡಿದ್ದಾರೆ. ಇದಕ್ಕೆಲ್ಲ ಬಿಜೆಪಿ ಈ ಸಲ ಬೆಲೆ ತೆರಲಿದೆ’ ಎಂದೂ ಅವರು ಅಭಿಪ್ರಾಯಪಟ್ಟರು.

ನಗರದ ರಸಗೊಬ್ಬರ ಅಂಗಡಿಯ ಸಮೀಪದಲ್ಲಿ ಮಾತಿಗೆ ಸಿಕ್ಕ ಸುನೀಲ್ ದಂಡೋಟಿಯಾ, ‘ನಗರದಲ್ಲಿ 50 ವರ್ಷಗಳಷ್ಟು ಹಳೆಯದಾದ ಜವಳಿ ಮಿಲ್ ಇದೆ. ಈ ಮಿಲ್ ಸಾವಿರಾರು ಜನರಿಗೆ ಉದ್ಯೋಗ ನೀಡಿತ್ತು. ಮಿಲ್ ಸ್ಥಗಿತಗೊಂಡು ಕೆಲವು ವರ್ಷಗಳು ಕಳೆದಿವೆ. ಕೆಲವು ಎಕರೆ ಜಾಗದಲ್ಲಿ ಕಟ್ಟಡ ಪಳೆಯುಳಿಕೆಯಂತೆ ಈಗಲೂ ಇದೆ. ಮಿಲ್ ಪುನರುಜ್ಜೀವನಕ್ಕೆ ಕೆಲವು ಕೋಟಿ ಸಾಕು. ಜನರಿಗೆ ಉದ್ಯೋಗ ಸಿಗುತ್ತಿತ್ತು. ಆದರೆ, ಆ ಕೆಲಸ ಆಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು. ‘ಸಿಂಧಿಯಾ ಪಕ್ಷಾಂತರ ಮಾಡಿ ತಪ್ಪು ಮಾಡಿದ್ದಾರೆ. ಸ್ವಲ್ಪ ಕಾಯಬೇಕಿತ್ತು. ಕಾಂಗ್ರೆಸ್‌ನಲ್ಲೇ ಮುಖ್ಯಮಂತ್ರಿ ಆಗಬಹುದಿತ್ತು’ ಎಂಬುದು ಅವರ ಅನಿಸಿಕೆ.

ಗ್ವಾಲಿಯರ್–ಚಂಬಲ್ ಭಾಗದಲ್ಲಿ 34 ವಿಧಾನಸಭಾ ಕ್ಷೇತ್ರಗಳಿವೆ. ಈ ಭಾಗದಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ ಪ್ರಭಾವಿ ನಾಯಕ. 2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 28 ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಿತ್ತು. ಸಿಂಧಿಯಾ ನೇತೃತ್ವದಲ್ಲಿ 22 ಕಾಂಗ್ರೆಸ್ ಶಾಸಕರು 2020ರಲ್ಲಿ ಬಿಜೆಪಿಗೆ ಪಕ್ಷಾಂತರ ಮಾಡಿ ಕಮಲನಾಥ್ ನೇತೃತ್ವದ ಸರ್ಕಾರದ ಪತನಕ್ಕೆ ಕಾರಣರಾಗಿದ್ದರು. ಸಿಂಧಿಯಾ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿ ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು. ಅಸ್ಸಾಂ ಮಾದರಿಯಲ್ಲೇ ಮಧ್ಯಪ್ರದೇಶದಲ್ಲಿ ಬಿಜೆಪಿ ಪ್ರಯೋಗ ನಡೆಸಲಿದೆ ಎಂಬ ನಂಬಿಕೆಯಲ್ಲಿ ಸಿಂಧಿಯಾ ಹಾಗೂ ಬೆಂಬಲಿಗರು ಇದ್ದರು. ಬಿಜೆಪಿಯಲ್ಲಿ ಒಂದು ಡಜನ್‌ನಷ್ಟು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಿದ್ದಾರೆ. ಹೀಗಾಗಿ, ಬಿಜೆಪಿ ಈ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಿದೆ.

ಜತೆಗೆ, ಸಿಂಧಿಯಾ ಅವರ ಏಳು ಬೆಂಬಲಿಗರಿಗೂ ಟಿಕೆಟ್ ನಿರಾಕರಿಸಿ ‘ಸಂದೇಶ’ ರವಾನಿಸಿದೆ. ಈ ಬೆಳವಣಿಗೆಯಿಂದ ಜ್ಯೋತಿರಾದಿತ್ಯ ಜತೆ ಮುನಿಸಿಕೊಂಡಿರುವ ಕೆಲವು ಬೆಂಬಲಿಗರು ‘ಕೈ’ ಪಾಳಯಕ್ಕೆ ಮರಳಿದ್ದಾರೆ. ಇನ್ನೊಂದೆಡೆ, ಈ ಭಾಗದಲ್ಲಿ ಕಾಂಗ್ರೆಸ್‌ಗೆ ಪ್ರಭಾವಿ ನಾಯಕರಿಲ್ಲ. ಸಾಲು ಸಾಲು ನಾಯಕರ ವಲಸೆಯಿಂದ ‘ಕೈ’ ಪಾಳಯ ನಿಸ್ತೇಜಗೊಂಡಿದೆ. ಆಡಳಿತ ವಿರೋಧಿ ಅಲೆಯೇ ಪಕ್ಷವನ್ನು ಗೆಲುವಿನ ದಡ ಮುಟ್ಟಿಸಲಿದೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ.

ಚುನಾವಣಾ ಕಣದಲ್ಲಿ

- **‘ಕಾಂಗ್ರೆಸ್‌ನಿಂದ ರೈತರಿಗೆ ಸಂಕಷ್ಟ’**: ದೀಪಾವಳಿಗಾಗಿ ಪ್ರಚಾರದಿಂದ ಬಿಡುವು ಪಡೆದಿದ್ದ ಬಿಆರ್‌ಎಸ್ ಮುಖ್ಯಸ್ಥ, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಸೋಮವಾರ ಅಶ್ವರಾವುಪೇಟ ಮತ್ತು ಬುರ್‌ಂಪಾಡು ಕ್ಷೇತ್ರಗಳಲ್ಲಿ ರ‍್ಯಾಲಿ ನಡೆಸಿದರು. ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ರೈತರಿಗೆ ಕೇವಲ 3 ಗಂಟೆ ವಿದ್ಯುತ್ ನೀಡಲು, ಭೂ ದಾಖಲೆಗಳನ್ನು ನಿರ್ವಹಿಸುವ ‘ಧರಣಿ’ ಪೋರ್ಟಲ್ ಸ್ಥಗಿತಗೊಳಿಸಲು ಕಾಂಗ್ರೆಸ್ ನಿರ್ಧರಿಸಿದೆ. ಕಾಂಗ್ರೆಸ್‌ನಿಂದ ರೈತರು ಸಂಕಷ್ಟಕ್ಕೆ ಈಡಾಗಬೇಕಾಗುತ್ತದೆ ಎಂದು ಹೇಳಿದರು.
- **ಸಂಬಂಧಿಗಳ ನಡುವೆ ಸ್ಪರ್ಧೆ**: ರಾಜಸ್ಥಾನದ ನಾಲ್ಕು ವಿಧಾನಸಭೆ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ತಮ್ಮ ಕುಟುಂಬದ ಸದಸ್ಯರ ಎದುರೇ ಹೋರಾಡುವ ಸನ್ನಿವೇಶ ಸೃಷ್ಟಿಯಾಗಿದೆ. ದಾಂತಾರಾಮಗಢ ಕ್ಷೇತ್ರದ ಶಾಸಕ, ಕಾಂಗ್ರೆಸ್ ಅಭ್ಯರ್ಥಿ ವೀರೇಂದ್ರ ಚೌಧರಿ ಎದುರು ಅವರ ಪತ್ನಿ ರೀತಾ ಚೌಧರಿ ಜನ ನಾಯಕ ಜನತಾ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ಧೋಲ್ಪುರ ಕ್ಷೇತ್ರದಲ್ಲಿ ಬಿಜೆಪಿ ಶಿವಚರಣ್ ಕುಶ್ವಾಹ ಅವರನ್ನು ಕಣಕ್ಕಿಳಿಸಿದೆ. ಶೋಭರಾಣಿ ಕುಶ್ವಾಹ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಅವರಿಬ್ಬರೂ ಒಂದೇ ಕುಟುಂಬದವರು.
- **‘ರಾಮಮಂದಿರ ದರ್ಶನ’**: ಮಧ್ಯಪ್ರದೇಶದಲ್ಲಿ ಬಿಜೆಪಿ ಗೆದ್ದು ಸರ್ಕಾರ ರಚಿಸಿದರೆ ರಾಜ್ಯದ ಜನರಿಗೆ ಅಯೋಧ್ಯಾ ರಾಮಮಂದಿರದಲ್ಲಿ ‘ದರ್ಶನ’ ಏರ್ಪಡಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದರು. ಸಿರೋಂಜ್ ವಿಧಾನಸಭೆ ಕ್ಷೇತ್ರದಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ಅವರ ಮಕ್ಕಳ ಉದ್ಧಾರಕ್ಕಾಗಿ ರಾಜಕೀಯದಲ್ಲಿ ಇದ್ದಾರೆ ಎಂದರು. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು 10 ವರ್ಷಗಳ ಅಧಿಕಾರಾವಧಿಯಲ್ಲಿ ಮಧ್ಯಪ್ರದೇಶಕ್ಕೆ ₹ 2 ಲಕ್ಷ ಕೋಟಿ ನೀಡಿತ್ತು. ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ₹ 6.35 ಲಕ್ಷ ಕೋಟಿ ಅನುದಾನ ನೀಡಿದೆ ಎಂದರು.

ನುಡಿ–ಕಿಡಿ



ನಾನು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷನಾಗಿದ್ದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಮಮಂದಿರ ನಿರ್ಮಾಣ ಆರಂಭದ ದಿನಾಂಕ ಯಾವುದು ಎಂದು ಕೇಳುತ್ತಿದ್ದರು. ಮುಂದಿನ ವರ್ಷ ಜನವರಿ 22ರಂದು ರಾಮಮಂದಿರದಲ್ಲಿ ರಾಮನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು ಎಂದು ಈಗ ನಾನು ಹೇಳುತ್ತಿದ್ದೇನೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ



ಮಹಾದೇವ ಬೆಟ್ಟಿಂಗ್ ಆ್ಯಪ್ ದಂದೆಯಲ್ಲಿ ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರೇ ಕಿಂಗ್‌ಪಿನ್. ಅವರ ಅಧಿಕಾರಾವಧಿಯಲ್ಲಿ ರಾಜ್ಯದ ಜನರ ಹಣವನ್ನು ಲೂಟಿ ಮಾಡಿ ಗಾಂಧಿ ಕುಟುಂಬದ ಖಜಾನೆ ತುಂಬಿಸಿದ್ದಾರೆ. ಈ ರೀತಿಯ ಹಗರಣ ಎಸಗುವ ಧೈರ್ಯ ಮುಂದೆ ಯಾರಿಗೂ ಬರಬಾರದು. ಅಂಥ ಕಠಿಣ ಶಿಕ್ಷೆ ಅವರಿಗೆ ವಿಧಿಸಬೇಕು.

ಗೌರವ್ ಭಾಟಿಯಾ, ಬಿಜೆಪಿ ರಾಷ್ಟ್ರೀಯ ವಕ್ತಾರ

‘ಮೋದಿ ಸರ್ಕಾರ ಏನು ಕ್ರಮ ಕೈಗೊಂಡಿದೆ?’

ನೀಮಚ್ (ಪಿಟಿಐ): ‘ಮಧ್ಯಪ್ರದೇಶವು ದೇಶದ ‘ಭ್ರಷ್ಟಾಚಾರದ ರಾಜಧಾನಿ’ಯಾಗಿದೆ. ರಾಜ್ಯ ಬಿಜೆಪಿ ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದರು.

ಮಧ್ಯಪ್ರದೇಶದ ನೀಮಚ್ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು.

ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಪುತ್ರ ಮತ್ತು ಮಧ್ಯವರ್ತಿಯೊಬ್ಬರು ಕೋಟ್ಯಂತರ ರೂಪಾಯಿಗಳ ಬಗ್ಗೆ ಮಾತನಾಡುತ್ತಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿರುವುದನ್ನು ಉಲ್ಲೇಖಿಸಿದ ರಾಹುಲ್, ‘ವಿಡಿಯೊದಲ್ಲಿ ತೋಮರ್ ಅವರ ಮಗ ನಿಮ್ಮ ಹಣ ಕದಿಯುತ್ತಿರುವುದನ್ನು ನೋಡಬಹುದು’ ಎಂದು ಆರೋಪಿಸಿದರು.

ಇದೇ ವಿಚಾರ ಕುರಿತು ಹರ್ದಾ ಸಭೆಯಲ್ಲಿ ಮಾತನಾಡಿದ ರಾಹುಲ್, ‘ತೋಮರ್ ಅವರ ಮಗನ ವಿಡಿಯೊ ಬಗ್ಗೆ ಮೋದಿ ಏನಾದರೂ ಕ್ರಮ ಕೈಗೊಂಡಿದ್ದಾರೆಯೇ? ಇ.ಡಿ., ಸಿಬಿಐ, ಆದಾಯ ತೆರಿಗೆ ಇಲಾಖೆಗಳು ಅವರನ್ನು ತನಿಖೆಗೊಳಪಡಿಸುತ್ತವೆಯೇ’ ಎಂದು ಪ್ರಶ್ನಿಸಿದರು.

ಛತ್ತೀಸಗಢ: ಕಾಂಗ್ರೆಸ್ ಪತನಕ್ಕೆ ಕ್ಷಣಗಣನೆ

ಚುನಾವಣಾ ರ‍್ಯಾಲಿಯಲ್ಲಿ ಬಘೆಲ್ ಸರ್ಕಾರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

ಮುಂಗೇಲಿ/ಮಹಾಸಮುಂದ್ (ಪಿಟಿಐ): ಭ್ರಷ್ಟಾಚಾರದ ವಿಚಾರವಾಗಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಛತ್ತೀಸಗಢದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಪತನಕ್ಕೆ ಕ್ಷಣಗಣನೆ ಆರಂಭವಾಗಿದೆ ಎಂದು ಸೋಮವಾರ ಹೇಳಿದ್ದಾರೆ.

ಛತ್ತೀಸಗಢದ ಮುಂಗೇಲಿ, ಮಹಾಸಮುಂದ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಭೂಪೇಶ್ ಬಘೆಲ್ ಹಾಗೂ ಉಪ ಮುಖ್ಯಮಂತ್ರಿ ಟಿ.ಎಸ್. ಸಿಂಹ ದೇವ್ ಅವರ ನಡುವಿನ ಅಧಿಕಾರ ಹಂಚಿಕೆ ಕುರಿತು ಒಪ್ಪಂದದ ಬಗ್ಗೆ ಪ್ರಸ್ತಾಪಿಸಿದ ಮೋದಿ, ‘ಕಾಂಗ್ರೆಸ್ ಪಕ್ಷವು ತನ್ನದೇ ಹಿರಿಯ ನಾಯಕರನ್ನು ಕೈಬಿಡಲು ಸಿದ್ಧವಿದೆ ಎಂದಾದರೆ ಪಕ್ಷವು ಜನರಿಗೆ ವಂಚಿಸಲು ಕೂಡ ಸಿದ್ಧವಿದೆ ಎಂಬುದು ಖಚಿತ. ಜನರಿಗೆ ನೀಡಿರುವ ಭರವಸೆಗಳನ್ನು ಪಕ್ಷವು ಈಡೇರಿಸುವುದಿಲ್ಲ’ ಎಂದರು.

‘ಅವರು (ಬಘೆಲ್) ತಮ್ಮ ಸ್ಥಾನವನ್ನು ಎರಡೂವರೆ ವರ್ಷಗಳಲ್ಲಿ ದುರ್ಬಳಕೆ ಮಾಡಿಕೊಂಡರು.



ಪ್ರಧಾನಿ ನರೇಂದ್ರ ಮೋದಿ ಅವರು ಛತ್ತೀಸಗಢದ ಮಹಾಸಮುಂದ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡರು (ಪಿಟಿಐ ಚಿತ್ರ)

ಸಹಸ್ರಾರು ಕೋಟಿ ರೂಪಾಯಿ ಮೊತ್ತದ ಹಗರಣ ನಡೆಸಿದರು. ಇಡೀ ಆಟವನ್ನು ಬದಲಾಯಿಸಿದರು. ಎರಡೂವರೆ ವರ್ಷ ಪೂರ್ಣಗೊಂಡ ನಂತರ ಖಜಾನೆಯನ್ನು ದೆಹಲಿಗೆ ಮುಕ್ತವಾಗಿಸಿದರು, ಎಲ್ಲರನ್ನೂ ಖರೀದಿಸಿದರು. ಅಧಿಕಾರ ಹಂಚಿಕೆ ಒಪ್ಪಂದ ಕೈಬಿಡಲಾಯಿತು. ಇದು ಕಾಂಗ್ರೆಸ್ಸಿನ ಹಳಬರಲ್ಲಿ ಅಸಂತೋಷ ಮೂಡಿಸಿತು’ ಎಂದು ಮೋದಿ ಅವರು ಹೇಳಿದರು.

ಛತ್ತೀಸಗಢವನ್ನು ಲೂಟಿ ಮಾಡಿ ತನ್ನ ಖಜಾನೆ ಭರ್ತಿ ಮಾಡಿಕೊಳ್ಳುವುದು ಮಾತ್ರ ಕಾಂಗ್ರೆಸ್ಸಿನ ಗುರಿ. ಬಘೆಲ್ ಅವರ ಪುತ್ರ ಹಾಗೂ ಇತರರು ‘ಸೂಪರ್ ಸಿ.ಎಂ.’ ರೀತಿ ವರ್ತಿಸಿ ರಾಜ್ಯವನ್ನು ನಾಶ ಮಾಡಿದ್ದಾರೆ ಎಂದು ದೂರಿದರು.

‘ಛತ್ತೀಸಗಢದಲ್ಲಿ ತನ್ನ ಅವಧಿ ಮುಗಿದಿದೆ ಎಂಬುದು ಕಾಂಗ್ರೆಸ್ಸಿಗೆ ಅರ್ಥವಾಗಿದೆ. ಮುಖ್ಯಮಂತ್ರಿ (ಬಘೆಲ್) ಅವರೇ ಚುನಾವಣೆಯಲ್ಲಿ (ಪಾಠನ್ ವಿಧಾನಸಭಾ ಕ್ಷೇತ್ರದಲ್ಲಿ) ಸೋಲಲಿದ್ದಾರೆ ಎಂದು ದೆಹಲಿಯ ಕೆಲವು ಪತ್ರಕರ್ತ ಸ್ನೇಹಿತರು ಹಾಗೂ ರಾಜಕೀಯ ವಿಶ್ಲೇಷಕರು ನನಗೆ ಹೇಳಿದ್ದಾರೆ’ ಎಂದು ಮೋದಿ ತಿಳಿಸಿದರು.

ಕಾಂಗ್ರೆಸ್ ಪಕ್ಷವು ಪಂಚಾಯಿತಿಯಿಂದ ಪಾರ್ಲಿಮೆಂಟ್‌ವರೆಗೆ ಅಧಿಕಾರದಲ್ಲಿ ಇದ್ದರೂ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿಯನ್ನು ಹಲವು ವರ್ಷಗಳವರೆಗೆ ಜಾರಿಗೆ ತಂದಿರಲಿಲ್ಲ.

ನರೇಂದ್ರ ಮೋದಿ, ಪ್ರಧಾನಿ

ಕಾಂಗ್ರೆಸ್ಸಿಗೆ ತಮ್ಮನ್ನು ಕಂಡರೆ ಅದೆಷ್ಟು ದ್ವೇಷವೆಂದರೆ, ತಮ್ಮ ಹೆಸರು ಬಳಸಿ ಇಡೀ ಇತರೆ ಹಿಂದುಳಿದ ವರ್ಗಗಳನ್ನು (ಒಬಿಸಿ) ಕಾಂಗ್ರೆಸ್ ನಿಂದಿಸುತ್ತದೆ ಎಂದು ಮೋದಿ ಅವರು ದೂರಿದರು.

‘ಕಾಂಗ್ರೆಸ್ ಈಗ ಮೋದಿ ಅವರ ಜಾತಿಯನ್ನೂ ದ್ವೇಷಿಸುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಕಾಂಗ್ರೆಸ್ ಪಕ್ಷವು ಮೋದಿ ಹೆಸರು ಬಳಸಿ ಇಡೀ ಒಬಿಸಿ ಸಮುದಾಯವನ್ನು ನಿಂದಿಸುತ್ತಿದೆ. ನ್ಯಾಯಾಲಯ ಹೇಳಿದ ನಂತರವೂ ಆ ಪಕ್ಷವು ಕ್ಷಮೆ ಯಾಚಿಸಲು ಮುಂದಾಗುತ್ತಿಲ್ಲ’ ಎಂದು ಪ್ರಧಾನಿ ಮೋದಿ ಹೇಳಿದರು.

ಯುವಜನರ ಆಶೋತ್ತರ ಹೊಸಕಿದ ಕೇಂದ್ರ: ಖರ್ಗೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಯುವಜನರ ಆಶೋತ್ತರಗಳನ್ನು ಹೊಸಕಿಹಾಕಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಆರೋಪಿಸಿದ್ದಾರೆ.

ಮೋದಿ ಅವರು ತೆಲಂಗಾಣದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ವೇಳೆ ಯುವತಿಯೊಬ್ಬಳು ವಿದ್ಯುತ್ ಕಂಬವೇರಿ, ಅವರಿಗೆ ಏನನ್ನೋ ಹೇಳಲು ಪ್ರಯತ್ನಿಸಿದ್ದಳು. ಈ ಘಟನೆಯನ್ನು ಉಲ್ಲೇಖಿಸಿ ಖರ್ಗೆ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಯುವಜನರು ಉದ್ಯೋಗಾವಕಾಶಕ್ಕಾಗಿ ಎದುರು ನೋಡುತ್ತಿದ್ದರು. ಆದರೆ, ಮೋದಿ ನೇತೃತ್ವದ ಸರ್ಕಾರವು ಕಳೆದ 45 ವರ್ಷಗಳ ಅತಿಹೆಚ್ಚಿನ ನಿರುದ್ಯೋಗ ಪ್ರಮಾಣವನ್ನು ಕರುಣಿಸಿತು’ ಎಂದು ಖರ್ಗೆ ಅವರು ‘ಎಕ್ಸ್’ನ ಪೋಸ್ಟ್ ಮೂಲಕ ವ್ಯಂಗ್ಯವಾಡಿದ್ದಾರೆ. ಯುವಜನರು ಆರ್ಥಿಕ ಸಬಲೀಕರಣವನ್ನು ಎದುರು ನೋಡುತ್ತಿದ್ದರು. ಅದಕ್ಕೆ ಬದಲಾಗಿ ಸರ್ಕಾರವು ಬೆಲೆ ಏರಿಕೆಯ ಬಿಸಿ ಮುಟ್ಟಿಸಿತು. ಇದರಿಂದಾಗಿ ಜನರ ಉಳಿತಾಯವು 47 ವರ್ಷಗಳಷ್ಟು ಹಿಂದಕ್ಕೆ ಹೋಯಿತು. ಅವರು ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಬಯಸಿದ್ದರು. ಆದರೆ ಮೋದಿ ನೇತೃತ್ವದ ಸರ್ಕಾರವು ದೇಶ ಹಿಂದೆಂದೂ ಕಾಣದ ಆರ್ಥಿಕ ಅಸಮಾನತೆ ಸೃಷ್ಟಿಸಿತು. ಮಧ್ಯಮ ವರ್ಗ ಮತ್ತು ಬಡವರು ಸಂಕಷ್ಟದಲ್ಲಿದ್ದಾರೆ, ದೇಶದ ಒಟ್ಟು ಆಸ್ತಿಯಲ್ಲಿ ಶೇ 60ರಷ್ಟು ಆಸ್ತಿಯು ಶೇ 5ರಷ್ಟು ಮಂದಿ ಶ್ರೀಮಂತರ ಬಳಿ ಇದೆ ಎಂದು ಹೇಳಿದ್ದಾರೆ.

ಕನ್ಹಯ್ಯಲಾಲ್ ಹಂತಕರಿಗೆ ಬಿಜೆಪಿ ನಂಟು: ಗೆಹಲೋತ್

ಜೋಧಪುರ (ಪಿಟಿಐ): ‘ಉದಯಪುರದ ಟೈಲರ್ ಕನ್ಹಯ್ಯಲಾಲ್ ಹತ್ಯೆಯ ಹಿಂದಿರುವವರು ಬಿಜೆಪಿಯವರು. ಆ ಪಕ್ಷದ ಒತ್ತಡದ ಮೇರೆಗೆ ಘಟನೆಗೆ ಕೆಲವು ದಿನಗಳ ಮೊದಲು ಆರೋಪಿಗಳನ್ನು ಪೊಲೀಸ್ ವಶದಿಂದ ಬಿಡುಗಡೆ ಮಾಡಲಾಗಿತ್ತು’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆರೋಪಿಸಿದ್ದಾರೆ.

ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಭಾನುವಾರ ನಡೆದ ಸಭೆಯಲ್ಲಿ ಅವರು ಈ ಆರೋಪ ಮಾಡಿದ್ದಾರೆ. ಇಸ್ಲಾಂ ಧರ್ಮವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ಟೈಲರ್ ಅನ್ನು ಕಳೆದ ವರ್ಷ ದುಷ್ಕರ್ಮಿಗಳು ಕೊಲೆ ಮಾಡಿದ್ದರು. ರಾಜ್ಯದ ಪ್ರತಿಪಕ್ಷ ಬಿಜೆಪಿ ಈ ಆರೋಪ ತಳ್ಳಿಹಾಕಿದ್ದು, ಕೋಮು ಘಟನೆಗಳನ್ನು ನಿಯಂತ್ರಿಸುವಲ್ಲಿನ ಕಾಂಗ್ರೆಸ್ ಸರ್ಕಾರದ ವೈಫಲ್ಯವೇ ಟೈಲರ್ ಹತ್ಯೆಗೆ ಕಾರಣ ಎಂದು ಹೇಳಿದೆ. ‘ಕನ್ಹಯ್ಯ ಲಾಲ್ ಹತ್ಯೆ ಪ್ರಕರಣದ ಆರೋಪಿಗಳು ಬಿಜೆಪಿಯವರು. ಘಟನೆಗೆ ಎರಡು–ಮೂರು ದಿನಗಳ ಮೊದಲು ಬೇರೆ ಪ್ರಕರಣದಲ್ಲಿ ಪೊಲೀಸರು ಅವರನ್ನು ವಶಕ್ಕೆ ಪಡೆದಿದ್ದರು. ಬಿಜೆಪಿ ನಾಯಕರು ಅವರನ್ನು ಬಿಡುಗಡೆ ಮಾಡಿಸಿದ್ದರು’ ಎಂದು ಗೆಹಲೋತ್ ದೂರಿದ್ದಾರೆ.

ಕಾಂಗ್ರೆಸ್ ಆರೋಪಗಳನ್ನು ನಿರಾಕರಿಸಿದ ಪಶ್ಚಿಮ ರಾಜಸ್ಥಾನದ ಬಿಜೆಪಿಯ ಚುನಾವಣಾ ಉಸ್ತುವಾರಿ ರಾಜೇಂದ್ರ ಗೆಹಲೋತ್, ಪೊಲೀಸರು ಆರೋಪಿಗಳನ್ನು ಹಿಡಿದಿದ್ದರು ಎಂದಾದರೆ, ಅವರನ್ನು ಏಕೆ ಬಿಡುಗಡೆ ಮಾಡಲಾಯಿತು? ಅವರನ್ನು ಪೊಲೀಸರು ಬಿಡುಗಡೆ ಮಾಡಿದ್ದರೆ ಅದು ರಾಜ್ಯ ಸರ್ಕಾರದ ದೌರ್ಬಲ್ಯ’ ಎಂದಿದ್ದಾರೆ.

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಈ ಹತ್ಯೆಯ ಬಗ್ಗೆ ನಡೆಸುತ್ತಿರುವ ತನಿಖೆಯ ಬಗ್ಗೆಯೂ ಮುಖ್ಯಮಂತ್ರಿ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ಏನು ನಡೆಯುತ್ತಿದೆ ಎಂಬುದು ಯಾರಿಗೂ ತಿಳಿದಿಲ್ಲ ಎಂದಿದ್ದಾರೆ ಗೆಹಲೋತ್.

‘ಕೊಲೆ ನಡೆದ 2–3 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿದ್ದೇವೆ. ಆದರೆ, ಅದೇ ರಾತ್ರಿ ಎನ್‌ಐಎ ಪ್ರಕರಣ ವಹಿಸಿಕೊಂಡಿದೆ. ಪ್ರಕರಣದ ಪ್ರಗತಿ ಏನು ಎಂದು ತಿಳಿದಿಲ್ಲ. ಇದನ್ನು ರಾಜಸ್ಥಾನ ವಿಶೇಷ ಕಾರ್ಯಾಚರಣೆ ತಂಡ ನಡೆಸಿದ್ದರೆ ಸ್ವಲ್ಪ ಪ್ರಗತಿ ಇರುತ್ತಿತ್ತು’ ಎಂದು ಹೇಳಿದ್ದಾರೆ.

ತೆಲಂಗಾಣ: ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ನಡುವೆ ವಾಗ್ವಾದದ ಪ್ರಮುಖ ಅಸ್ತ್ರ

‘ಧರಣಿ’ಯೇ ವಿವಾದದ ಕೇಂದ್ರ ಬಿಂದು

ಹೈದರಾಬಾದ್ (ಪಿಟಿಐ): ಬಿಆರ್‌ಎಸ್ ಸರ್ಕಾರ ಜಾರಿಗೆ ತಂದಿರುವ ಭೂ ದಾಖಲೆಗಳನ್ನು ನಿರ್ವಹಿಸುವ ‘ಧರಣಿ’ ಪೋರ್ಟಲ್ ವಿವಾದದ ಕೇಂದ್ರ ಬಿಂದುವಾಗಿದೆ. ಇದು ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ನಡುವೆ ವಾಗ್ವಾದಕ್ಕೆ ಪ್ರಮುಖ ಅಸ್ತ್ರವಾಗಿದೆ.

ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ನೇತೃತ್ವದ ಸರ್ಕಾರ ಭೂ ಆಡಳಿತದಲ್ಲಿ ಸುಧಾರಣೆಗಳ ಭಾಗವಾಗಿ 2020ರ ಅಕ್ಟೋಬರ್‌ನಲ್ಲಿ ಧರಣಿ ಪೋರ್ಟಲ್ ಪ್ರಾರಂಭಿಸಿತು.

ಧರಣಿ ಪೋರ್ಟಲ್, ದಾಖಲೆಗಳನ್ನು ಬಳಸಿಕೊಂಡು ರಾಜ್ಯ ಸರ್ಕಾರದ ಪ್ರಮುಖ ಯೋಜನೆ ‘ರೈತ ಬಂಧು’ಗಾಗಿ ಫಲಾನುಭವಿಗಳನ್ನು ಗುರುತಿಸುವುದರ ಜತೆಗೆ ಆರ್ಥಿಕ ನೆರವು ನೀಡಲಿದೆ. ಈ ಯೋಜನೆ ಆರಂಭವಾದಾಗಿನಿಂದ ಪ್ರತಿಪಕ್ಷಗಳ ವಿರೋಧಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ತಾವು ಅಧಿಕಾರಕ್ಕೆ ಬಂದರೆ ಧರಣಿ ಪೋರ್ಟಲ್ ರದ್ದುಗೊಳಿಸುವುದಾಗಿ ಪ್ರತಿಜ್ಞೆ ಮಾಡಿವೆ.

‘ಆಡಳಿತ ಪಕ್ಷವು ಭೂಮಿಯನ್ನು ಕಸಿದುಕೊಳ್ಳಲು ಈ ವ್ಯವಸ್ಥೆಯನ್ನು ಬಳಸುತ್ತಿದೆ’ ಎಂದು ವಿರೋಧ ಪಕ್ಷಗಳು ಆರೋಪಿಸಿದರೆ, ಬಿಆರ್‌ಎಸ್ ಈ ಯೋಜನೆಯು ಪ್ರಗತಿಪರ ಸುಧಾರಣೆ ಎಂದು ಹಣೆಪಟ್ಟಿ ಕಟ್ಟುವ ಮೂಲಕ ತಿರುಗೇಟು ನೀಡಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಂದ ಹಿಡಿದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿವರೆಗೆ ಹಲವಾರು ರ‍್ಯಾಲಿಗಳಲ್ಲಿ ಮತ್ತು ಇತರ ಸಭೆಗಳಲ್ಲಿ ಧರಣಿ ಪೋರ್ಟಲ್ ಬಗ್ಗೆ ತೀವ್ರವಾಗಿ ಟೀಕಿಸಿದರು. ಆದರೆ ಈ ಯೋಜನೆಯು ಭೂ ವ್ಯವಹಾರಗಳಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ರಾವ್ ಹೇಳಿದ್ದಾರೆ.

ಧರಣಿ ಪೋರ್ಟಲ್ ರೈತರ ಭೂಮಿಯನ್ನು ಕಸಿದುಕೊಳ್ಳುವ ಮತ್ತು ಹಣವನ್ನು ಕಸಿದುಕೊಳ್ಳುವ ಸಾಧನವಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದ ನಡ್ಡಾ, ಬಿಜೆಪಿ ಅಧಿಕಾರಕ್ಕೆ ಬಂದರೆ ಈ ಪೋರ್ಟಲ್ ರದ್ದುಗೊಳಿಸಲಾಗುವುದು ಎಂದು ನಾಗರಕರ್ನೂಲಿನಲ್ಲಿ ನಡೆದ ಸಭೆಯಲ್ಲಿ ಹೇಳಿದ್ದರು.

ಕೆಸಿಆರ್ ಮತ್ತು ಅವರ ಪಕ್ಷದ ಸದಸ್ಯರು ಬಡ ರೈತರ ಭೂಮಿ ಕಬಳಿಸುವ ಮೂಲಕ ಗಳಿಸಿದ ಹಣದಿಂದ ತಮ್ಮ ಜೇಬುಗಳನ್ನು ತುಂಬಿಕೊಳ್ಳುತ್ತಿದ್ದಾರೆ ಎಂದೂ ನಡ್ಡಾ ಆರೋಪಿಸಿದ್ದರು.

ತೆಲಂಗಾಣದಲ್ಲಿ ಧರಣಿ ಪೋರ್ಟಲ್ ಬಗ್ಗೆಯೂ ರೈತರು ದೂರು ನೀಡಿದ್ದಾರೆ ಎಂದು ಹೇಳಿದ್ದ ರಾಹುಲ್ ಗಾಂಧಿ, ಸಭೆಯೊಂದರಲ್ಲಿ ಇದನ್ನು ಬಲವಾಗಿ ಖಂಡಿಸಿದ್ದರು.

‘ಅವರು (ಕೆಸಿಆರ್) ಕಾಲೇಶ್ವರಂ ನೀರಾವರಿ ಯೋಜನೆ ಮತ್ತು ಭೂ ದಾಖಲೆಗಳ ನಿರ್ವಹಣಾ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಮತ್ತು ಹಗರಣಗಳಲ್ಲಿ ಭಾಗಿಯಾಗಿದ್ದಾರೆ’ ಎಂದು ರಾಹುಲ್ ಗಾಂಧಿ ತೆಲಂಗಾಣದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಆರೋಪಿಸಿದರು.

‘ಕಾಂಗ್ರೆಸ್ ಪಕ್ಷದ ನಾಯಕರು, ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ, ಶಾಸಕಾಂಗ ಪಕ್ಷದ ನಾಯಕರು ಮತ್ತು ರಾಹುಲ್ ಗಾಂಧಿ ಕೂಡ ತಾವು ಅಧಿಕಾರಕ್ಕೆ ಬಂದರೆ ಧರಣಿ ಯೋಜನೆಯನ್ನು ಬಂಗಾಳ ಕೊಲ್ಲಿಗೆ ಎಸೆಯಲಾಗುವುದು’ ಎಂದಿದ್ದಾರೆ. ‘ರೈತರೇ, ನಿಮ್ಮ ಭೂಮಿಯ ಮೇಲಿನ ನಿಯಂತ್ರಣವು ನಿಮ್ಮ ಬಳಿ ಇರಬೇಕೇ ಅಥವಾ ವಿವಿಧ ಹಂತಗಳಲ್ಲಿ ಅಧಿಕಾರಿಗಳೊಂದಿಗೆ ಇರಬೇಕೇ ಎಂದು ದಯವಿಟ್ಟು ನಿರ್ಧರಿಸಿ’ ಎಂದು ಅವರು ಇತ್ತೀಚಿನ ಸಭೆಯಲ್ಲಿ ಸಾರ್ವಜನಿಕರನ್ನು ಕೇಳಿದ್ದರು.

ಹೆಸರು ಹೇಳಲು ಇಚ್ಛಿಸದ ನಲ್ಗೊಂಡ ಜಿಲ್ಲೆಯ ರೈತರೊಬ್ಬರು, ‘ಧರಣಿಯಿಂದ ಕೆಲವು ಪ್ರಯೋಜನಗಳಿದ್ದರೂ, ಇನ್ನೂ ತಾಂತ್ರಿಕ ತೊಂದರೆಗಳಿವೆ. ದಾಖಲೆಗಳನ್ನು ನವೀಕರಿಸುವಲ್ಲಿ ವಿಳಂಬವಾದ ಕಾರಣ ತೊಂದರೆ ಆಗಿತ್ತು’ ಎಂದು ಹೇಳಿದ್ದರು.

‘ಈ ಹಿಂದೆ ವಿವಾದ ಉದ್ಭವಿಸಿದಾಗ, ಸರಿಯಾದ ವಿಚಾರಣೆ ಬಳಿಕ ದಾಖಲೆಗಳನ್ನು ನವೀಕರಿಸಲು ಸ್ಥಳೀಯ ಕಂದಾಯ ಅಧಿಕಾರಿಗಳಿಗೆ ಅಧಿಕಾರ ನೀಡಲಾಗುತ್ತಿತ್ತು. ಆದರೆ, ಧರಣಿ ಪೋರ್ಟಲ್ ಪ್ರಾರಂಭಿಸುವುದರೊಂದಿಗೆ ಈ ವ್ಯವಸ್ಥೆ ರದ್ದುಪಡಿಸಲಾಯಿತು’ ಎಂದು ಅವರು ತಿಳಿಸಿದರು.

ರಾಜಕೀಯ ವಿಶ್ಲೇಷಕ ತೆಲಕಪಲ್ಲಿ ರವಿ, ‘ಧರಣಿ ಪೋರ್ಟಲ್‌ನಲ್ಲಿ ಒಳ್ಳೆಯದು ಮತ್ತು ಕೆಟ್ಟದು ಎರಡೂ ಇದೆ. ಇದು ವಿಧಾನಸಭಾ ಚುನಾವಣೆಯಲ್ಲಿ ನಿರ್ಣಾಯಕ ಅಂಶವಲ್ಲ’ ಎಂದಿದ್ದಾರೆ.

ಮುಖ್ಯಾಂಶಗಳು

- 2020ರಲ್ಲಿ ಧರಣಿ ಪೋರ್ಟಲ್ ಆರಂಭ
- ಯೋಜನೆಗೆ ಪ್ರತಿಪಕ್ಷ ವಿರೋಧ
- ಮಧ್ಯವರ್ತಿಗಳಿಗೆ ಅವಕಾಶ ಇಲ್ಲ: ರಾವ್

ಧರಣಿ ಪೋರ್ಟಲ್‌ನೊಂದಿಗೆ ರೈತರು ತಮ್ಮ ಭೂಮಿ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾರೆ. ತಮ್ಮ ಹೆಬ್ಬೆರಳಿನ ಗುರುತನ್ನು ಬಳಸಿಕೊಂಡು ಭೂಮಿ ಮಾರಬಹುದು ಅಥವಾ ಖರೀದಿಸಬಹುದು

ಕೆ.ಚಂದ್ರಶೇಖರ ರಾವ್ ತೆಲಂಗಾಣ ಮುಖ್ಯಮಂತ್ರಿ

ಭೂ ದಾಖಲೆಗಳನ್ನು ಆಧುನೀಕರಿಸುವ ವ್ಯವಸ್ಥೆಯು ಸಾವಿರಾರು ದಲಿತರು, ಆದಿವಾಸಿಗಳು ಮತ್ತು ಇತರ ಹಿಂದುಳಿದ ಜಾತಿಗಳಿಗೆ ಸೇರಿದವರನ್ನು ಅವರ ಸ್ವಂತ ಭೂಮಿಯಿಂದ ಹೊರಹಾಕುತ್ತಿರುವುದು ಅಪರಾಧ.

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಶರದ್ ಪವಾರ್ ‘ಒಬಿಸಿ’ ಪ್ರಮಾಣ ಪತ್ರ ಸಂಚಲನ!

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದವರು ಎಂಬಂತೆ ಬಿಂಬಿಸುವ ಪ್ರಮಾಣ ಪತ್ರವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಆದರೆ, ಈ ಪ್ರಮಾಣಪತ್ರದ ಪ್ರತಿಯು ನಕಲಿ ಎಂದಿರುವ ಎನ್‌ಸಿಪಿ, ಈ ಕೃತ್ಯವು ಬಾಲಿಶವಾದದ್ದು ಎಂದು ಟೀಕಿಸಿದೆ.

ಎನ್‌ಸಿಪಿ ಕಾರ್ಯಾಧ್ಯಕ್ಷೆಯೂ ಆಗಿರುವ ಸಂಸದೆ ಸುಪ್ರಿಯಾ ಸುಳೆ ಮತ್ತು ಶಾಸಕ ರೋಹಿತ್ ಪವಾರ್ ಅವರು, ಈ ಕೃತ್ಯದ ಹಿಂದಿರುವ ವ್ಯಕ್ತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಕಲಿ ಪ್ರಮಾಣ ಪತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದು ಬಾಲಿಶತನವಲ್ಲದೇ ಮತ್ತೇನೂ ಅಲ್ಲ. ಇತ್ತೀಚಿನ ದಿನಗಳಲ್ಲಿ ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸಿ, ಹರಿಬಿಡುವುದು ದೊಡ್ಡ ವಿಚಾರವಾಗಿದೆ. ಈ ಪ್ರಮಾಣ ಪತ್ರವು ಇಂಗ್ಲಿಷ್‌ನಲ್ಲಿದೆ. ಪವಾರ್ ಸಾಹೇಬರು 10ನೇ ತರಗತಿಯಲ್ಲಿ ಓದುವಾಗ ಇಂಗ್ಲಿಷ್ ಮಾಧ್ಯಮ ಶಾಲೆಗಳು ಎಲ್ಲಿದ್ದವು’ ಎಂದು ಸುಪ್ರಿಯಾ ಸುಳೆ ಅವರು ಪ್ರಶ್ನಿಸಿದ್ದಾರೆ.

‘ಈ ನಕಲಿ ದಾಖಲೆಗಳ ಹಂಚಿಕೆಯ ಹಿಂದೆ ಬಿಜೆಪಿಯ ಕೈವಾಡವಿದೆ. ಇದು ಬಿಜೆಪಿಯ ಸಂಸ್ಕೃತಿಯಾಗಿದೆ. ಅವರಿಗೆ ಸತ್ಯ ಗೊತ್ತಿಲ್ಲ. ಅವರು ಹಂಚುವುದೆಲ್ಲವೂ ಸುಳ್ಳಿನ ವಿಚಾರಗಳೇ. ಇದರ ಹಿಂದೆ ಬಿಜೆಪಿಯ ಟ್ರೋಲ್ ಆರ್ಮಿ ಮತ್ತು ಸಾಮಾಜಿಕ ಮಾಧ್ಯಮದ ಕೆಲವು ಮಂದಿ ಇದ್ದಾರೆ’ ಎಂದು ರೋಹಿತ್ ಪವಾರ್ ಹೇಳಿದರು.

₹600 ಕೋಟಿ ಒಡೆಯ ವಿವೇಕಾನಂದ ಶ್ರೀಮಂತ ಅಭ್ಯರ್ಥಿ


ಹೈದರಾಬಾದ್ (ಪಿಟಿಐ): ಚೆನ್ನೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಿ. ವಿವೇಕಾನಂದ ಅವರು ತೆಲಂಗಾಣ ವಿಧಾನಸಭಾ ಚುನಾವಣೆಯ ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ ಅತ್ಯಂತ ಶ್ರೀಮಂತ. ಇವರು ತಮ್ಮ ಬಳಿ ₹602 ಕೋಟಿ ಮೌಲ್ಯದ ಆಸ್ತಿ ಇದೆ ಎಂದು ಘೋಷಿಸಿಕೊಂಡಿದ್ದಾರೆ.

ವಿವೇಕಾನಂದ ಮತ್ತು ಅವರ ಪತ್ನಿ ₹377 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ₹225 ಕೋಟಿ ಮೌಲ್ಯದ ಚರಾಸ್ತಿ ಹೊಂದಿದ್ದಾರೆ ಎಂದು ಅವರು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಲಾಗಿದೆ.

₹460 ಕೋಟಿ ಆಸ್ತಿ ಘೋಷಿಸಿರುವ ಪಾಲೈರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪಿ. ಶ್ರೀನಿವಾಸ್ ರೆಡ್ಡಿ ಎರಡನೆಯ ಅತ್ಯಂತ ಶ್ರೀಮಂತ.

ನಂತರದ ಸ್ಥಾನದಲ್ಲಿ ಕಾಂಗ್ರೆಸ್‌ನ ರಾಜ್‌ಗೋಪಾಲ್ ರೆಡ್ಡಿ (₹459 ಕೋಟಿ ಮೌಲ್ಯದ ಆಸ್ತಿ), ಬಿಆರ್‌ಎಸ್‌ನ ಪೈಳ್ಲ ಶೇಖರ್ ರೆಡ್ಡಿ (₹227 ಕೋಟಿ) ಇದ್ದಾರೆ.

ಷೇರುಪೇಟೆ ವಹಿವಾಟು 325



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,525
ಇಂದಿನ ಅಂತ್ಯ	19,443
▼	82
ದಿನದ ಕನಿಷ್ಠ	19,414

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹950 (937)
ಸೂರ್ಯಕಾಂತಿ (ರಿಫೈನ್ಡ್)	₹845 (940)
ಪಾಮೋಲಿನ್	₹838 (835)

ವಿನಿಮಯ ದರ

$ ಡಾಲರ್	83.33
£ ಪೌಂಡ್	102.00
€ ಯುರೊ	89.06
¥ ಯೆನ್ (100ಕ್ಕೆ)	55

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹11500
ಎಸಿ	₹6750
ಆರ್‌ಪಿ	₹9800
ಆರ್‌ಸಿ	₹6075

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹260-462
ದ್ವಿತಳಿ (ಬಿ.ವಿ)	₹223-580

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹133

ಚೀನಾ: ಕೋವಿಡ್ ಮರುಕಳಿಸುವ ಎಚ್ಚರಿಕೆ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಚಳಿಗಾಲದ ಸಂದರ್ಭದಲ್ಲಿ ಕೋವಿಡ್-19 ಹೆಚ್ಚಾಗಿ ಹರಡಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

'ಚಳಿಗಾಲದಲ್ಲಿ ಕೊರೊನಾ ಸೋಂಕು ಹೆಚ್ಚಾಗಿ ಹರಡಬಹುದು. ಹೀಗಾಗಿ ವಯಸ್ಸಾದವರು ಮತ್ತು ದುರ್ಬಲರು ಆದಷ್ಟು ಶೀಘ್ರವಾಗಿ ಲಸಿಕೆ ಪಡೆಯಬೇಕು' ಎಂದು ತಜ್ಞ ವೈದ್ಯ ಝೊಂಗ್ ನನ್ಶಾನ್ ಸಲಹೆ ನೀಡಿದ್ದಾರೆ.

ಅಕ್ಟೋಬರ್‌ನಲ್ಲಿ ದೇಶದಾದ್ಯಂತ 209 ಹೊಸ ಪ್ರಕರಣ ದೃಢಪಟ್ಟಿದ್ದು, 24 ಮಂದಿ ಮೃತಪಟ್ಟಿದ್ದಾರೆ ಎಂದು ಚೀನಾದ ಸಾಂಕ್ರಾಮಿಕ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ ತಿಳಿಸಿರುವುದಾಗಿ ಮಾಧ್ಯಮಗಳು ಸೋಮವಾರ ವರದಿ ಮಾಡಿವೆ. ವೈರಸ್ ರೂಪಾಂತರ ಗೊಳ್ಳುತ್ತಿದೆ ಎಂದು ಅವರು ಹೇಳಿದ್ದಾರೆ.

ದೀಪಾವಳಿ: ₹3.75 ಲಕ್ಷ ಕೋಟಿ ವ್ಯಾಪಾರ

ನವದೆಹಲಿ (ಪಿಟಿಐ): ದೇಶದ ಎಲ್ಲ ಚಿಲ್ಲರೆ ಮಾರುಕಟ್ಟೆಗಳಲ್ಲಿ ಹಬ್ಬದ ಋತುವಿನಲ್ಲಿ ಇಲ್ಲಿಯವರೆಗೆ ₹3.75 ಲಕ್ಷ ಕೋಟಿಯಷ್ಟು ದಾಖಲೆ ವಹಿವಾಟು ನಡೆದಿದೆ ಎಂದು ಅಖಿಲ ಭಾರತ ವರ್ತಕರ ಸಂಘ (ಸಿಎಐಟಿ) ಸೋಮವಾರ ತಿಳಿಸಿದೆ.

ಗೋವರ್ಧನ ಪೂಜೆ, ಭಾಯ್‌ದೂಜ್, ಛಾತ್ ಪೂಜೆ ಮತ್ತು ತುಳಸಿ ವಿವಾಹದಂತಹ ಪೂಜಾ ಕಾರ್ಯಕ್ರಮ ಇನ್ನೂ ನಡೆಯಬೇಕಿದೆ. ಇದರಿಂದ ಹೆಚ್ಚುವರಿಯಾಗಿ ₹50 ಸಾವಿರ ಕೋಟಿಯಷ್ಟು ವ್ಯಾಪಾರ ನಡೆಯಬಹುದು ಎಂದು ತಿಳಿಸಿದೆ.

ದೀಪಾವಳಿಯಲ್ಲಿ ಭಾರತೀಯ ಉತ್ಪನ್ನಗಳೇ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿವೆ ಎಂದು ಹೇಳಿದೆ.

ಸಿಎಐಟಿ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಖಂಡೇಲ್ವಾಲ್ ಮಾತನಾಡಿ, ಈ ಬಾರಿಯ ದೀಪಾವಳಿ ಋತುವಿನಲ್ಲಿ ಚೀನಾದ ಸರಕುಗಳ ವ್ಯಾಪಾರ ಹೆಚ್ಚು ನಡೆದಿಲ್ಲ ಎಂದರು.

ಹಿಂದಿನ ವರ್ಷಗಳಲ್ಲಿ ಚೀನಾ ಉತ್ಪನ್ನಗಳು ದೀಪಾವಳಿ ಮಾರುಕಟ್ಟೆಯ ಶೇ 70ರಷ್ಟನ್ನು ಆಕ್ರಮಿಸಿಕೊಂಡಿರುತ್ತಿದ್ದವು. ಆದರೆ ಈ ವರ್ಷ, ಈ ದೀಪಾವಳಿಯಲ್ಲಿ ಸ್ಥಳೀಯ ವಸ್ತುಗಳಿಗೆ ಆದ್ಯತೆ ಕೊಡಿ ಎಂದು ಪ್ರಧಾನಿ ನರೇಂದ್ರ ಮೋದಿ ಕೊಟ್ಟ ಕರೆಯನ್ನು ಎಲ್ಲರೂ ಪಾಲಿಸಿದ್ದಾರೆ. ಹಾಗಾಗಿ, ಸ್ಥಳೀಯ ಸರಕುಗಳ ಮಾರಾಟ ಹೆಚ್ಚಿದೆ ಎಂದು ಹೇಳಿದರು.

ಕಡಿಮೆ ಸುಂಕದಿಂದ ದೇಶದಲ್ಲಿ ಹೆಚ್ಚಿದ ಆಮದು ಪ್ರಮಾಣ: ಎಸ್‌ಇಎ

167 ಲಕ್ಷ ಟನ್ ಅಡುಗೆ ಎಣ್ಣೆ ಆಮದು

ನವದೆಹಲಿ (ಪಿಟಿಐ): ಅಕ್ಟೋಬರ್ 2023ರಲ್ಲಿ ಕೊನೆಗೊಂಡ ಪ್ರಸಕ್ತ ತೈಲ ವರ್ಷದಲ್ಲಿ ಭಾರತದಲ್ಲಿ ಅಡುಗೆ ಎಣ್ಣೆ ಆಮದು ಪ್ರಮಾಣ ಶೇ 16ರಷ್ಟು ಏರಿಕೆಯಾಗಿ 167.1 ಲಕ್ಷ ಟನ್‌ಗಳಿಗೆ ತಲುಪಿದೆ ಎಂದು ಎಸ್‌ಇಎ ಸೋಮವಾರ ತಿಳಿಸಿದೆ.

ಹಿಂದಿನ ಇದೇ ಅವಧಿಯಲ್ಲಿ (ನವೆಂಬರ್-ಅಕ್ಟೋಬರ್) 144.1 ಲಕ್ಷ ಟನ್ ಅಡುಗೆ ಎಣ್ಣೆ ಆಮದು ಮಾಡಿ-ಕೊಳ್ಳಲಾಗಿತ್ತು. ಈ ಬಾರಿ ಅಡುಗೆ ಎಣ್ಣೆ ಮೇಲಿನ ಕಡಿಮೆ ಸುಂಕದಿಂದ ಆಮದು ಪ್ರಮಾಣ ಹೆಚ್ಚಾಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ತಿಳಿಸಿದೆ.

2022-23ರಲ್ಲಿ ಒಟ್ಟು ತೈಲದಲ್ಲಿ 164.7 ಲಕ್ಷ ಟನ್ ಅಡುಗೆ ಎಣ್ಣೆ ಮತ್ತು 2.4 ಲಕ್ಷ ಟನ್ ಅಡುಗೆಯೇತರ ಎಣ್ಣೆ ಆಮದು ಮಾಡಿಕೊಳ್ಳಲಾಗಿತ್ತು. ಭಾರತ ವಿಶ್ವದಲ್ಲೇ ಅಡುಗೆ ಎಣ್ಣೆ ಖರೀದಿಯಲ್ಲಿ ಮುಂಚೂಣಿಯಲ್ಲಿದೆ.

ಮುಖ್ಯಾಂಶಗಳು

- ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ
- ಅರ್ಜೆಂಟೀನಾದಿಂದ ಸೋಯಾಬಿನ್ ಎಣ್ಣೆ
- ಉಕ್ರೇನ್ ಮತ್ತು ರಷ್ಯಾದಿಂದ ಸೂರ್ಯಕಾಂತಿ ಎಣ್ಣೆ

ಎಸ್‌ಇಎ ಪ್ರಕಾರ 2022-23ರಲ್ಲಿ ಅಡುಗೆ ಎಣ್ಣೆ ಆಮದು 164.7 ಲಕ್ಷ ಟನ್‌ಗೆ ಏರಿಕೆ ಆಗಿದೆ. ಹಿಂದಿನ ಅವಧಿಗೆ ಹೋಲಿಸಿದರೆ ಇದು 24.4 ಲಕ್ಷ ಟನ್ ಅಧಿಕವಾಗಿದೆ. ಕಚ್ಚಾ ತಾಳೆ ಎಣ್ಣೆ, ಸೋಯಾಬಿನ್ ಮತ್ತು ಸೂರ್ಯಕಾಂತಿ



ಎಣ್ಣೆ ಮೇಲೆ ಶೇ 5.5ರಷ್ಟು ಸುಂಕ ಇದೆ. ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇದು ಬಹಳ ಕಡಿಮೆ. ಇದರಿಂದ ಆಮದು ಪ್ರಮಾಣ ಹೆಚ್ಚಾಗಿದೆ. ಒಟ್ಟು ಅಡುಗೆ ಎಣ್ಣೆ ಆಮದಿನಲ್ಲಿ ಆರ್‌ಬಿಡಿ ಪಾಮೋಲಿನ್ ಶೇ 25ರಷ್ಟು ಹೆಚ್ಚು ಆಮದು ಮಾಡಿಕೊಂಡಿದೆ ಎಂದು ತಿಳಿಸಿದೆ.

2022-23ರಲ್ಲಿ ₹1.38 ಲಕ್ಷ ಕೋಟಿ, 2021-22ರಲ್ಲಿ ₹1.57 ಲಕ್ಷ ಕೋಟಿ ಮತ್ತು 2020-21ರಲ್ಲಿ ₹1.17 ಲಕ್ಷಕೋಟಿ ಮೌಲ್ಯದ ಅಡುಗೆ ಎಣ್ಣೆಯನ್ನು ದೇಶದಲ್ಲಿ ಆಮದು ಮಾಡಿಕೊಳ್ಳಲಾಗಿತ್ತು ಎಂದು ಎಸ್‌ಇಎ ತಿಳಿಸಿದೆ.

ನವೆಂಬರ್ 1ರ ಎಸ್‌ಇಎ ಅಂದಾಜು ಪ್ರಕಾರ ಸುಮಾರು 33 ಲಕ್ಷ ಟನ್ ದಾಸ್ತಾನು ಇದೆ. ಇದು ಕಳೆದ ತಿಂಗಳಿಗಿಂತ 3 ಲಕ್ಷ ಟನ್ ಕಡಿಮೆ ಆಗಿದೆ. ಹಬ್ಬದ ಅಂಗವಾಗಿ ಬಳಕೆ ಹೆಚ್ಚಾಗಿರುವುದೇ ದಾಸ್ತಾನು ಕಡಿಮೆಯಾಗಲು ಕಾರಣ.

ತಾಳೆ ಎಣ್ಣೆಗಳ ಪೈಕಿ ಆರ್‌ಬಿಡಿ ಪಾಮೋಲಿನ್ 2022-23ರಲ್ಲಿ 21.1 ಲಕ್ಷ ಟನ್ ಪಾಮೋಲಿನ್ ಆಮದು ಮಾಡಿಕೊಂಡಿದ್ದರೆ, ಹಿಂದಿನ ಇದೇ ಅವಧಿಯಲ್ಲಿ 18.4 ಲಕ್ಷ ಟನ್ ಆಮದು ಮಾಡಿಕೊಂಡಿತ್ತು. ಕಚ್ಚಾ ತಾಳೆ ಎಣ್ಣೆ ಆಮದು 54.9 ಲಕ್ಷ ಟನ್‌ನಿಂದ 75.9 ಲಕ್ಷ ಟನ್‌ಗೆ ಏರಿಕೆಯಾಗಿದೆ. ಕಚ್ಚಾ ತಾಳೆ ಎಣ್ಣೆ (ಸಿಪಿಕೆಒ) ಆಮದು ಪ್ರಸಕ್ತ ಅವಧಿಯಲ್ಲಿ 94,148 ಟನ್ ಇದ್ದರೆ, ಹಿಂದಿನ ಇದೇ ಅವಧಿಯಲ್ಲಿ 79,740 ಟನ್ ಇತ್ತು.

2022-23ರಲ್ಲಿ ಬೆಲೆ ಸಮಾನತೆಯಿಂದಾಗಿ ತಾಳೆ ಉತ್ಪನ್ನಗಳ ಒಟ್ಟು ಆಮದು ತೀವ್ರವಾಗಿ ಹೆಚ್ಚಾಗಿದೆ. ಹೀಗಾಗಿ, ಅಡುಗೆ ಎಣ್ಣೆ ಪೈಕಿ ತಾಳೆ ಎಣ್ಣೆ ಆಮದು ಪ್ರಮಾಣವು ಶೇ 56ರಿಂದ ಶೇ 59ಕ್ಕೆ ಹೆಚ್ಚಿದೆ. ಕಳೆದ ವರ್ಷ ಜೂನ್ 15ರವರೆಗೆ ಇದ್ದ ಶೂನ್ಯ ಆಮದು ಸುಂಕದಿಂದಾಗಿ 30 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಆಮದಾಗಿದೆ. ಹಿಂದಿನ ಅವಧಿಯಲ್ಲಿ ಇದು 19.4 ಲಕ್ಷ ಟನ್ ಇತ್ತು. ಆದರೆ ಸೋಯಾಬಿನ್ ಎಣ್ಣೆ ಆಮದು 41.7 ಲಕ್ಷ ಟನ್‌ನಿಂದ 36.8 ಲಕ್ಷ ಟನ್‌ಗೆ ಇಳಿಕೆ ಕಂಡಿದೆ ಎಂದು ಎಸ್‌ಇಎ ಮಾಹಿತಿ ನೀಡಿದೆ.

ಕಚ್ಚಾ ತೈಲ ಉತ್ಪಾದನೆ ಶೀಘ್ರ: ಒಎನ್‌ಜಿಸಿ

ಬಂಗಾಳಕೊಲ್ಲಿಯ ಕೃಷ್ಣಾ ಗೋದಾವರಿ ಪ್ರದೇಶದಲ್ಲಿ ಆರಂಭಿಸಲು ಸಿದ್ಧತೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಹಾಗೂ ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಪ್ರಸಕ್ತ ತಿಂಗಳಿನಿಂದಲೇ ಬಂಗಾಳ ಕೊಲ್ಲಿಯ ಕೃಷ್ಣಾ ಗೋದಾವರಿ ಪ್ರದೇಶದ ಆಳ ಸಮುದ್ರದಲ್ಲಿ ಕಚ್ಚಾ ತೈಲ ಉತ್ಪಾದನಾ ಕಾರ್ಯ ಆರಂಭಿಸಲು ಸಿದ್ಧತೆ ನಡೆಸಿದೆ.

'ಕ್ಲಸ್ಟರ್-2ರಲ್ಲಿ ಉತ್ಪಾದನಾ ಚಟುವಟಿಕೆ ಆರಂಭಿಸಲು ಯೋಜನೆ ರೂಪಿಸಿದ್ದೇವೆ. ನಿಧಾನವಾಗಿ ಉತ್ಪಾದನಾ ಪ್ರಮಾಣ ಹೆಚ್ಚಿಸುವ ಗುರಿ ಹೊಂದಲಾಗಿದೆ. ಕೆಲವು ವರ್ಷಗಳಿಂದ ತೈಲೋತ್ಪಾದನೆಯಲ್ಲಿ ಆಗಿರುವ ಕುಸಿತ ಸರಿದೂಗಿಸಲು ಇದರಿಂದ ನೆರವಾಗಲಿದೆ' ಎಂದು ಒಎನ್‌ಜಿಸಿ ನಿರ್ದೇಶಕ (ಉತ್ಪಾದನೆ) ಪಂಕಜ್ ಕುಮಾರ್ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಚ್ಚಾ ತೈಲ ಸಂಸ್ಕರಿಸಿ ಅದನ್ನು ಟ್ಯಾಂಕರ್‌ಗೆ ವರ್ಗಾಯಿಸಲು ಬಳಸುವ ತೇಲುವ (ಎಫ್‌ಸಿಎಸ್‌ಒ) ಘಟಕಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಈಗಾಗಲೇ, ಈ ಬ್ಲಾಕ್‌ನಲ್ಲಿ ಇಂತಹ ಘಟಕವೊಂದು ಕಾರ್ಯ ನಿರ್ವಹಿಸು-ತ್ತಿದೆ.

2021ರ ನವೆಂಬರ್‌ನಿಂದ ಇಲ್ಲಿ ತೈಲ ಉತ್ಪಾದನೆ ಆರಂಭ ಆಗಬೇಕಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದಿಂ-ದಾಗಿ ವಿಳಂಬವಾಗಿತ್ತು.

'ಆರಂಭದಲ್ಲಿ 3ರಿಂದ 4 ಬಾವಿಗಳಲ್ಲಿ ಕಚ್ಚಾ ತೈಲವನ್ನು ಹೊರತೆ-ಗೆಯಲಾಗುತ್ತದೆ. ಪ್ರಾರಂಭಿಕ ಹಂತದಲ್ಲಿ ದಿನವೊಂದಕ್ಕೆ 8 ಸಾವಿರದಿಂದ 9 ಸಾವಿರ ಬ್ಯಾರಲ್ ತೈಲ ಉತ್ಪಾದನೆಗೆ ನಿರ್ಧರಿಸಲಾಗಿದೆ' ಎಂದು ಕುಮಾರ್ ತಿಳಿಸಿದ್ದಾರೆ.

ಕೃಷ್ಣಾ ಗೋದಾವರಿಯ ಆಳ ಸಮುದ್ರದಲ್ಲಿ ಉತ್ಪಾದನಾ ಚಟುವಟಿಕೆಯು ಪ್ರಯಾಸಕರ-ವಾಗಿದೆ. ಈ ಬಗ್ಗೆ ನಿಗಮಕ್ಕೂ ಅರಿವಿದೆ. ಒಎನ್‌ಜಿಸಿ ಕ್ಲಸ್ಟರ್‌ಗಳ ಸಮೀಪದಲ್ಲಿಯೇ ರಿಲಯನ್ಸ್ ಕಂಪನಿಯೂ ಕಾರ್ಯ ನಿರ್ವಹಿಸು-ತ್ತಿದೆ. ಉತ್ಪಾದನೆ ಕಾರ್ಯದ ವೇಳೆ ಅದು ಎಸಗುತ್ತಿರುವ ಪುನರಾವರ್ತಿತ ತಪ್ಪುಗಳನ್ನು ತಾನು ಎಸಗದಂತೆ ಎಚ್ಚರ-ವಹಿಸಲು ಒಎನ್‌ಜಿಸಿ ನಿರ್ಧರಿಸಿದೆ.

ಈ ಪ್ರದೇಶದಲ್ಲಿ ಅನಿಲ ಉತ್ಪಾದನೆಯು ಸಂಕೀರ್ಣವಾಗಿಲ್ಲ. ಮರಳು ಹಾಗೂ ನೀರು ತೈಲ ಬಾವಿ ಪ್ರವೇಶಿಸಿದರಷ್ಟೇ ತೈಲ ಪೂರೈಕೆಯ ಕವಾಟುಗಳು ಬಹುಬೇಗ ತೆರೆದುಕೊಳ್ಳುತ್ತವೆ. ಹಾಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಬಾವಿಗಳನ್ನು ಕೊರೆಯುವ ವಿಧಾನ ಅನುಸರಿಸುತ್ತೇ-ವೆ. ನಿಗದಿತ ಪ್ರಮಾಣದಲ್ಲಿ ಉತ್ಪಾದನೆ ಆರಂಭಿಸುತ್ತೇವೆ. ಹೆಚ್ಚಿನ ಪ್ರಮಾಣದಲ್ಲಿ ತೈಲ ಉತ್ಪಾದನೆಯ ಉದ್ದೇಶ ಹೊಂದಿಲ್ಲ ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಇಲ್ಲಿ ಉತ್ಪಾದಿಸುವ ಕಚ್ಚಾ ತೈಲವನ್ನು ಹಡಗಿನ ಮೂಲಕ ಮಂಗಳೂರಿನ ಎಂಆರ್‌ಪಿಎಲ್‌ಗೆ ಹಡಗಿನ ಮೂಲಕ ರವಾನಿಸಲಾಗುತ್ತ-ದೆ. ಅಲ್ಲಿ ಅದರ ಪರೀಕ್ಷೆ ನಡೆಯಲಿದೆ. ಅದರ ಗುಣಮಟ್ಟದ ಆಧಾರದ ಮೇಲೆ ಗ್ರೇಡ್ ಹಾಗೂ ದರ ನಿರ್ಧ-ರಿತವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿಲ್ಲರೆ ಹಣದುಬ್ಬರ 4 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ ಶೇ 4.87ಕ್ಕೆ ಇಳಿಕೆ ಕಂಡಿದೆ. ಆಹಾರ ವಸ್ತುಗಳ ಧಾರಣೆ ಇಳಿಕೆಯೇ ಇದಕ್ಕೆ ಮೂಲ ಕಾರಣವಾಗಿದೆ ಎಂದು ಸರ್ಕಾರ ಹೇಳಿದೆ.

ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧಾರಿತ ಈ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇ 5.02ಕ್ಕೆ ಇಳಿಕೆ ಕಂಡಿತ್ತು. ಜೂನ್‌ನಲ್ಲಿ ಶೇ 4.87ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿತ್ತು.2022-23ನೇ ಆರ್ಥಿಕ ವರ್ಷದಲ್ಲಿ ಗ್ರಾಹಕರ ದರ ಸೂಚ್ಯಂಕ ಆಧಾರಿತ ಹಣದುಬ್ಬರವು ಶೇ 6.7ಕ್ಕೆ ತಗ್ಗಿತ್ತು. ಅಕ್ಟೋಬರ್‌ನಲ್ಲಿ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ ಸಭೆಯಲ್ಲಿ 2023-24ನೇ ಸಾಲಿಗೆ ಇದನ್ನು ಶೇ 5.4ಕ್ಕೆ ಮಿತಿಗೊಳಿಸಲು ತೀರ್ಮಾನಿಸಲಾಗಿತ್ತು.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರಲ್ಲಿ ನಿಯಂತ್ರಿಸುವತ್ತ ಗಮನ ಹರಿಸುವಂತೆ ಕೇಂದ್ರ ಸರ್ಕಾರವು ಆರ್‌ಬಿಐಗೆ ಸೂಚಿಸಿದೆ. ಎರಡು ತಿಂಗಳಿಗೊಮ್ಮೆ ನಡೆಯುವ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ಹಣದುಬ್ಬರದ ನಿಯಂತ್ರಣ ಕುರಿತು ಚರ್ಚಿಸಿ ನಿರ್ಧರಿಸಲಾಗುತ್ತದೆ.

ಸೆಪ್ಟೆಂಬರ್‌ನಲ್ಲಿ 2.61 ಕೋಟಿ ಟನ್ ಕಲ್ಲಿದ್ದಲು ಆಮದು

ನವದೆಹಲಿ (ಪಿಟಿಐ): ದೇಶದಲ್ಲಿ ಕಲ್ಲಿದ್ದಲು ಆಮದು ಪ್ರಮಾಣ ಸೆಪ್ಟೆಂ-ಬರ್‌ನಲ್ಲಿ ಶೇ 4.3ರಷ್ಟು ಏರಿಕೆಯಾಗಿ 2.61 ಕೋಟಿ ಟನ್‌ಗೆ ತಲುಪಿದೆ.

ಹಿಂದಿನ ಇದೇ ಅವಧಿಯಲ್ಲಿ 1.97 ಕೋಟಿ ಟನ್ ಆಮದಾಗಿತ್ತು ಎಂದು ಇ-ವಾಣಿಜ್ಯ ಸಂಸ್ಥೆ ಎಂ-ಜಂಕ್ಷನ್ ಸರ್ವಿಸ್ ಲಿಮಿಟೆಡ್ ಅಂಕಿ ಅಂಶ ತಿಳಿಸಿದೆ.

ಕೋಕಿಂಗ್ ಅಲ್ಲದ ಕಲ್ಲಿದ್ದಲು ಆಮದು ಈ ಸೆಪ್ಟೆಂಬರ್‌ನಲ್ಲಿ 1.38 ಕೋಟಿ ಟನ್ ಇದ್ದರೆ, ಹಿಂದಿನ ಇದೇ ಅವಧಿಯಲ್ಲಿ 1.2 ಕೋಟಿ ಟನ್ ಇತ್ತು. ಕೋಕಿಂಗ್ ಕಲ್ಲಿದ್ದಲು ಆಮದು 48 ಲಕ್ಷ ಟನ್‌ನಿಂದ 45 ಲಕ್ಷ ಟನ್‌ಗೆ ಇಳಿಕೆ ಕಂಡಿದೆ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ ಕಲ್ಲಿದ್ದಲು ಆಮದು ಹಿಂದಿನ ವರ್ಷದ 1.35 ಕೋಟಿ ಟನ್‌ನಿಂದ 1.24 ಕೋಟಿ ಟನ್‌ಗೆ ಇಳಿಕೆಯಾಗಿದೆ. 2023-24ರ ಆರ್ಥಿಕ ವರ್ಷದ ಏಪ್ರಿಲ್-ಸೆಪ್ಟೆಂಬರ್‌ನಲ್ಲಿ ಕೋಕಿಂಗ್ ಅಲ್ಲದ ಕಲ್ಲಿದ್ದಲು ಆಮದು 7.76 ಕೋಟಿ ಟನ್ ಇದ್ದರೆ, ಹಿಂದಿನ ಇದೇ ಅವಧಿಯಲ್ಲಿ 9.27 ಕೋಟಿ ಟನ್ ಇತ್ತು. ಕೋಕಿಂಗ್ ಕಲ್ಲಿದ್ದಲು ಆಮದು ಈ ವರ್ಷದ ಏಪ್ರಿಲ್-ಸೆಪ್ಟೆಂಬರ್‌ನಲ್ಲಿ 2.94 ಕೋಟಿ ಟನ್‌ಗೆ ಏರಿದ್ದರೆ, ಹಿಂದಿನ ಇದೇ ಅವಧಿಯಲ್ಲಿ ಇದು 2.8 ಕೋಟಿ ಟನ್ ಇತ್ತು.

ಮುಂಬೈ ಧಾರಣೆ

ಶೇಂಗಾ

13-11-2023

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	900 (890)
ಪಾಮ್ ವಾರದ ಡೆಲಿವರಿ	836 (833)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (905)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,600 (59,700)
ಬೆಳ್ಳಿ ಕೆ.ಜಿ	69,400 (69,800)

ಆವರಣದಲ್ಲಿ ಶನಿವಾರ ದಿನದ ಧಾರಣೆ

ಗಡೀಪಾರು: ಮೂರು ದ್ವಾರ ತೆರೆದ ಪಾಕಿಸ್ತಾನ

ಕ್ವೆಟ್ಟಾ (ಪಿಟಿಐ): ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ ಅಫ್ಗಾನಿಸ್ತಾನದ ಪ್ರಜೆಗಳನ್ನು ತ್ವರಿತವಾಗಿ ಗಡೀಪಾರು ಮಾಡಲು ಪಾಕಿಸ್ತಾನವು ಗಡಿಯಲ್ಲಿ ಸೋಮವಾರ ಮೂರು ಹೊಸ ದ್ವಾರಗಳನ್ನು ತೆರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಲ್ಲಿ ನೆಲೆಸಲು ಅಗತ್ಯ ದಾಖಲೆಗಳನ್ನು ಒದಗಿಸಲು ವಿಫಲವಾಗುವ ವಿದೇಶಿಗರನ್ನು ಬಂಧಿಸಿ, ಅವರ ದೇಶಕ್ಕೆ ಗಡೀಪಾರು ಮಾಡುವ ಕಾರ್ಯಾಚರಣೆ ಕೈಗೊಂಡ ಬಳಿಕ ಈವರೆಗೆ ಸುಮಾರು 3 ಲಕ್ಷ ಮಂದಿ ಪಾಕಿಸ್ತಾನದಿಂದ ಹೊರಹೋಗಿದ್ದಾರೆ.

ಅನ್ಯ ದೇಶಗಳ ಪ್ರಜೆಗಳನ್ನು ಹೊರಹಾಕುವ ಪಾಕಿಸ್ತಾನದ ಕ್ರಮದಿಂದಾಗಿ, ಇಲ್ಲಿ ನೆಲೆ ಕಂಡುಕೊಂಡಿದ್ದ ಅಫ್ಗಾನಿಸ್ತಾನದ ಪ್ರಜೆಗಳ ಮೇಲೆ ಹೆಚ್ಚು ಪರಿಣಾಮವಾಗಿದೆ. ಪಾಕಿಸ್ತಾನದ ಈ ಕ್ರಮಕ್ಕೆ ತಾಲಿಬಾನ್ ನೇತೃತ್ವದ ಅಫ್ಗಾನಿಸ್ತಾನದ ಸರ್ಕಾರ ಮತ್ತು ಮಾನವ ಹಕ್ಕುಗಳ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಪತ್ನಿಗೆ ವಿಚ್ಛೇದನ ನೀಡಿದ ಉದ್ಯಮಿ ಗೌತಮ್ ಸಿಂಘಾನಿಯಾ

ನವದೆಹಲಿ (ಪಿಟಿಐ): ಪ್ರತಿಷ್ಠಿತ ರೇಮಂಡ್ ಕಂಪನಿಯ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಹಾಗೂ ಅವರ ಪತ್ನಿ ನವಾಜ್ ಅವರು, ದೀರ್ಘಕಾಲ ದಾಂಪತ್ಯದ ನಂತರ ಬೇರ್ಪಟ್ಟಿದ್ದಾರೆ.

ಗೌತಮ್ ಅವರು ಸೋಮವಾರ ಈ ಕುರಿತು ಅಧಿಕೃತವಾಗಿ ಘೋಷಿಸಿದ್ದು, ಇಬ್ಬರು ಪರಸ್ಪರ ಒಪ್ಪಿಗೆ ಮೇರೆಗೆ ಈ ನಿರ್ಧಾರ ಕೈಗೊಂಡಿರುವುದಾಗಿ ಹೇಳಿದ್ದಾರೆ.

ಮದುವೆಗೂ ಮೊದಲು ಈ ಇಬ್ಬರಿಗೂ ಪರಸ್ಪರ ಪರಿಚಯವಿತ್ತು. ಈ ಸ್ನೇಹವು ಪ್ರೀತಿಗೆ ತಿರುಗಿತ್ತು. ಎಂಟು ವರ್ಷಗಳ ಪ್ರೀತಿಯ ಬಳಿಕ 1999ರಲ್ಲಿ ನವಾಜ್ ಅವರೊಟ್ಟಿಗೆ ಗೌತಮ್ ವೈವಾಹಿಕ ಜೀವನಕ್ಕೆ ಅಡಿ ಇಟ್ಟಿದ್ದರು.

'ಇಂದಿನ ದೀಪಾವಳಿಯು ಈ ಹಿಂದೆ ಇದ್ದಂತೆ ಇರುವುದಿಲ್ಲ. ನಾವಿಬ್ಬರು ಬೇರೆಯಾಗುತ್ತಿದ್ದು, ಭಿನ್ನ ಹಾದಿಯಲ್ಲಿ ಸಾಗಲು ನಿರ್ಧರಿಸಿದ್ದೇವೆ' ಎಂದು ಗೌತಮ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ದಾಂಪತ್ಯ ಬದುಕಿನಲ್ಲಿ ಜೊತೆಯಾಗಿ ಹೆಜ್ಜೆ ಹಾಕಿದ್ದೇವೆ. ಪರಸ್ಪರ ಶಕ್ತಿಯುತ ಪೋಷಕರಾಗಿ ಬೆಳೆದಿದ್ದೇವೆ. ಬದ್ಧತೆ, ಸಂಕಲ್ಪ ಹಾಗೂ ನಂಬಿಕೆಯೊಂದಿಗೆ ಸಾಗಿದ್ದೇವೆ' ಎಂದು ಹೇಳಿದ್ದಾರೆ.

ಇಬ್ಬರು ಮಕ್ಕಳಾದ ನಿಹಾರಿಕಾ ಹಾಗೂ ನಿಸಾ ಯಾರ ಸುಪರ್ದಿಯಲ್ಲಿ ಇರುತ್ತಾರೆ ಎಂಬ ಬಗ್ಗೆ ಅವರು ಹೆಚ್ಚಿನ ಮಾಹಿತಿಯನ್ನು ಹಂಚಿಕೊಂಡಿಲ್ಲ.

ಚೀನಾ-ಪಾಕ್ ತಾಲೀಮು

ಕರಾಚಿ (ಪಿಟಿಐ): ಚೀನಾ ಮತ್ತು ಪಾಕಿಸ್ತಾನ ನೌಕಾಪಡೆಗಳು ಅರಬ್ಬಿ ಸಮುದ್ರದಲ್ಲಿ ಜಂಟಿ ಸಮರಾಭ್ಯಾಸ ಆರಂಭಿಸಿವೆ.

'ಕಡಲ ಭದ್ರತಾ ಬೆದರಿಕೆಗಳಿಗೆ ಜಂಟಿ ಪ್ರತಿಕ್ರಿಯೆ' ಎಂಬ ಘೋಷವಾಕ್ಯದಲ್ಲಿ, ಉತ್ತರ ಅರಬ್ಬಿ ಸಮುದ್ರ ಮತ್ತು ವಾಯುಪ್ರದೇಶದಲ್ಲಿ ನಡೆಯುವ ಈ ತಾಲೀಮಿಗೆ 'ಸೀ ಗಾರ್ಡಿಯನ್-3' ಎಂಬ ಹೆಸರು ನೀಡಲಾಗಿದೆ.

ತಾಲೀಮಿನ ವೇಳೆ, ಜಲಾಂತರ್ಗಾಮಿ ವಿರುದ್ಧದ ಕಾರ್ಯಾಚರಣೆಯನ್ನೂ ನಡೆಸ-ಲಾಗುತ್ತದೆ ಎಂದು ಪಾಕಿಸ್ತಾನದ ಸುದ್ದಿ ಮಾಧ್ಯಮ 'ಡಾನ್ ನ್ಯೂಸ್' ವರದಿ ಮಾಡಿದೆ.

ಚೀನಾ ಮತ್ತು ಪಾಕಿಸ್ತಾನದ ನೌಕಾಪಡೆಗಳೆರಡೂ ಇದೇ ಮೊದಲ ಬಾರಿಗೆ ಸಾಗರ ಗಸ್ತು ನಡೆಸಲಿವೆ. ಇದರ ಜತೆಗೆ, ಯುದ್ಧ ನೌಕೆ ಮೇಲೆ ಹೆಲಿಕಾಪ್ಟರ್ ಇಳಿಯುವ ಪ್ರಕ್ರಿಯೆಯೂ ಸೇರಿದಂತೆ ಹಲವು ಬಗೆಯ ತಾಲೀಮುಗಳನ್ನು ನಡೆಸಲಾಗುತ್ತದೆ ಎಂದು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರ, ಹಿರಿಯ ಕರ್ನಲ್ ವು ಕ್ವಿಯಾನ್ ತಿಳಿಸಿದ್ದಾರೆ. ಎರಡೂ ದೇಶಗಳ ನಡುವಿನ ಸರ್ವಋತು ಕಾರ್ಯತಂತ್ರದ ಪಾಲುದಾರಿಕೆ ಮತ್ತು ಸಾಂಪ್ರದಾಯಿಕ ಸ್ನೇಹ ಸಂಬಂಧವನ್ನು ಗಟ್ಟಿಯಾಗಿಸುವುದು, ವಾಸ್ತವಿಕ ಸಮರಾಭ್ಯಾಸಕ್ಕಾಗಿ ಈ ತಾಲೀಮು ನಡೆಯುತ್ತಿದೆ ಎಂದು ವಕ್ತಾರ ವೂ ತಿಳಿಸಿದರು.

ಯುದ್ಧನೌಕೆಗಳ ಲಂಗರು: ಒಂದು ವಾರ ಕಾಲ ನಡೆಯುವ ಈ ಸಮಾರಾಭ್ಯಾಸದಲ್ಲಿ ಪಾಲ್ಗೊಳ್ಳಲು ಚೀನಾದ ಮುಂಚೂಣಿ ಯುದ್ಧನೌಕೆಗಳು, ಜಲಾಂತರ್ಗಾಮಿಗಳು, ನೌಕಾಪಡೆಯ ಬೆಂಗಾವಲು ಹಡಗುಗಳು ಕರಾಚಿ ಬಂದರಿನಲ್ಲಿ ಲಂಗರು ಹಾಕಿವೆ. ಇದಕ್ಕೆ ಸಂಬಂಧಿಸಿದ ಉತ್ಕೃಷ್ಟ ಗುಣಮಟ್ಟದ ಉಪಗ್ರಹ ಚಿತ್ರಗಳೊಂದಿಗೆ ಸುದ್ದಿ ಮಾಧ್ಯಮ ಎನ್‌ಡಿಟಿವಿ ಸೋಮವಾರ ವರದಿ ಪ್ರಕಟಿಸಿದೆ.

ಸುನಕ್ ಸಂಪುಟದಿಂದ ಸುಯೆಲ್ಲಾ ವಜಾ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿಸುನಕ್‌ಅವರುತಮ್ಮಸಂಪುಟದಿಂದ ಭಾರತೀಯ ಮೂಲದವರಾದ, ಗೃಹ ಸಚಿವೆ ಸುಯೆಲ್ಲಾ ಬ್ರೆವರ್‌ಮನ್ ಅವರನ್ನು ಸೋಮವಾರ ವಜಾಗೊಳಿಸಿ, ಅವರ ಸ್ಥಾನಕ್ಕೆ ವಿದೇಶಾಂಗ ಸಚಿವರಾಗಿದ್ದ ಜೇಮ್ಸ್ ಕ್ಲೆವರ್ಲಿ ಅವರನ್ನು ನೇಮಕ ಮಾಡಿದ್ದಾರೆ.

ಬ್ರಿಟನ್‌ಗೆ ಐದು ದಿನಗಳ ಅಧಿಕೃತ ಭೇಟಿ ಕೈಗೊಂಡಿರುವ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಸುಯೆಲ್ಲಾ ಅವರು ಮಾತುಕತೆ ನಡೆಸಬೇಕಿದ್ದಾಗಲೇ ಈ ಬದಲಾವಣೆ ನಡೆದಿದೆ.

ಸುಯೆಲ್ಲಾ ಅವರನ್ನು ವಜಾ ಗೊಳಿಸಿದ ಬೆನ್ನಲ್ಲೇ ಸಂಪುಟ ಪುನಾರಚನೆ ಮಾಡಿದ ಸುನಕ್, ಕ್ಲೆವರ್ಲಿಯವ-ರಿಂದ ತೆರವಾದ ವಿದೇಶಾಂಗ ಸಚಿವ ಸ್ಥಾನಕ್ಕೆ ಮಾಜಿ ಪ್ರಧಾನಿ ಡೇವಿಡ್ ಕ್ಯಾಮರೂನ್ ಅವರನ್ನು ನೇಮಿಸಿದ ಅಚ್ಚರಿಯ ಬೆಳವಣಿಗೆಯೂ ನಡೆದಿದೆ.



ಡೇವಿಡ್ ಕ್ಯಾಮರೂನ್

ಇತ್ತೀಚೆಗೆ ಬ್ರಿಟನ್‌ನಲ್ಲಿ ನಡೆದಿದ್ದ ಪ್ಯಾಲೆಸ್ಟೀನ್ ಪರ ರ‍್ಯಾಲಿಗಳನ್ನು ನಿಭಾಯಿಸುವಲ್ಲಿ ಪೊಲೀಸರ ಕಾರ್ಯವೈಖರಿ ಟೀಕಿಸಿ ಬ್ರೆವರ್‌ಮನ್ ವಿವಾದಾತ್ಮಕ ಲೇಖನವನ್ನು 'ದಿ ಟೈಮ್ಸ್' ಪತ್ರಿಕೆಗೆ ಬರೆದಿದ್ದರು. ಇದಕ್ಕೆ ಅವರು ಪ್ರಧಾನಿಯವರ ಅನುಮತಿ ಪಡೆದಿರಲಿಲ್ಲ ಎಂದು ಪ್ರಧಾನಿ ಕಚೇರಿ ಮೂಲಗಳು ಹೇಳಿವೆ.

ಸುನಕ್ ಅವರ ಸಂಪುಟದಲ್ಲಿ ಹಿರಿಯ ಸಚಿವೆಯಾಗಿದ್ದ 43 ವರ್ಷದ ಸುಯೆಲ್ಲಾ ಅವರು ಪದೇ ಪದೇ ವಿವಾದಗಳನ್ನು ಹುಟ್ಟು ಹಾಕಿ ಸುದ್ದಿ-ಯಾಗಿದ್ದರು. ಭಾರತೀಯ ಮೂಲದ ಮೊದಲ ಬ್ರಿಟನ್ ಪ್ರಧಾನಿಯಾದ ರಿಷಿ ಸುನಕ್ ಅವರು ತಮ್ಮ ಸಂಪುಟದಲ್ಲಿ ಸುಯೆಲ್ಲಾ ಅವರನ್ನು ಉಳಿಸಿಕೊಂಡಿ-ರುವುದಕ್ಕೆ ವಿರೋಧ ಪಕ್ಷ ಮತ್ತು ಸ್ವಪ-ಕ್ಷೀಯರಿಂದಲೂ ಟೀಕೆ ಎದುರಿಸುತ್ತಿದ್ದು, ಸುಯೆಲ್ಲಾ ಅವರನ್ನು ಸಂಪುಟದಿಂದ ಕೈಬಿಡಬೇಕಾದ ಒತ್ತಡಕ್ಕೆ ಸಿಲುಕಿದ್ದರು.

ಸಂಪುಟದಿಂದ ಹೊರಬಿದ್ದ ನಂತರ ಪ್ರತಿಕ್ರಿಯಿಸಿರುವ ಸುಯೆಲ್ಲಾ ಅವರು 'ಸಮಯ ಬಂದಾಗ ಎಲ್ಲವನ್ನೂ ಹೇಳುವೆ. ಆದರೆ, ದೇಶದ ಗೃಹ ಸಚಿವೆಯಾಗಿ ಸೇವೆ ಸಲ್ಲಿಸಲು ನನಗೆ ಸಿಕ್ಕಿದ್ದ ಅವಕಾಶ ನನ್ನ ಬದುಕಿನ ದೊಡ್ಡ ಭಾಗ್ಯ' ಎಂದು ಹೇಳಿದ್ದಾರೆ.

ಇನ್ನು, ವಿದೇಶಾಂಗ ಸಚಿವರಾಗಿ ನೇಮಕವಾದ ನಂತರ ನೀಡಿದ ಮೊದಲ ಪ್ರತಿಕ್ರಿಯೆಯಲ್ಲಿ ಕ್ಯಾಮರೂನ್ ಅವರು 'ಕನ್ಸರ್ವೇಟಿವ್ ನಾಯಕನಾಗಿ 11 ವರ್ಷ ಮತ್ತು ಪ್ರಧಾನಿಯಾಗಿ ಐದು ವರ್ಷಗಳ ನನ್ನ ಅನುಭವವು ಪ್ರಧಾನಿಗೆ ನೆರವಾಗಲು ನನಗೆ ಸಹಾಯಕವಾಗಲಿದೆ ಎನ್ನುವುದು ನನ್ನ ಭಾವನೆ' ಎಂದು ಹೇಳಿದ್ದಾರೆ.

ಆಸ್ಪತ್ರೆ ಮುಂಭಾಗ ಇಸ್ರೇಲ್–ಹಮಾಸ್ ಕದನ: ರೋಗಿಗಳ ಆಕ್ರಂದನ

ಗಾಜಾ: ಶಿಫಾದಲ್ಲಿ ಮಡುಗಟ್ಟಿದ ಆತಂಕ

ಡೀರ್ ಅಲ್-ಬಾಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾ ಪಟ್ಟಿಯ ಅಲ್ ಶಿಫಾ ಆಸ್ಪತ್ರೆ ದ್ವಾರದ ಮುಂಭಾಗವೇ ಇಸ್ರೇಲ್ ಸೇನೆ ಹಾಗೂ ಹಮಾಸ್ ಬಂಡುಕೋರರ ನಡುವೆ ಕದನ ಮುಂದುವರಿದಿದ್ದು, ಆಸ್ಪತ್ರೆಯಲ್ಲಿ ಆಶ್ರಯ ಪಡೆದಿದ್ದ ಸಾವಿರಾರು ಜನರು ಪ್ರಾಣಭೀತಿಯಿಂದ ಹೊರಹೋಗಿದ್ದಾರೆ.

ಆದರೆ, ಚಿಕಿತ್ಸೆ ಪಡೆಯುತ್ತಿರುವ ನೂರಾರು ರೋಗಿಗಳು,ನವಜಾತ ಶಿಶುಗಳು, ಆಶ್ರಯ ಪಡೆದಿರುವ ನಾಗರಿಕರು ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರುವುದರಿಂದ ಅಪಾಯಕ್ಕೆ ಸಿಲುಕಿದ್ದಾರೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ಆಸ್ಪತ್ರೆಯ ಜನರೇಟರ್‌ಗಳಿಗೆ ಪೂರೈಸಲು ಅನತಿ ದೂರದಲ್ಲಿ 300 ಲೀಟರ್‌ನಷ್ಟು ಇಂಧನ ಸಂಗ್ರಹಿಸಿ ಇಡಲಾಗಿದೆ. ಅದರ ಬಳಕೆಗೆ ಮುಂದಾಗಿರುವ ವೈದ್ಯಕೀಯ ಸಿಬ್ಬಂದಿಗೆ ಹಮಾಸ್ ತಡೆಯೊಡ್ಡಿದೆ ಎಂದು ಇಸ್ರೇಲ್ ಸೇನೆ ಆರೋಪಿಸಿದೆ. ಆದರೆ, ನಿಗದಿಪಡಿಸಿರುವ ಈ ಇಂಧನವು ಜನರೇಟರ್‌ಗಳು ಕನಿಷ್ಠ ಒಂದು ಗಂಟೆಕಾಲವೂ ಕಾರ್ಯ ನಿರ್ವಹಿಸಲು ಸಾಕಾಗುವುದಿಲ್ಲ ಎಂದು ಆರೋಗ್ಯ ಸಚಿವಾಲಯ ದೂರಿದೆ.



ಅಲ್ ಶಿಫಾ ಆಸ್ಪತ್ರೆಯೊಳಗೆ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು –ಎಎಫ್‌ಪಿ ಚಿತ್ರ

'ಮೂರು ದಿನಗಳಿಂದಲೂ ಆಸ್ಪತ್ರೆಗೆ ನೀರು ಪೂರೈಕೆ ಸ್ಥಗಿತಗೊಂಡಿದೆ. ಹಾಗಾಗಿ, ಯಾವ ಕ್ಷಣದಲ್ಲಾದರೂ ತನ್ನ ಕಾರ್ಯ ಸ್ಥಗಿತಗೊಳಿಸುವ ಸಾಧ್ಯತೆಯಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಅವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಎಷ್ಟು ಜನರಿದ್ದಾರೆ?: 'ತೀವ್ರ ಗಾಯಗೊಂಡವರು ಸೇರಿದಂತೆ 650 ರೋಗಿಗಳು ಶಿಫಾ ಆಸ್ಪತ್ರೆಯಲ್ಲಿದ್ದಾರೆ. ಸುಮಾರು 500 ವೈದ್ಯಕೀಯ ಸಿಬ್ಬಂದಿ ಚಿಕಿತ್ಸೆಯಲ್ಲಿ ನಿರತರಾಗಿದ್ದಾರೆ. ಇದರ ಹೊರತಾಗಿ ಆಸ್ಪತ್ರೆಯ ಕಟ್ಟಡದೊಳಗೆ ಸುಮಾರು 2,500 ಜನರು ಆಶ್ರಯ ಪಡೆದಿದ್ದಾರೆ' ಎಂದು ಗಾಜಾ ಆಸ್ಪತ್ರೆಗಳ ನಿರ್ದೇಶಕ ಮೊಹಮ್ಮದ್ ಜಕೌತ್ ಮಾಹಿತಿ ನೀಡಿದ್ದಾರೆ.

32 ರೋಗಿಗಳ ಸಾವು

ಕೈರೊ (ರಾಯಿಟರ್ಸ್): ಅಲ್ ಶಿಫಾ ಆಸ್ಪತ್ರೆಯಲ್ಲಿ ಕಳೆದ 3 ದಿನಗಳಲ್ಲಿ ಕನಿಷ್ಠ 32 ರೋಗಿಗಳು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.



ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
BPL Happy Little Thing
SHOP & WIN
5.68
CRORES WORTH PRIZES GET
LUCKY DRAW COUPON
ON PURCHASE OF
₹3,500/- & ABOVE
Exciting offers.
Amazing celebrations!
CELEBRATORY DEALS
₹10 000 INSTANT CASHBACK*
UPTO 4 YEARS COMPREHENSIVE WARRANTY*
HAPPY EMI ₹1 111 ONWARDS*
Google TV
65 4K Google TV
EFFECTIVE PRICE AFTER CASHBACK ₹53,990/-*
FREE BPL SOUNDBAR WORTH ₹14,990/-
Google TV
55 4K Google TV
EFFECTIVE PRICE AFTER CASHBACK ₹33,990/-*
FREE BPL SOUNDBAR WORTH ₹4,990/-
QLED TV
55 4K QLED TV
EMI ₹2,990/-
Google TV
50 4K Google TV
EFFECTIVE PRICE AFTER CASHBACK ₹32,490/-*
FREE BPL SOUNDBAR WORTH ₹4,990/-
Smart TV
43 4K Smart TV
₹25,490/-*
EFFECTIVE PRICE AFTER CASHBACK
Smart TV
43 Smart TV
₹21,990/-*
EFFECTIVE PRICE AFTER CASHBACK
webOS TV
32 webOS TV
₹12,490/-*
EFFECTIVE PRICE AFTER CASHBACK
LINUX
32 LINUX
₹11,990/-
ಬೆಂಗಳೂರು
ನೂತನ ಬಾಗಲೂರು Ph : 080-35712968 /35712969 9731306702
ಅಕ್ಷಯನಗರ Ph :9731307230
ನೆಲಮಂಗಲ Ph 9731306692 / 9686680755
ಬಿಡದಿ 7702203254
ಕೋಣನಕುಂಟೆ Ph :9731306531
ಬೇಗೂರು 080-41499467/9731306604
ಆರ್.ಟಿ. ನಗರ 9731307264 080-23559977
ಹೊಸಕೋಟೆ 9731306767
ಹೆಣ್ಣೂರು ಮುಖ್ಯ ರಸ್ತೆ 080-48651500/48505043 9731306596
ಮಹದೇವಪುರ 080-48148975, 9148151731
ಉತ್ತರಹಳ್ಳಿ 9731306547 49587474, 49537575
ವೈಟ್ ಫೀಲ್ಡ್ 080-40984677 9513499851
ಯಲಹಂಕ 9731306702
ಹೆಬ್ಬಗೋಡಿ 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ 41610910, 9731306537
ತನಿಸಂದ್ರ 9731306763/32521747
ವಿಜಯನಗರ 9731306631
ಪೀಣ್ಯ ಟಿ-ದಾಸರಹಳ್ಳಿ 9731306684 28393199/4199
ಮತ್ತಿಕೆರೆ 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ Ph :9731306550
ಬನಶಂಕರಿ Ph :9731306572 080-26691262/63
ಜಯನಗರ 26541050/51 9731306606
ಚಂದ್ರ ಲೇಔಟ್ 9731306558, 080 41503359
ನಾಗರಭಾವಿ 9731306616
ಮಾರತಹಳ್ಳಿ 080-42200050 9731306703
ಕೆಂಗೇರಿ 9731306634
ಚನ್ನಸಂದ್ರ 28613065/9731306766
ಸುಂಕದಕಟ್ಟೆ 9686680764 23288940/942
ರಾಜಾಜಿನಗರ Ph :9686446886 080-23134692
ವಿದ್ಯಾರಣ್ಯಪುರ 41721897/1861 9731306614
ಹೆಗ್ಗನಹಳ್ಳಿ 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ 41687449, 9731306571 25450871
ರಾಮಮೂರ್ತಿನಗರ 41638612/13 8861007307
ಪುಟ್ಟೇನಹಳ್ಳಿ 9591997265 080-40954615/16
ಹುಳಿಮಾವು 080-26483425 9591997254
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


May the festival of Lights Fill your Life with Glow of Happiness & the Sparkle of Joy
Happy Deepavali
to all our Customers
ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
BUMPER PRIZE
1 Kg GOLD
Worth ₹ 51 Lakhs
1st PRIZE
10 CARS
MARUTHI S-PRESSO CAR
Worth ₹ 4.25 Lakhs
10 WINNERS
ಬೃಹತ್ ದೀಪಾವಳಿ ಸೇಲ್
2nd PRIZE
100 BIKES
HONDA BIKE
Worth ₹ 75,000/-
100 WINNERS
3rd PRIZE
1000 LED TV'S
40" HD LED TV
Worth ₹ 29,990/-
1000 WINNERS
4th PRIZE
10000 SURPRIZE Gifts
Worth ₹ 999/-
10000 WINNERS
INSTANT CASHBACK UPTO ₹20,000/-
ON CREDIT & DEBIT CARD EMI
LED TV, REFRIGERATOR, WASHING MACHINE, & AIR-CONDITIONER
0% INTEREST FREE FINANCE
1 EMI FREE* ON LG SONY SAMSUNG
EMI CARD EASY FINANCE
LOW DOWNPAYMENT
LOW EMI
UPTO 36 MONTHS
LONG TENURE EMI
JUST SHOW AADHAAR CARD
For easy finance offers & take home your favourite products
LG 65 UHD/4K EMI ₹3,990/-
SONY 55 UHD/4K EMI ₹2,994/-
SAMSUNG 55 UHD/4K EMI ₹3,490/-
LG 55 UHD/4K EMI ₹2,990/-
Haier 55 UHD/4K SPECIAL PRICE ₹42,490/-
Panasonic 43 UHD/4K EMI ₹2,190/-
LG 43 UHD/4K EMI ₹1,990/-
Haier 43 UHD/4K EMI ₹1,490/-
43 UHD/4K SPECIAL PRICE ₹27,990/-
40 Smart TV SPECIAL PRICE ₹15,990/-
32 Smart TV SPECIAL PRICE ₹10,490/-
32 HD LED TV SPECIAL PRICE ₹8,990/-
LG SIDE BY SIDE REFRIGERATORS Wi-Fi Convertible 655 Ltr.
FREE LG DOUBLE DOOR REFRIGERATOR WORTH ₹29,499/-
GET INSTANT CASH BACK UPTO ₹12,000/- ON CC & DC
EMI ₹4,990/-
Haier SIDE BY SIDE REFRIGERATORS INVERTER FRENCH 4 DOOR 531 Ltr.
SPECIAL PRICE ₹62,990/-
INSTANT CASHBACK CC EMI ₹9,000/-
EFFECTIVE PRICE ₹53,990/-
LG FROST FREE REFRIGERATORS 260 Ltr.
GET INSTANT CASH BACK UPTO ₹3,000/- ON CC & DC
FESTIVAL PRICE ₹25,990/-
Whirlpool PREMIUM FROST FREE REFRIGERATORS 340 Ltr.
GET INSTANT CASH BACK UPTO ₹3,500/- ON CC & DC
FESTIVAL PRICE ₹32,990/-
Haier BOTTOM MOUNTED REFRIGERATORS 300 Ltr.
FREE COOKER & NON-STICK WORTH ₹3990/-
GET INSTANT CASH BACK UPTO ₹2,000/- ON CC & DC
FESTIVAL PRICE ₹31,490/-
SAMSUNG FROST FREE REFRIGERATORS 231 Ltr.
GET INSTANT CASH BACK UPTO ₹1,500/- ON CC & DC
EMI ₹1,990/-
LG Haier SAMSUNG Godrej Whirlpool
DIRECT COOL WASHING MACHINE 190 Ltr.
FESTIVAL PRICE ₹13,600/- ONWARDS
LG FRONT LOAD WASHING MACHINE 9 Kg.
FREE ARIEL MATIC LIQUID
GET INSTANT CASH BACK UPTO ₹7,500/- ON CC & DC
FESTIVAL PRICE ₹38,490/-
Haier FRONT LOAD WASHING MACHINE 9 Kg.
FREE STEAM IRON BOX
SPECIAL PRICE ₹36,990/-
INSTANT CASHBACK CC EMI ₹8,000/-
EFFECTIVE PRICE ₹28,990/-
LG Haier SAMSUNG IFB Godrej Whirlpool
TOP LOAD WASHING MACHINE
GET INSTANT CASH BACK UPTO ₹1,500/- ON CC & DC
FESTIVAL PRICE ₹15,990/- ONWARDS
MIXER GRINDER COMBO
Mixer Grinder (Glory) MRP ₹3,325
Cooker (Favourite) 3Ltr MRP ₹1,395
50% DISCOUNT
TOTAL MRP ₹4,720/- COMBO PRICE ₹2,395/-
GAS STOVE COMBO
62% DISCOUNT
Pigeon Glass Cooktop two Burner MRP ₹4,399
Non Stick Favorite Duo Pack Tawa MRP ₹1,895
TOTAL MRP ₹6,294/- COMBO PRICE ₹2,395/-
THE WHISTLE COMBO
Deluxe Aluminium Pressure Cooker 5L
Deluxe Aluminium Pressure Cooker 3L
Flat Tawa 280 4mm
46% DISCOUNT
COMBO MRP ₹5,035/- Offer Price ₹2299/-
WET GRINDER COMBO
Pigeon Wet Grinder (Dyna) MRP ₹5,755
Cooker (Favorite) 3Ltr MRP ₹1,395
36% DISCOUNT
TOTAL MRP ₹7,150/- COMBO PRICE ₹4,590/-
CHIMNEY COMBO
Chimney Nebula MRP ₹14,590
4 Burner Cooktop MRP ₹7,199
54% DISCOUNT
TOTAL MRP ₹21,789/- COMBO PRICE ₹9,990/-
ಚನ್ನಪಟ್ಟಣ ಶಿರಸಿ ಕೋಲಾರ ಬೆಳಗಾವಿ ಬಳ್ಳಾರಿ ಚಿತ್ರದುರ್ಗ ದಾವಣಗೆರೆ ಶಿವಮೊಗ್ಗ ತಿಪಟೂರು ತುಮಕೂರು ಕುಣಿಗಲ್ ಯಾದಗಿರಿ ಮಂಡ್ಯ
ಗೋಣಿಕೊಪ್ಪ ಕೊಪ್ಪಳ ಬೀದರ್ ಕಲಬುರ್ಗಿ ಕೆ.ಆರ್. ನಗರ ಚನ್ನರಾಯಪಟ್ಟಣ ವಿರಾಜಪೇಟೆ ವಿಜಯಪುರ ಸಿಂಧನೂರು ಕುಶಾಲನಗರ
ಚಿಕ್ಕಮಗಳೂರು ಶಹಾಪುರ ತಿಪ್ಪಟ್ಟೂರು ಗೋಕಾಕ್ ಮೈಸೂರು 5 ಸ್ಟೋರ್ಸ್ ಕುವೆಂಪುನಗರ ಹಿನಕಲ್ ಉದಯಗಿರಿ ಜೆ.ಪಿ ನಗರ ಡಾ. ರಾಜ್‌ಕುಮಾರ್ ರಸ್ತೆ
Free Gifts depends on Brands & Selective Models • Products shown here are only indicative • Exchange Rates
Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com
STREAMLINE



ಮೊದಲ ಸೆಮಿಫೈನಲ್ ಪಂದ್ಯ ನಾಳೆ • ರೋಹಿತ್ ತವರಿನಂಗಳದಲ್ಲಿ ಆತಿಥೇಯರಿಗೆ ನ್ಯೂಜಿಲೆಂಡ್ ಸವಾಲು • ವಿರಾಟ್, ರಾಹುಲ್ ಮೇಲೆ ಕಣ್ಣು

ಭಾರತಕ್ಕೆ ವಿಜಯದೀಪ ಬೆಳಗುವ ಛಲ



ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ

ಪ್ರಜಾವಾಣಿ ವಾರ್ತೆ



ಕೇನ್ ವಿಲಿಯಮ್ಸನ್

ಮುಂಬೈ: ಬುಧವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ರೋಹಿತ್ ಶರ್ಮಾ ಅವರಿಗೆ ಅಗ್ನಿಪರೀಕ್ಷೆಯಾಗಿದೆ.

ಈ ಪಂದ್ಯದಲ್ಲಿ ರೋಹಿತ್ ನಾಯಕತ್ವದ ಬಳಗವು ನ್ಯೂಜಿಲೆಂಡ್ ಎದುರು ಆಡಲಿದೆ. 2019ರ ಸೆಮಿಫೈನಲ್‌ನಲ್ಲಿ ಕಿವೀಸ್ ಬಳಗದ ಎದುರು ಸೋತಿದ್ದ ಭಾರತ ತಂಡವು ಪ್ರಶಸ್ತಿ ಗೆಲುವಿನ ಅವಕಾಶ ಕಳೆದುಕೊಂಡಿತ್ತು. ಆಗ ತಂಡಕ್ಕೆ ವಿರಾಟ್ ಕೊಹ್ಲಿ ನಾಯಕರಾಗಿದ್ದರು.

ಈಗ ಆ ಸೋಲಿನ ಮುಯ್ಯಿ ತೀರಿಸಿಕೊಳ್ಳುವುದರ ಜೊತೆಗೆ 12 ವರ್ಷಗಳ ನಂತರ ವಿಶ್ವಕಪ್ ಫೈನಲ್‌ಗೆ ಲಗ್ಗೆ ಇಡುವ ಛಲ ಭಾರತ ತಂಡದಲ್ಲಿದೆ. ತಮ್ಮ ತವರೂರಿನ ಅಂಗಳದಲ್ಲಿ ಗೆಲುವಿನ ಸಂಭ್ರಮ ಆಚರಿಸುವ ಆತ್ಮವಿಶ್ವಾಸ 36 ವರ್ಷದ ಶರ್ಮಾಗೂ ಇದೆ.

ಟೂರ್ನಿಯ ಲೀಗ್ ಸುತ್ತಿನಲ್ಲಿ ಎಲ್ಲ ಒಂಬತ್ತು ಪಂದ್ಯಗಳನ್ನು ಗೆದ್ದು ಅಗ್ರಸ್ಥಾನದೊಂದಿಗೆ ನಾಲ್ಕರ ಘಟ್ಟಕ್ಕೆ ಆತಿಥೇಯರು ಲಗ್ಗೆ ಹಾಕಿದ್ದಾರೆ. ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಗುರಿ ಬೆನ್ನಟ್ಟಿದ್ದ ಸಂದರ್ಭದಲ್ಲಿ 2 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತ್ತು. ಆದರೆ ಆ ಪಂದ್ಯದಲ್ಲಿ ವಿರಾಟ್ ಮತ್ತು ಕನ್ನಡಿಗ ಕೆ.ಎಲ್. ರಾಹುಲ್ ಅವರ ಅಮೋಘ ಜೊತೆಯಾಟದಿಂದಾಗಿ ತಂಡ ಗೆದ್ದಿತ್ತು.

ಅದರ ನಂತರದ ಎಲ್ಲ ಪಂದ್ಯಗಳಲ್ಲಿಯೂ ಅಧಿಕಾರಯುತ ಜಯ ಸಾಧಿಸಿದ ತಂಡವು ಎಲ್ಲ ವಿಭಾಗಗಳಲ್ಲಿಯೂ ಪರಿಪೂರ್ಣವಾಗಿದೆ. ಧರ್ಮಶಾಲಾದಲ್ಲಿ ಇದೇ ನ್ಯೂಜಿಲೆಂಡ್ ತಂಡವನ್ನೂ ಭಾರತವು ಮಣಿಸಿತ್ತು.

ರೋಹಿತ್ ಮತ್ತು ಗಿಲ್ ಅಮೋಘ ಆರಂಭ ನೀಡುತ್ತಿದ್ದಾರೆ. ವಿರಾಟ್, ಶ್ರೇಯಸ್ ಮತ್ತು ಕೆ. ಎಲ್. ರಾಹುಲ್ ಮಧ್ಯಮ ಕ್ರಮಾಂಕವನ್ನು ಬಲಿಷ್ಠಗೊಳಿಸಿದ್ದಾರೆ. ಸೂರ್ಯಕುಮಾರ್ ಯಾದವ್ ತಮ್ಮ ಎಂದಿನ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ಬೌಲಿಂಗ್ ವಿಭಾಗವಂತೂ ಉತ್ತುಂಗ ಶಿಖರದಲ್ಲಿದೆ. ಬೂಮ್ರಾ, ಶಮಿ ಮತ್ತು ಸಿರಾಜ್ ಅವರ ಬಿರುಗಾಳಿಗೆ, ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಅವರ ಸ್ಪಿನ್ ಮೋಡಿ ಜೋಡಿಯಾಗಿದೆ. ಈ ಬೌಲಿಂಗ್ ಪಡೆಯೇ ಎದುರಾಳಿಗಳಿಗೆ ಇರುವ ಪ್ರಮುಖ ಸವಾಲು.

ಆದರೆ ಶಾಂತಸ್ವಭಾವದ ಮತ್ತು ತಂತ್ರಗಾರಿಕೆಯ ನಿಪುಣ ನಾಯಕ ಕೇನ್ ವಿಲಿಯಮ್ಸನ್ ಕಿವೀಸ್ ಬಳಗದ ಪ್ರಮುಖ ಶಕ್ತಿಯಾಗಿದ್ದಾರೆ. 164 ಏಕದಿನ ಪಂದ್ಯಗಳನ್ನು ಆಡಿರುವ ಅನುಭವಿ ನಾಯಕ ಕೇನ್ ಈ ಬಾರಿ ವಿಶ್ವಕಪ್‌ನೊಂದಿಗೆ ಮರಳುವ ಛಲದಲ್ಲಿದ್ದಾರೆ. ಹೋದ ಸಲ ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಕೂದಲೆಳೆ ಅಂತರದಲ್ಲಿ ಅವರ ಬಳಗ ಸೋತಿತ್ತು. ತಂಡದಲ್ಲಿರುವ ಬೆಂಗಳೂರು ಮೂಲದ ರಚಿನ್ ರವೀಂದ್ರ ಈಗಾಗಲೇ ಮೂರು ಶತಕ ಹೊಡೆದು ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ಡೆರಿಲ್ ಮಿಚೆಲ್, ಡೆವೊನ್ ಕಾನ್ವೆ ಮತ್ತು ಗ್ಲೆನ್ ಫಿಲಿಪ್ಸ್ ಅವರು ದೊಡ್ಡ ಪಂದ್ಯಗಳನ್ನು ಗೆಲ್ಲಿಸಿಕೊಡುವ ಸಮರ್ಥರು. ಬೌಲಿಂಗ್‌ನಲ್ಲಿ ಅನುಭವಿ ಟ್ರೆಂಟ್ ಬೌಲ್ಟ್, ಲಾಕಿ ಫರ್ಗ್ಯುಸನ್ ಮತ್ತು ಅಮೋಘ ಬೌಲಿಂಗ್ ಮಾಡುತ್ತಿರುವ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಅವರು ಭಾರತದ ಬಲಿಷ್ಠ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಬಲ್ಲರು.

ಹೋದವಾರ ವಾಂಖೆಡೆಯಲ್ಲಿ ಭಾರತವು ಶ್ರೀಲಂಕಾ ವಿರುದ್ಧ ಭರ್ಜರಿ ಜಯ ಸಾಧಿಸಿತ್ತು. ಆ ಪಂದ್ಯದಲ್ಲಿ ವಿರಾಟ್, ಶ್ರೇಯಸ್ ಮತ್ತು ಗಿಲ್ ಅರ್ಧಶತಕಗಳನ್ನು ದಾಖಲಿಸಿದ್ದರು. ಇಲ್ಲಿ ಪಿಚ್ ರನ್‌ಗಳಿಕೆಗೆ ಸಹಕಾರಿಯಾಗಿದೆ. ಆದರೂ ಆ ಪಂದ್ಯದಲ್ಲಿ ಮೊಹಮ್ಮದ್ ಶಮಿ 5 ವಿಕೆಟ್ ಗಳಿಸಿ ಶ್ರೀಲಂಕಾಗೆ ಆಘಾತ ನೀಡಿದ್ದರು. ಕಿವೀಸ್ ಬಳಗವು ಈ ವಿಶ್ವಕಪ್ ಟೂರ್ನಿಯಲ್ಲಿ ಇದುವರೆಗೂ ಈ ಅಂಗಳದಲ್ಲಿ ಒಂದೂ ಪಂದ್ಯ ಆಡಿಲ್ಲ.

ಫೀಲ್ಡಿಂಗ್‌ನಲ್ಲಿ ಕಿವೀಸ್ ಬಳಗವು ಅತಿಥೇಯರಿಗಿಂತ ಸ್ವಲ್ಪ ಉತ್ತಮವಿದೆ. ಕ್ಯಾಚ್ ಕೈಚೆಲ್ಲಿದರೆ, ರನ್‌ಔಟ್‌ಗಳ ಅವಕಾಶಗಳನ್ನು ಬಿಟ್ಟರೆ ದುಬಾರಿ ದಂಡ ತೆರಬೇಕಾಗಬಹುದು ಈ ಟೂರ್ನಿಯ ಕೆಲವು ಪಂದ್ಯಗಳಲ್ಲಿ ಈಗಾಗಲೇ ಸಾಬೀತಾಗಿದೆ. ಆದ್ದರಿಂದ ಭಾರತವು ಈ ವಿಭಾಗದಲ್ಲಿ ಸುಧಾರಿತ ಪ್ರದರ್ಶನ ನೀಡಿದರೆ ಪಂದ್ಯದ ಮೇಲೆ ಹಿಡಿತ ಸಾಧಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 2
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಈ ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳು

ಆಟಗಾರ	ಪಂದ್ಯ	ರನ್	ಅರ್ಧಶತಕ	ಶತಕ
ಭಾರತ				
ವಿರಾಟ್ ಕೊಹ್ಲಿ	9	594	5	2
ರೋಹಿತ್ ಶರ್ಮಾ	9	503	3	1
ಶ್ರೇಯಸ್ ಅಯ್ಯರ್	9	421	3	1
ಕೆ.ಎಲ್. ರಾಹುಲ್	9	347	3	1
ಶುಭಮನ್ ಗಿಲ್	7	270	3	0
ನ್ಯೂಜಿಲೆಂಡ್				
ರಚಿನ್ ರವೀಂದ್ರ	9	565	2	3
ಡೆರಿಲ್ ಮಿಚೆಲ್	9	418	2	2
ಡೆವೊನ್ ಕಾನ್ವೆ	9	359	0	1
ಗ್ಲೆನ್ ಫಿಲಿಪ್ಸ್	8	244	2	0
ವಿಲ್ ಯಂಗ್	6	206	2	0

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್
ಭಾರತ		
ಜಸ್‌ಪ್ರೀತ್ ಬೂಮ್ರಾ	9	17
ಮೊಹಮ್ಮದ್ ಶಮಿ	5	16
ರವೀಂದ್ರ ಜಡೇಜ	9	16
ಕುಲದೀಪ್ ಯಾದವ್	9	14
ಮೊಹಮ್ಮದ್ ಸಿರಾಜ್	9	12
ನ್ಯೂಜಿಲೆಂಡ್		
ಮಿಚೆಲ್ ಸ್ಯಾಂಟನರ್	9	16
ಟ್ರೆಂಟ್ ಬೌಲ್ಟ್	9	13
ಲಾಕಿ ಫರ್ಗ್ಯುಸನ್	6	10
ಗ್ಲೆನ್ ಫಿಲಿಪ್ಸ್	9	6
ರಚಿನ್ ರವೀಂದ್ರ	9	5

ಭಾರತ V/s ನ್ಯೂಜಿಲೆಂಡ್

ಬ್ಯಾಟರ್‌ಗಳ ಬಲಾಬಲ

- ರೋಹಿತ್ ಶರ್ಮಾ
- ಶುಭಮನ್ ಗಿಲ್
- ವಿರಾಟ್ ಕೊಹ್ಲಿ
- ಶ್ರೇಯಸ್ ಅಯ್ಯರ್
- ಸೂರ್ಯಕುಮಾರ್ ಯಾದವ್

- ಡೆವೊನ್ ಕಾನ್ವೆ
- ರಚಿನ್ ರವೀಂದ್ರ
- ಕೇನ್ ವಿಲಿಯಮ್ಸನ್
- ಡೆರಿಲ್ ಮಿಚೆಲ್
- ಗ್ಲೆನ್ ಫಿಲಿಪ್ಸ್

ಸ್ಪಿನ್ ಆಲ್‌ರೌಂಡರ್‌ಗಳು

- ರವೀಂದ್ರ ಜಡೇಜ
- ಕುಲದೀಪ್ ಯಾದವ್

- ಮಿಚೆಲ್ ಸ್ಯಾಂಟನರ್
- ಈಶ್ ಸೋಧಿ

ವೇಗಿಗಳು

- ಜಸ್‌ಪ್ರೀತ್ ಬೂಮ್ರಾ
- ಮೊಹಮ್ಮದ್ ಶಮಿ
- ಮೊಹಮ್ಮದ್ ಸಿರಾಜ್

- ಟ್ರೆಂಟ್ ಬೌಲ್ಟ್
- ಲಾಕಿ ಫರ್ಗ್ಯುಸನ್
- ಟಿಮ್ ಸೌಥಿ

ವಿಕೆಟ್ ಕೀಪರ್

- ಕೆ.ಎಲ್. ರಾಹುಲ್
- ಟಾಮ್ ಲೇಥಮ್

ಅಂಪೈರ್‌ಗಳು

ಮೊದಲ ಸೆಮಿಫೈನಲ್, ಮುಂಬೈ
ಭಾರತ–ನ್ಯೂಜಿಲೆಂಡ್

ಅಂಪೈರ್

- ರಿಚರ್ಡ್ ಇಲಿಂಗ್‌ವರ್ಥ್, ರಾಡ್ ಟಕ್ಕರ್
- ಜೋಯೆಲ್ ವಿಲ್ಸನ್ (ಮೂರನೇ ಅಂಪೈರ್)
- ಏಡ್ರಿಯನ್ ಹೋಲ್ಡ್‌ಸ್ಟಾಕ್ (ನಾಲ್ಕನೇ ಅಂಪೈರ್)
- ಆ್ಯಂಡಿ ಪೈಕ್ರಾಫ್ಟ್ (ಪಂದ್ಯ ರೆಫರಿ)

ಸಚಿನ್ ತವರಿನಲ್ಲಿ ವಿರಾಟ್ 50ನೇ ಶತಕ ನಿರೀಕ್ಷೆ

ಬ್ಯಾಟಿಂಗ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿರುವ 49 ಶತಕಗಳ ದಾಖಲೆಯನ್ನು ವಿರಾಟ್ ಕೊಹ್ಲಿ ಈಚೆಗಷ್ಟೇ ಸರಿಗಟ್ಟಿದ್ದಾರೆ.

ಇದೀಗ ಆ ದಾಖಲೆಯನ್ನು ಮೀರಿ ನಿಲ್ಲುವ ಛಲದಲ್ಲಿದ್ದಾರೆ. ಸಚಿನ್ ಅವರ ತವರೂರಿನ ಅಂಗಳದಲ್ಲಿಯೇ ಈ ಸಾಧನೆ ಮಾಡುವ ನಿರೀಕ್ಷೆಯನ್ನು ವಿರಾಟ್ ಮೂಡಿಸಿದ್ದಾರೆ. ಒಂದೊಮ್ಮೆ ವಿರಾಟ್ ಯಶಸ್ವಿಯಾದರೆ, ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 50 ಶತಕ ಗಳಿಸಿದ ಮೊಟ್ಟಮೊದಲ ಬ್ಯಾಟರ್ ಆಗಲಿದ್ದಾರೆ. ಅಲ್ಲದೇ ಸಚಿನ್ ತವರಿನಲ್ಲಿ ಅವರ ಮುಂದೆಯೇ ಈ ಸಾಧನೆ ಮಾಡಿದ ವಿಶೇಷ ಗೌರವವೂ ಅವರದ್ದಾಗಲಿದೆ.

ಮುಖ್ಯಾಂಶಗಳು

- ಭಾರತದ ಎದುರು ಮಿಂಚುವ ವಿಶ್ವಾಸದಲ್ಲಿ ರಚಿನ್ ರವೀಂದ್ರ
- ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮೇಲೆ ನಿರೀಕ್ಷೆಯ ಭಾರ

ಅಗ್ರ ಐವರು

ಬ್ಯಾಟಿಂಗ್

ವಿರಾಟ್ ಕೊಹ್ಲಿ (ಭಾರತ)	594
ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	591
ರಚಿನ್ ರವೀಂದ್ರ (ನ್ಯೂಜಿಲೆಂಡ್)	565
ರೋಹಿತ್ ಶರ್ಮಾ (ಭಾರತ)	503
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	499

ಬೌಲಿಂಗ್

ಆ್ಯಡಮ್ ಜಂಪಾ (ಆಸ್ಟ್ರೇಲಿಯಾ)	22
ದಿಲ್ಶಾನ್ ಮಧುಶಂಕ (ಶ್ರೀಲಂಕಾ)	21
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	18
ಶಹೀನ್ ಆಫ್ರಿದಿ (ಪಾಕಿಸ್ತಾನ)	18
ಜಸ್‌ಪ್ರೀತ್ ಬೂಮ್ರಾ (ಭಾರತ)	17



ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ



ಭಾರತ ತಂಡದ ಕೆ.ಎಲ್ ರಾಹುಲ್

ಬಲಾಬಲ (ಏಕದಿನ ಕ್ರಿಕೆಟ್)	
ಪಂದ್ಯ	117
ಭಾರತ ಜಯ	59
ನ್ಯೂಜಿಲೆಂಡ್ ಜಯ	50
ಫಲಿತಾಂಶವಿಲ್ಲ	7
ಟೈ	1
ಬಲಾಬಲ (ವಿಶ್ವಕಪ್)	
ಪಂದ್ಯ	10
ಭಾರತ ಜಯ	4
ನ್ಯೂಜಿಲೆಂಡ್ ಗೆಲುವು	5
ಫಲಿತಾಂಶವಿಲ್ಲ	1



ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ

ಒಂದು ಓವರ್‌ನಲ್ಲಿ 6 ವಿಕೆಟ್!

ಗೋಲ್ಡ್ ಕೋಸ್ಟ್ (ಪಿಟಿಐ): ಆಸ್ಟ್ರೇಲಿಯಾದ ಗೋಲ್ಡ್ ಕೋಸ್ಟ್‌ನ ಮೂರನೇ ಡಿವಿಷನ್ ಕ್ರಿಕೆಟ್ ಕ್ಲಬ್‌ವೊಂದರ ಬೌಲರ್, ಒಂದು ಓವರ್‌ನ ಆರೂ ಎಸೆತಗಳಲ್ಲಿ ವಿಕೆಟ್ ಪಡೆದು ಅಪರೂಪದ ಸಾಧನೆ ಮಾಡಿದ್ದಾರೆ.

ಮಡ್ರಬಾ ನೆರಾಂಗ್ ಮತ್ತು ಡಿಸ್ಟ್ರಿಕ್ಟ್ಸ್ ಕ್ರಿಕೆಟ್ ಕ್ಲಬ್ ತಂಡದ ನಾಯಕ ಗ್ಯಾರೆತ್ ಮಾರ್ಗನ್ ಅವರು ಗೋಲ್ಡ್ ಕೋಸ್ಟ್ ಪ್ರೀಮಿಯರ್ ಲೀಗ್ ಮೂರನೇ ಡಿವಿಷನ್ ಟೂರ್ನಿಯಲ್ಲಿ ಶನಿವಾರ ಸರ್ಫರ್ಸ್ ಪ್ಯಾರಡೈಸ್ ಕ್ರಿಕೆಟ್ ಕ್ಲಬ್ ಎದುರಿನ ಪಂದ್ಯದಲ್ಲಿ ಈ ದಾಖಲೆಗೆ ಭಾಜನರಾದರು ಎಂದು ಎಬಿಸಿ.ನೆಟ್. ಎಯು ವರದಿ ಮಾಡಿದೆ.

178 ರನ್‌ಗಳ ಗುರಿ ಬೆನ್ನಟ್ಟಿದ ಸರ್ಫರ್ಸ್ ತಂಡ 39 ಓವರ್‌ಗಳಲ್ಲಿ 4 ವಿಕೆಟ್‌ಗೆ 174 ರನ್ ಗಳಿಸಿತ್ತು. 40 ಓವರ್‌ಗಳ ಈ ಪಂದ್ಯದ ಅಂತಿಮ ಓವರ್‌ನಲ್ಲಿ ತಂಡದ ಜಯಕ್ಕೆ 4 ರನ್‌ಗಳ ಅಗತ್ಯವಿತ್ತು. ಆದರೆ ಮಾರ್ಗನ್ ಅವರು ಕೊನೆಯ ಓವರ್‌ನ ಎಲ್ಲ ಎಸೆತಗಳಲ್ಲೂ ವಿಕೆಟ್ ಪಡೆದು ಮಡ್ರಬಾ ತಂಡಕ್ಕೆ ರೋಚಕ ಗೆಲುವು ತಂದಿತ್ತರು.

ಸರ್ಫರ್ಸ್ ತಂಡದ ಐವರು ಬ್ಯಾಟರ್‌ಗಳು ಶೂನ್ಯಕ್ಕೆ ಔಟಾದರು. ಮೊದಲ ನಾಲ್ಕು ಎಸೆತಗಳಲ್ಲಿ ಬ್ಯಾಟರ್‌ಗಳು ಕ್ಯಾಚ್ ಕೊಟ್ಟು ಔಟಾದರೆ, ಕೊನೆಯ ಎರಡು ಬ್ಯಾಟರ್‌ಗಳು ಬೌಲ್ಡ್ ಆದರು. ಮಾರ್ಗನ್ ಈ ಪಂದ್ಯದಲ್ಲಿ ಏಳು ಓವರ್‌ಗಳಲ್ಲಿ 16 ರನ್‌ಗಳಿಗೆ ಏಳು ವಿಕೆಟ್ ಪಡೆದರು. ಬ್ಯಾಟಿಂಗ್‌ನಲ್ಲೂ ಮಿಂಚಿದ್ದ ಅವರು 39 ರನ್ ಗಳಿಸಿದ್ದರು.

ವೃತ್ತಿಪರ ಕ್ರಿಕೆಟ್‌ನಲ್ಲಿ ಒಂದು ಓವರ್‌ನಲ್ಲಿ ಐದು ವಿಕೆಟ್ ಪಡೆದದ್ದು ಇದುವರೆಗಿನ ದಾಖಲೆಯಾಗಿತ್ತು ಎಂದು ಎಬಿಸಿ ವರದಿ ತಿಳಿಸಿದೆ. 2011 ರಲ್ಲಿ ನ್ಯೂಜಿಲೆಂಡ್ ದೇಸಿ ಕ್ರಿಕೆಟ್‌ನಲ್ಲಿ ಒಟಾಗೊ ತಂಡದ ನೀಲ್ ವ್ಯಾಗ್ನರ್ ಅವರು ವೆಲಿಂಗ್ಟನ್ ವಿರುದ್ಧ, 2013 ರಲ್ಲಿ ಬಾಂಗ್ಲಾದೇಶ ದೇಸಿ ಕ್ರಿಕೆಟ್‌ನಲ್ಲಿ ಯುಸಿಬಿ–ಬಿಸಿಬಿ ಇಲೆವೆನ್ ತಂಡದ ಅಲ್ ಅಮೀನ್ ಹೊಸೇನ್ ಅವರು ಅಭಾನಿ ಲಿಮಿಟೆಡ್ ತಂಡದ ವಿರುದ್ಧ ಹಾಗೂ 2019 ರಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕದ ಅಭಿಮನ್ಯು ಮಿಥುನ್ ಅವರು ಹರಿಯಾಣ ವಿರುದ್ಧದ ಪಂದ್ಯದಲ್ಲಿ ಒಂದು ಓವರ್‌ನಲ್ಲಿ ಐದು ವಿಕೆಟ್ ಗಳಿಸಿದ್ದರು.

‘ಹಾಲ್ ಆಫ್ ಫೇಮ್’ಗೆ ಸೆಹ್ವಾಗ್, ಎಡುಲ್ಜಿ


ಶ್ರೀಲಂಕಾದ ಮಾಜಿ ಆಟಗಾರ ಅರವಿಂದ ಡಿಸಿಲ್ವಾ ಅವರಿಗೂ ಐಸಿಸಿ ಗೌರವ

ದುಬೈ (ಪಿಟಿಐ): ಮಾಜಿ ನಾಯಕಿ ಡಯಾನಾ ಎಡುಲ್ಜಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಹಾಲ್ ಆಫ್ ಫೇಮ್ ಗೌರವ ಪಡೆದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಭಾರತ ಕ್ರಿಕೆಟ್ ತಂಡದ ಮಾಜಿ ಆರಂಭಿಕ ಬ್ಯಾಟರ್ ವೀರೇಂದ್ರ ಸೆಹ್ವಾಗ್ ಮತ್ತು ಶ್ರೀಲಂಕಾ ತಂಡದ ಮಾಜಿ ಆಟಗಾರ ಅರವಿಂದ ಡಿಸಿಲ್ವಾ ಅವರೂ ಐಸಿಸಿ ಹಾಲ್ ಆಫ್ ಫೇಮ್‌ಗೆ ಸೇರ್ಪಡೆಗೊಂಡಿದ್ದಾರೆ. ಕ್ರಿಕೆಟ್ ವೃತ್ತಿಬದುಕಿನಲ್ಲಿ ತೋರಿದ ಸಾಧನೆಯನ್ನು ಪರಿಗಣಿಸಿ ಅವರಿಗೆ ಐಸಿಸಿ ಈ ಗೌರವ ನೀಡಿದೆ.

ಎಡಗೈ ಸ್ಪಿನ್ನರ್ ಆಗಿದ್ದ ಎಡುಲ್ಜಿ ಅವರು 1976 ರಿಂದ 1993ರ ವರೆಗಿನ ಅವಧಿಯಲ್ಲಿ ಭಾರತ ಮಹಿಳಾ ತಂಡದ ಪ್ರಮುಖ ಆಟಗಾರ್ತಿ ಎನಿಸಿಕೊಂಡಿದ್ದರು. 20 ಟೆಸ್ಟ್‌ಗಳನ್ನು ಆಡಿದ್ದ ಅವರು 63 ವಿಕೆಟ್‌ಗಳನ್ನು ಗಳಿಸಿದ್ದಾರೆ. 34 ಏಕದಿನ ಪಂದ್ಯಗಳಿಂದ 46 ವಿಕೆಟ್‌ಗಳನ್ನು ಗಳಿಸಿದ್ದಾರೆ. ಕ್ರಿಕೆಟ್‌ನಿಂದ ನಿವೃತ್ತಿಯಾದ ಬಳಿಕ ಆಡಳಿತದಲ್ಲಿಯೂ ಕೆಲವು ಹುದ್ದೆಗಳಲ್ಲಿ ಕೆಲಸ ಮಾಡಿದ್ದ ಅವರು ಮಹಿಳಾ ಕ್ರಿಕೆಟಿಗರಿಗೆ ಉದ್ಯೋಗಾವಕಾಶ ದೊರಕಿಸಿಕೊಡಲು ಶ್ರಮಿಸಿದ್ದರು.

‘ಪುರುಷ ಮತ್ತು ಮಹಿಳಾ ಕ್ರಿಕೆಟ್ ತಾರೆಯರನ್ನು ಒಳಗೊಂಡ ಐಸಿಸಿ ಹಾಲ್ ಆಫ್ ಫೇಮ್‌ಗೆ ಸೇರ್ಪಡೆಗೊಂಡ ಭಾರತದ ಮೊದಲ ಕ್ರಿಕೆಟಿಗಳಾಗಿರುವುದು ನಿಜಕ್ಕೂ ಬಲುದೊಡ್ಡ ಗೌರವ’ ಎಂದು ಐಸಿಸಿ ಬಿಡುಗಡೆಗೊಳಿಸಿದ ಹೇಳಿಕೆಯಲ್ಲಿ 67 ವರ್ಷದ ಎಡುಲ್ಜಿ ಹೇಳಿದ್ದಾರೆ.



ವೀರೇಂದ್ರ ಸೆಹ್ವಾಗ್



ಅರವಿಂದ ಡಿಸಿಲ್ವಾ



ಡಯಾನಾ ಎಡುಲ್ಜಿ

ಆಧುನಿಕ ಕ್ರಿಕೆಟ್‌ನ ಸ್ಫೋಟಕ ಶೈಲಿಯ ಬ್ಯಾಟರ್‌ಗಳಲ್ಲಿ ಒಬ್ಬರಾಗಿರುವ ಸೆಹ್ವಾಗ್ ಅವರು 1999 ರಿಂದ 2013ರ ವರೆಗೆ ರಾಷ್ಟ್ರೀಯ ತಂಡದಲ್ಲಿ ಆಡಿದ್ದರು. 104 ಟೆಸ್ಟ್‌ಗಳನ್ನು ಆಡಿರುವ ಅವರು 23 ಶತಕಗಳನ್ನು ಒಳಗೊಂಡಂತೆ 8,586 ರನ್ ಪೇರಿಸಿದ್ದಾರೆ. 2008 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ದ ಚೆನ್ನೈನಲ್ಲಿ ಅವರು ಗಳಿಸಿದ್ದ 319 ರನ್‌ಗಳು, ಭಾರತದ ಪರ ಟೆಸ್ಟ್‌ನಲ್ಲಿ ದಾಖಲಾದ ಗರಿಷ್ಠ ಸ್ಕೋರ್ ಎನಿಸಿದೆ.

251 ಏಕದಿನ ಪಂದ್ಯಗಳಲ್ಲಿ ಆಡಿ 8,273 ರನ್ ಪೇರಿಸಿದ್ದು, 94 ವಿಕೆಟ್‌ಗಳನ್ನೂ ಪಡೆದಿದ್ದಾರೆ. 2011 ರಲ್ಲಿ ವೆಸ್ಟ್ ಇಂಡೀಸ್ ಎದುರು ಇಂದೋರ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಅವರು ಗಳಿಸಿದ್ದ 219 ರನ್‌ಗಳು ಏಕದಿನ ಕ್ರಿಕೆಟ್‌ನಲ್ಲಿ ಮೂರನೇ ಅತಿದೊಡ್ಡ ಇನಿಂಗ್ಸ್ ಆಗಿದೆ.

‘ನನಗೆ ಈ ಗೌರವ ನೀಡಿರುವ ಐಸಿಸಿ ಹಾಗೂ ತೀರ್ಪುಗಾರರಿಗೆ ಧನ್ಯವಾದ ಹೇಳಲು ಬಯಸುತ್ತೇನೆ’ ಎಂದು 45 ವರ್ಷದ ಸೆಹ್ವಾಗ್ ಪ್ರತಿಕ್ರಿಯಿಸಿದ್ದಾರೆ.

1996ರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶ್ರೀಲಂಕಾ ತಂಡ ಟ್ರೋಫಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅರವಿಂದ ಡಿಸಿಲ್ವಾ ಅವರು ಸುದೀರ್ಘ 19 ವರ್ಷ (1984–2003) ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದ್ದಾರೆ.

93 ಟೆಸ್ಟ್ ಪಂದ್ಯಗಳಿಂದ 6,361 ರನ್‌ಗಳು ಹಾಗೂ 308 ಏಕದಿನ ಪಂದ್ಯಗಳಿಂದ 9,284 ರನ್‌ಗಳನ್ನು ಕಲೆಹಾಕಿದ್ದಾರೆ. 1996ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಜೇಯ 107 ರನ್ ಗಳಿಸಿದ್ದರು.

ಪಾಕ್ ಬೌಲಿಂಗ್ ಕೋಚ್ ಹುದ್ದೆ ತೊರೆದ ಮಾರ್ಕೆಲ್



ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಬೌಲಿಂಗ್ ಕೋಚ್ ಆಗಿದ್ದ ದಕ್ಷಿಣ ಆಫ್ರಿಕಾದ ಮಾಜಿ ವೇಗಿ ಮಾರ್ನ್ ಮಾರ್ಕೆಲ್ ಅವರು ಸೋಮವಾರ ಹುದ್ದೆ ತ್ಯಜಿಸಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಪಾಕ್ ತಂಡದ ಅಭಿಯಾನ ಕೊನೆಗೊಂಡ ಎರಡು ದಿನಗಳ ಬಳಿಕ ಈ ಬೆಳವಣಿಗೆ ನಡೆದಿದೆ. ಕೋಲ್ಕತ್ತದಲ್ಲಿ ಶನಿವಾರ ನಡೆದಿದ್ದ ಕೊನೆಯ ಲೀಗ್ ಪಂದ್ಯದಲ್ಲಿ ಪಾಕ್ ತಂಡ ಇಂಗ್ಲೆಂಡ್ ಎದುರು 93 ರನ್‌ಗಳಿಂದ ಸೋತಿತ್ತು. ಬಾಬರ್ ಅಜಂ ಬಳಗ ಒಂಬತ್ತು ಪಂದ್ಯಗಳಲ್ಲಿ ಐದರಲ್ಲಿ ಪರಾಭವಗೊಂಡು, ಸೆಮಿಫೈನಲ್ ಪ್ರವೇಶಿಸಲು ವಿಫಲವಾಗಿತ್ತು.

ಮಾರ್ಕೆಲ್ ಅವರು ಜೂನ್ ತಿಂಗಳಲ್ಲಿ ಪಾಕ್ ತಂಡದ ಬೌಲಿಂಗ್ ಕೋಚ್ ಆಗಿ ನೇಮಕಗೊಂಡಿದ್ದರು. ಅವರು ಪಿಸಿಬಿ ಜತೆ ಆರು ತಿಂಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದ್ದರು.

‘ಹೊಸ ಬೌಲಿಂಗ್ ಕೋಚ್‌ಅನ್ನು ಮುಂದಿನ ದಿನಗಳಲ್ಲಿ ನೇಮಕ ಮಾಡಲಾಗುವುದು‘ ಎಂದು ಪಿಸಿಬಿ ತಿಳಿಸಿದೆ. ಪಾಕ್ ತಂಡ ಡಿ.14 ರಿಂದ ಜ.7ರ ವರೆಗೆ ಆಸ್ಟ್ರೇಲಿಯಾ ಪ್ರವಾಸ ಮಾಡಲಿದ್ದು, ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಡಲಿದೆ.

ನಾಯಕತ್ವ ತ್ಯಜಿಸಲು ಒತ್ತಾಯ: ಬಾಬರ್ ಆಜಂ ಅವರು ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕತ್ವ ತ್ಯಜಿಸಿ, ಬ್ಯಾಟಿಂಗ್‌ನತ್ತ ಗಮನ ಹರಿಸಬೇಕು ಎಂದು ಪಾಕ್‌ನ ಮಾಜಿ ಕ್ರಿಕೆಟಿಗರಾದ ಶೋಯೆಬ್ ಮಲಿಕ್, ಕಮ್ರಾನ್ ಅಕ್ಮಲ್ ಮತ್ತು ಅಬ್ದುಲ್ ರಜಾಕ್ ಒತ್ತಾಯಿಸಿದ್ದಾರೆ.

ಎಚ್‌ಎಎಲ್ ತಂಡ ಜಯಭೇರಿ

ಬೆಂಗಳೂರು: ಲಕ್ಪಾ ನಾರ್ಬು ಶೆರ್ಪಾ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಎಚ್‌ಎಎಲ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0ಯಿಂದ ರೆಬೆಲ್ಸ್ ತಂಡದ ವಿರುದ್ಧ ಗೆಲುವು ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 3–2ರಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡವು 3–2ರಿಂದ ಎಫ್‌ಸಿ ಡೆಕ್ಕನ್ ತಂಡದ ಎದುರು ಜಯ ಸಾಧಿಸಿತು.

ಕ್ರಿಕೆಟ್ ಸೇರ್ಪಡೆ: ಐಒಸಿ ಜತೆ ಎಎಸ್‌ಒಐಎಫ್ ಚರ್ಚೆ

ಜಿನೇವಾ (ಎಪಿ): 2028 ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಒಳಗೊಂಡಂತೆ ಹೊಸ ಕ್ರೀಡೆಗಳನ್ನು ಸೇರಿಸುವುದರಿಂದ ಆಗುವ ಪರಿಣಾಮಗಳ ಬಗ್ಗೆ ಚರ್ಚಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಜತೆ ತುರ್ತು ಸಭೆ ನಡೆಸಲು ದಿ ಅಸೋಸಿಯೇಷನ್ ಆಫ್ ಸಮ್ಮರ್ ಒಲಿಂಪಿಕ್ ಇಂಟರ್‌ನ್ಯಾಷನಲ್ ಫೆಡರೇಷನ್ (ಎಎಸ್‌ಒಐಎಫ್) ನಿರ್ಧರಿಸಿದೆ.

ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೆ ಟಿ20 ಕ್ರಿಕೆಟ್, ಸ್ಕ್ವಾಷ್, ಬೇಸ್‌ಬಾಲ್/ಸಾಫ್ಟ್‌ಬಾಲ್, ಲಕ್ರೋಸ್ ಮತ್ತು ಫ್ಲ್ಯಾಗ್ ಫುಟ್‌ಬಾಲ್ ಆಟಗಳನ್ನು ಸೇರ್ಪಡೆಗೊಳಿಸಲು ಕಳೆದ ತಿಂಗಳು ಮುಂಬೈನಲ್ಲಿ ನಡೆದಿದ್ದ ಐಒಸಿಯ 141ನೇ ಅಧಿವೇಶನದಲ್ಲಿ ತೀರ್ಮಾನಿಸಲಾಗಿತ್ತು.

ಒಲಿಂಪಿಕ್ ಕೂಟಕ್ಕೆ ಕ್ರೀಡೆಗಳ ಸಂಖ್ಯೆಯನ್ನು 36ಕ್ಕೆ ಹೆಚ್ಚಿಸಿರುವುದು ‘ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ’ ಎಂದು ಎಎಸ್‌ಒಐಎಫ್ ಆಡಳಿತ ಸಮಿತಿ ತಿಳಿಸಿದೆ.


ಹೊಸ ಕ್ರೀಡೆಗಳ ಸೇರ್ಪಡೆಯಿಂದ ಹಾಲಿ ಇರುವ ಕ್ರೀಡೆಗಳಿಗೆ ನೀಡಿರುವ ಕೋಟಾಗಳು ಮತ್ತು ಆದಾಯ ಹಂಚಿಕೆಯ ವೇಳೆ ಸಿಗುವ ಪಾಲು ಕಡಿಮೆಯಾಗಬಹುದು ಎಂಬುದು ಕೆಲವು ಕ್ರೀಡಾ ಫೆಡರೇಷನ್‌ಗಳ ಆತಂಕ.

2021ರ ಟೋಕಿಯೊ ಒಲಿಂಪಿಕ್ ಕೂಟದ ಆದಾಯ ಹಂಚಿಕೆಯ ವೇಳೆ ಕೆಲವು ಕ್ರೀಡಾ ಫೆಡರೇಷನ್‌ಗಳು ₹ 108 ಕೋಟಿಯಿಂದ ₹ 144 ಕೋಟಿವರೆಗಿನ ಮೊತ್ತ ಪಡೆದುಕೊಂಡಿದ್ದವು.

ಜೊಕೊವಿಚ್ ಅಗ್ರಸ್ಥಾನ ಅಬಾಧಿತ

ಟುರಿನ್, ಇಟಲಿ (ಎಪಿ): ಸರ್ಬಿಯದ ನೊವಾಕ್ ಜೊಕೊವಿಚ್ ಅವರು 2023ರ ಋತುವನ್ನು ಎಟಿಪಿ ವಿಶ್ವ ಟೆನಿಸ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದೊಂದಿಗೆ ಕೊನೆಗೊಳಿಸಲಿದ್ದಾರೆ.

ವರ್ಷಾಂತ್ಯದವರೆಗೂ ಅಗ್ರಸ್ಥಾನ ಖಚಿತಪಡಿಸಿಕೊಳ್ಳಲು ಜೊಕೊವಿಚ್ ಅವರಿಗೆ ಒಂದು ಗೆಲುವಿನ ಅಗತ್ಯವಿತ್ತು. ಇಲ್ಲಿ ನಡೆಯುತ್ತಿರುವ ಎಟಿಪಿ ಫೈನಲ್ಸ್ ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು 7–6, 6–7, 6–3 ರಿಂದ ಹೋಲ್ಗರ್ ರೂನ್ ಅವರನ್ನು ಮಣಿಸಿದರು.



ಟ್ರೋಫಿಯೊಂದಿಗೆ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ


36 ವರ್ಷದ ಜೊಕೊವಿಚ್ ದಾಖಲೆಯ ಎಂಟನೇ ಬಾರಿ ವರ್ಷಾಂತ್ಯಕ್ಕೆ ಅಗ್ರಸ್ಥಾನ ಕಾಯ್ದುಕೊಂಡ ಸಾಧನೆ ಮಾಡಿದ್ದಾರೆ. ಅಗ್ರ ರ‍್ಯಾಂಕ್‌ನ ಆಟಗಾರನಿಗೆ ನೀಡುವ ಟ್ರೋಫಿಯನ್ನು ಎಟಿಪಿ ಅಧ್ಯಕ್ಷ ಆಂಡ್ರಿಯಾ ಗಾವ್ಡೆನ್ಸಿ ಅವರು ಸೋಮವಾರ ಜೊಕೊವಿಚ್‌ಗೆ ಪ್ರದಾನ ಮಾಡಿದರು.

ಜಪಾನ್ ಓಪನ್: ಪ್ರಣಯ್, ಸಿಂಧು ಮೇಲೆ ನಿರೀಕ್ಷೆ

ಕುಮಾಮೊಟೊ, ಜಪಾನ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆಗಳಾದ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯಸೇನ್ ಮಂಗಳವಾರ ಇಲ್ಲಿ ಆರಂಭವಾಗಲಿರುವ ಜಪಾನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ.

ಏಷ್ಯನ್ ಕ್ರೀಡಾಕೂಟದಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಐತಿಹಾಸಿಕ ಕಂಚು ಗೆದ್ದ ಬಳಿಕ ಬೆನ್ನುನೋವಿಗಾಗಿ ವಿಶ್ರಾಂತಿ ಪಡೆದಿದ್ದ 31 ವರ್ಷದ ಪ್ರಣಯ್, ಕಳೆದ ತಿಂಗಳು ನಡೆದ ಡೆನ್ಮಾರ್ಕ್ ಓಪನ್ ಮತ್ತು ಫ್ರೆಂಚ್ ಓಪನ್ ಟೂರ್ನಿಯಿಂದ ಹಿಂದೆ ಸರಿದಿದ್ದರು.

ಮುಂದಿನ ವರ್ಷದ ಒಲಿಂಪಿಕ್ ಅರ್ಹತಾ ಅವಧಿಯು 2023 ಮೇ 1ರಿಂದ 2024ರ ಏಪ್ರಿಲ್ 28ರವರೆಗೆ ಚಾಲ್ತಿಯಲ್ಲಿರುವ ಕಾರಣ, ಈ ಟೂರ್ನಿಯಲ್ಲಿ ಆಟಗಾರರಿಗೆ ತಮ್ಮ ರ‍್ಯಾಂಕಿಂಗ್ ಉತ್ತಮ ಪಡಿಸಲು ಅವಕಾಶವಿದೆ. ವಿಶ್ವ ರ‍್ಯಾಂಕಿಂಗ್‌ನ ಟಾಪ್ 16 ಆಟಗಾರರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ.



ಎಚ್‌.ಎಸ್‌. ಪ್ರಣಯ್



ಪಿ.ವಿ. ಸಿಂಧು

ಪ್ರಸ್ತುತ 8ನೇ ರ‍್ಯಾಂಕ್ ಹೊಂದಿರುವ ಪ್ರಣಯ್ ಸುರಕ್ಷಿತ ಸ್ಥಾನದಲ್ಲಿದ್ದರೆ, ಸೇನ್ ಮತ್ತು ಶ್ರೀಕಾಂತ್ ಕ್ರಮವಾಗಿ 17 ಮತ್ತು 23ನೇ ಕ್ರಮಾಂಕದಲ್ಲಿದ್ದಾರೆ.

ಲಕ್ಷ್ಯ ಸೇನ್ ಅವರು ಜುಲೈನಲ್ಲಿ ಕೆನಡಾ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆದ ಬಳಿಕ ಲಯವನ್ನು ಕಳೆದುಕೊಂಡಿದ್ದು, ಈ ಟೂರ್ನಿಯಲ್ಲಿ ಮತ್ತೆ ಪುಟಿದೇಳುವ ವಿಶ್ವಾಸದಲ್ಲಿದ್ದಾರೆ. ಇಲ್ಲಿ ಅವರು ಮೂರನೇ ಶ್ರೇಯಾಂಕದ ಆಟಗಾರ ಕೊಡೈ ನರೋಕಾ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಪ್ರಿಯಾಂಶು ರಾಜಾವತ್ ಅವರೂ ಉತ್ತಮ ಪ್ರದರ್ಶನ ವಿಶ್ವಾಸದಲ್ಲಿದ್ದಾರೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ವಿರುದ್ಧ ಸೆಣಸಾಡುವರು. ಎಂಟನೇ ಕ್ರಮಾಂಕದ ಸಿಂಧು ಅವರು ಎದುರಾಳಿ ಆಟಗಾರ್ತಿ ವಿರುದ್ಧ 6–1ರ ಗೆಲುವಿನ ದಾಖಲೆ ಹೊಂದಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಭಾರತದ ಜೋಡಿ ಸಾತ್ವಿಕ್‌ರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ಎಲು ಚಿಂಗ್ ಯಾವೊ ಮತ್ತು ಯಾಂಗ್ ಪೊ ಹಾನ್ ವಿರುದ್ಧ ಅಭಿಯಾನ ಆರಂಭಿಸುವರು.